# ಸಮಾಜ ವಿಜ್ಞಾನ I

## SOCIAL SCIENCE - I

### ತರಗತಿ IX

### ಭಾಗ - 2

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಕರು
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ**

**2024**

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**ಸಮಾಜ ವಿಜ್ಞಾನ I - ಭಾಗ 2**

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@gmail.com, Phone : 0471 - 2341883,
Typesetting and Layout : SCERT
First Edition : 2024
*Printed at* : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ಮಕ್ಕಳೇ,

ಸಮಕಾಲೀನ ಸಮಾಜವನ್ನು ತಿಳಿದುಕೊಳ್ಳಲು ಹಾಗೂ ಫಲಪ್ರದವಾಗಿ ಹಸ್ತಕ್ಷೇಪ ಮಾಡುವ ಮೂಲಕ ಜವಾಬ್ದಾರಿಯುತ ಪೌರರಾಗಿ ಜೀವನವನ್ನು ಸಾಗಿಸಲು ನಮಗೆ ಸಾಧ್ಯವಾಗಬೇಕು. ಇದಕ್ಕೆ ಸಮಾಜವಿಜ್ಞಾನ ಕಲಿಕೆಯು ನಮಗೆ ಸಹಾಯಕವಾಗುತ್ತದೆ. ಚೋಳನಾಡಿನಿಂದ ದೆಹಲಿಗೆ ಎಂಬ ಆರನೇಯ ಅಧ್ಯಾಯದಲ್ಲಿ ಚೋಳರಾಜ್ಯದಿಂದ ದೆಹಲಿಯ ಸಲ್ತಾನತ್‌ವರೆಗಿನ ಇತಿಹಾಸವನ್ನು ಪ್ರತಿಪಾದಿಸಲಾಗಿದೆ. ಸಂಸ್ಥೆಗಳ ಮೂಲಕ ಪ್ರಜಾಪ್ರಭುತ್ವದ ವ್ಯಾಪಿಸುವಿಕೆ ಎಂಬ ಏಳನೇಯ ಅಧ್ಯಾಯದಲ್ಲಿ ವಿವಿಧ ಸಂಸ್ಥೆಗಳ ಮೂಲಕ ಪ್ರಜಾಪ್ರಭುತ್ವದ ವ್ಯಾಪಿಸುವಿಕೆಯ ಕುರಿತು ಚರ್ಚಿಸಲಾಗಿದೆ. ಲಿಂಗ ತಾರತಮ್ಯವಿಲ್ಲದ ಸಮಾಜದೆಡೆಗೆ ಎಂಬ ಎಂಟನೇಯ ಅಧ್ಯಾಯದಲ್ಲಿ ಲಿಂಗಭೇದ, ಲಿಂಗಸ್ಥಾನಮಾನ, ಕರ್ತವ್ಯಗಳು, ಸಂವಿಧಾನದಲ್ಲಿ ಲಿಂಗಪದವಿ ಮೊದಲಾದ ಆಶಯಗಳನ್ನು ಚರ್ಚಿಸಲಾಗಿದೆ. ಪ್ರಧಾನ ಮಾಹಿತಿ ಮೂಲಗಳನ್ನು ಪರಿಚಯಿಸಿಕೊಂಡು, ವಿಶ್ಲೇಷಿಸಿಕೊಂಡು ಹಾಗೂ ಅವುಗಳನ್ನುವ್ಯಾಖ್ಯಾನಿಸಿ, ಜ್ಞಾನ ನಿರ್ಮಾಣವಾಗುವ ರೀತಿಯಲ್ಲಿ ಈ ಪಾಠಭಾಗಗಳನ್ನು ಕ್ರಮೀಕರಿಸಲಾಗಿದೆ. ವೈಜ್ಞಾನಿಕ – ತಾಂತ್ರಿಕ ಸೌಕರ್ಯಗಳನ್ನು ಕಲಿಕೆಯ ಪ್ರಕ್ರಿಯೆಯಲ್ಲಿ ಉಪಯೋಗ ಪಡಿಸಿಕೊಳ್ಳುವ ಅವಕಾಶಗಳನ್ನೂ ಒದಗಿಸಲಾಗಿದೆ. ಪ್ರಜಾಪ್ರಭುತ್ವ, ಜಾತ್ಯತೀತ ಮೌಲ್ಯಗಳೊಂದಿಗೆ ವೈಜ್ಞಾನಿಕ ಮತ್ತು ವೈವಿಧ್ಯತೆಗಳನ್ನು ಅಳವಡಿಸುವ ಮನೋಭಾವವು ಇದರ ಮೂಲಕ ಮಕ್ಕಳಲ್ಲಿ ರೂಪುಗೊಳ್ಳಬೇಕಾಗಿದೆ.

ಶುಭಹಾರೈಕೆಗಳೊಂದಿಗೆ,

**ಡಾ. ಜಯಪ್ರಕಾಶ್ ಆರ್. ಕೆ.**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ. ಕೇರಳ

# TEXT BOOK DEVELOPMENT COMMITTEE

## Advisor

**Dr. K. N. Ganesh**
Chairman, Kerala Council for
Historical Research

## Chairman

**Dr. Shivadasan P.**
Senior Professor, Department of History
Calicut University

## Experts

**Dr. K. K. Radha**
Principal (Rtd)
Govt. Womens College
Thiruvananthapuram

**Dr. Baiju K.C.**
Professsor & Vice Chancellor (in-charge)
Dept. of Economics
Central University, Kasaragod

**Dr. Pradeepkumar K.**
Associate Professor & Head
Department of Political Science
Govt. College Attingal, Thiruvananthapuram

## Members

**Bino P. Jose**
Assistant Professor
St. Domenic College, Kanhirapalli, Kottayam

**Dr. Nandakumar B.V.**
Asst. Professor,
S.N. College, Varkala Thiruvananthapuram

**Yoosaf Kumar S. M.**
Principal, G.H.S.S. Chithara, Kollam

**Aju S.**
H.S.S.T., History
G.H.S.S. Vechoochira Colony, Pathanamthittam

**Pradeepan T.**
HSST, History, G.H.S.S. Palayad, Kannur

**Najim A.**
Principal,
G.H.S.S. Kadaikkal, Kollam

**Rajan M.**
H.S.T., Social Science
G.H.S. Nagalasseri, Palakkad

**Shreejith M. Muthedath**
H.S.T., Social Science
C.N.N. G.H.S. Cherpp, Trissur

**Smt. Sandhyarani P. S.**
H.S.T., Social Science
G.H.S.S. Anjal West,
Kollam

---

## Kannada Version

*Language Expert*

**Vishalaksha M.**
Rtd. Teacher
SGKHS Kudlu, Kasaragod

*Subject Expert*

**Narayana Delampady**
Headmaster,
GHS Udyavara.

*Participants*

**Ganesh Kumar S.**
HST (SS), SGKHS, Kudlu

**Sanjeeva M.**
Headmaster, GVHSS Karadka

**Raviraj**
HST (SS), GHSS Adoor

**Bhanu A.C.**
HST (SS), GVHSS Mulleria.

**Raghava M.N.**
HST (SS), GHSS Mogral Puthur

---

## Academic Cordinator

**Suresh Kumar S.**
Research Officer, SCERT, Kerala

**Kerala Council of Educational Research and Training (SCERT) Kerala**
**Vidyabhavan, Poojappura, Thiruvannathapuram - 695 012**

# ಅನುಕ್ರಮಣಿಕೆ


| | | |
|---|---|---|
| 06 | ಚೋಳನಾಡಿನಿಂದ ದೆಹಲಿಗೆ | 111-128 |
| 07 | ಸಂಸ್ಥೆಗಳ ಮೂಲಕ ಪ್ರಜಾಪ್ರಭುತ್ವದ ವ್ಯಾಪಿಸುವಿಕೆ | 129-150 |
| 08 | ಲಿಂಗ ತಾರತಮ್ಯವಿಲ್ಲದ ಸಮಾಜದೆಡೆಗೆ | 151-165 |


**ಈ ಪಾಠಪುಸ್ತಕದಲ್ಲಿ ಕಲಿಕೆಯ ಸೌಕರ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಉಪಯೋಗಿಸಲಾಗಿದೆ.**


ಹೆಚ್ಚಿನ ಓದಿಗಾಗಿ – ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿಲ್ಲ.


ಟಿಪ್ಪಣಿ ತಯಾರಿ


ಕಲಿಕಾ ಚಟುವಟಿಕೆ


ಕೊಲಾಷ್ ತಯಾರಿ


ಮೌಲ್ಯಮಾಪನ ಪ್ರಶ್ನೆಗಳು


ಪ್ಲಕಾರ್ಡ್ ತಯಾರಿ


ಮುಂದುವರಿದ ಚಟುವಟಿಕೆಗಳು


ಚರ್ಚಿಸೋಣ

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ** ;

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಕಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.



# 6 ಚೋಳನಾಡಿನಿಂದ ದೆಹಲಿಗೆ

*"ತೆರಿಗೆ ಪಾವತಿಸಬೇಕಾದ ಭೂಮಿ ರಾಜಕೇಸರಿ ಎಂಬ ಆದವಲ್ಲವನ ಹೆಸರಿನಲ್ಲಿರುವ ಮರಕ್ಕಾಲ್ ನಿಂದ ಅಳೆದು ಭತ್ತವಾಗಿ ಅಥವಾ ಚಿನ್ನವಾಗಿ, ಹಣವಾಗಿ ತೆರಿಗೆಯನ್ನು ಪಾವತಿಸಬೇಕಾಗಿಯೂ... ಅರುಳ್ ಮೊಳಿದೇವ ವಳನಾಡ್ ಎಂದೂ ಕರೆಯಲ್ಪಡುವ ತೇನ್ ಕಡುವಾಯಿಯ ಇಂಕನಾಡಿನಲ್ಲಿರುವ ಪುಲ್ಲೈಯೂರ್ ಗ್ರಾಮ... ಜೈನ ಕ್ಷೇತ್ರ ಮತ್ತು ಗುರುಗಳು ಒಳಗೊಂಡಿರುವುದಾಗಿದೆ. ಹನ್ನೆರಡು ಸಾವಿರದ ಐನೂರ ಮೂವತ್ತು ಕಲವೂ, ಎರಡು ತುಣಿಯೂ, ಒಂದು ಕರುಣಿಯೂ, ಒಂದು ನಾಳಿಯೂ ಭತ್ತವನ್ನು ಒಂದು ರಾಜಕೇಸರಿಯ ಹೆಸರಿನಲ್ಲಿರುವ ಮರಕಾಲಿನಿಂದ ಅಳೆದು ತೆರಿಗೆಯಾಗಿ ಪಾವತಿಸಬೇಕು."*

*South Indian Inscriptions* (Vol. 2., pages 47-48)

ಮೇಲೆ ನೀಡಿರುವುದು ತಂಜಾವೂರಿನ ಬೃಹದೀಶ್ವರ ಕ್ಷೇತ್ರದ ಎರಡನೇ ಅಂತಸ್ತಿನ ದಕ್ಷಿಣ ಭಾಗದ ಗೋಡೆಯಲ್ಲಿ ಕಂಡುಬರುವ ರಾಜರಾಜಚೋಳನ ಬರಹದ ಸ್ವಲ್ಪ ಭಾಗವಾಗಿದೆ. ಇದರಲ್ಲಿ ಏನನ್ನು ವಿವರಿಸಲಾಗಿದೆ ಎಂದು ನೋಡೋಣ. ರಾಜನ ಹೆಸರಿರುವ ಮರಕ್ಕಾಲಿನಲ್ಲಿ (ಅಳತೆಯ ಪಾತ್ರೆ) ಅಳೆದು ಭತ್ತ, ಚಿನ್ನ ಅಥವಾ ಹಣದ ರೂಪದಲ್ಲಿ ತೆರಿಗೆಯನ್ನು ಪಾವತಿಸಬೇಕು. ತೇನ್ ಕಡುವಾಯ್ ಪ್ರದೇಶದ ಭಾಗವಾದ ಇಂಕನಾಡಿನ ಪಾಲಯೂರು ಗ್ರಾಮದಲ್ಲಿ ಅಳತೆ ಮಾಡಿದ ಪ್ರಕಾರ ಇಷ್ಟೂ ಸ್ಥಳದಲ್ಲಿ ಜೈನ ಕ್ಷೇತ್ರ ಹಾಗೂ ಜೈನ ಗುರುಗಳ ಸಮೂಹವೂ ಒಳಪಡುತ್ತದೆ. 12530 ಕಲ, ಎರಡು ತುಣಿ, ಒಂದು ಕರುಣಿ (ಧಾನ್ಯವನ್ನು ಅಳೆಯುವ ಅಳತೆಯ ಹೆಸರುಗಳು) ಒಂದು ನಾಳಿ ಅಳತೆಯಲ್ಲಿ ಇಲ್ಲಿಂದ ಭತ್ತವು ಲಭಿಸಬೇಕು. ಇದನ್ನು ರಾಜಕೇಸರಿಯಾದ ಆದವಲ್ಲನ (ರಾಜರಾಜಚೋಳ) ಹೆಸರಿರುವ ಮರಕ್ಕಾಲಿನಿಂದ ಅಳೆಯಬೇಕು.

ಸಿ.ಇ. 9ನೇ ಶತಮಾನದಿಂದ 13ನೇ ಶತಮಾನದ ವರೆಗೆ ದಕ್ಷಿಣ ಭಾರತದಲ್ಲಿ ಆಡಳಿತ ನಡೆಸಿದ ಚೋಳ ರಾಜ್ಯದ ಕುರಿತು ಈ ಲಿಖಿತ (ಶಾಸನ)ದಲ್ಲಿ ವಿವರಿಸಲಾಗಿದೆ. ಚೋಳ ರಾಜ್ಯದ ಆರ್ಥಿಕ ಸ್ಥಿತಿಯ ಕುರಿತು ಇದರಲ್ಲಿ ಪರಾಮರ್ಶಿಸಲಾಗಿದೆ. ಯಾವೆಲ್ಲ ಮಾಹಿತಿಗಳು ನಮಗೆ ಇದರಿಂದ ಲಭಿಸುತ್ತವೆ?

- ..........................................................................
- ..........................................................................
- ..........................................................................

ತಂಜಾವೂರಿನ ಸುತ್ತಲಿದ್ದ ಚೋಳ ಮಂಡಲವು ಅವರ ಕೇಂದ್ರವಾಗಿತ್ತು. ನೀವು ಹಿಂದಿನ ತರಗತಿಗಳಲ್ಲಿ ಪರಿಚಯಿಸಿಕೊಂಡಿರುವ ಪಲ್ಲವರಿಂದ ಚೋಳರು ಅಧಿಕಾರವನ್ನು ವಶಪಡಿಸಿಕೊಂಡರು. ಆ ಕಾಲದಲ್ಲಿ ದಕ್ಷಿಣ ಭಾರತದ ಬಹುಭಾಗವೂ ಚೋಳ ರಾಜರ ಅಧೀನದಲ್ಲಿತ್ತು. ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ಸ್ಥಿರತೆಯನ್ನು ಗಳಿಸಲು ಇದು ಸಹಾಯಕವಾಯಿತು.




ನೀಡಿರುವ ಭೂಪಟವನ್ನು ನಿರೀಕ್ಷಣೆ ಮಾಡಿ ಪ್ರಸ್ತುತ ದಕ್ಷಿಣ ಭಾರತದ ಯಾವೆಲ್ಲ ಪ್ರದೇಶಗಳು ಚೋಳ ರಾಜ್ಯದಲ್ಲಿ ಒಳಗೊಂಡಿದ್ದವು ಎಂದು ಕಂಡುಹಿಡಿದು ಪಟ್ಟಿ ಮಾಡಿರಿ.

ಚೋಳ ರಾಜ್ಯದ ಸಂಪತ್ ಸಮೃದ್ಧಿಗೆ ಹೆಚ್ಚು ಸಹಾಯಕವಾದ ನದಿ ಯಾವುದು ಎಂದು ಭೂಪಟದ ಸಹಾಯದಿಂದ ಕಂಡುಹಿಡಿಯಲು ಸಾಧ್ಯವೇ? ಒಂದು ನಾಡಿನ ಪ್ರಗತಿಗೆ ನದಿಯು ಯಾವೆಲ್ಲಾ ರೀತಿಯಲ್ಲಿ ಸಹಾಯಕವಾಗಿದೆ?

### ತಮಿಳಗಂನ ಭತ್ತದ ಕಣಜ

ತಂಜಾವೂರು ತಮಿಳುನಾಡಿನ ಹೃದಯಭಾಗದಲ್ಲಿರುವ ವಿಶಾಲವಾದ ಪ್ರದೇಶವಾಗಿದೆ. ನದಿಗಳು ಮತ್ತು ಕಾಲುವೆಗಳು ಈ ಪ್ರದೇಶವನ್ನು ಕೃಷಿಯೋಗ್ಯವಾದ ಪ್ರದೇಶವಾಗಿ ಬದಲಾಯಿಸಿತು. ಭತ್ತದ ಬಯಲುಗಳು, ತೆಂಗು, ಬಾಳೆ, ಹಲಸು ಎಂಬಿವುಗಳ ತೋಟಗಳು ಧಾರಾಳವಾಗಿರುವ ಈ ಪ್ರದೇಶವನ್ನು ತಮಿಳುನಾಡಿನ ಭತ್ತದ ಕಣಜ ಎಂದು ಕರೆಯುತ್ತಿದ್ದರು.

ನೀವು ಕಂಡುಕೊಂಡಂತೆ ಕಾವೇರಿ ನದಿಯ ತಪ್ಪಲಲ್ಲಿ ಚೋಳ ರಾಜ್ಯವು ನೆಲೆನಿಂತಿತ್ತು. ಆದುದರಿಂದಲೇ ಈ ಪ್ರದೇಶವು ವಿವಿಧ ಸಂಪನ್ಮೂಲಗಳಿಂದ ಸಮೃದ್ಧವಾಗಿತ್ತು. ಜನರ ಪ್ರಧಾನ ಕಸುಬು ಕೃಷಿಯಾಗಿದ್ದುದರಿಂದ ಹೆಚ್ಚಿನ ಜನರು ಗ್ರಾಮಗಳಲ್ಲಿ ವಾಸವಾಗಿದ್ದರು. ಅವರು ಆ ಪ್ರದೇಶಗಳಲ್ಲಿ ಆಹಾರ ಬೆಳೆಗಳು, ಹಣ್ಣು ಹಂಪಲುಗಳು, ದ್ವಿದಳ ಧಾನ್ಯಗಳು, ಕಬ್ಬು, ವೀಳ್ಯದೆಲೆ, ಅಡಿಕೆ, ಶುಂಠಿ, ಅರಸಿನ ಮತ್ತು ವಿವಿಧ ರೀತಿಯ ಹೂಗಳನ್ನು ಕೃಷಿ ಮಾಡುತ್ತಿದ್ದರು. ಕೃಷಿಗೆ ನೀರಾವರಿ ವ್ಯವಸ್ಥೆಯ ಪ್ರಾಧಾನ್ಯವನ್ನು ತಿಳಿದುಕೊಂಡ ಆಡಳಿತಾಧಿಕಾರಿಗಳು ವಿವಿಧ ರೀತಿಯ ನೀರಾವರಿ ಸೌಕರ್ಯಗಳನ್ನು ಒದಗಿಸಿದರು. ಕೊಳಗಳು, ಜಲಸಂಗ್ರಹಾಗಾರಗಳು, ಕಾಲುವೆಗಳು, ಬಾವಿಗಳು, ಇವುಗಳಲ್ಲಿ ಒಳಗೊಂಡಿತ್ತು. ಇವುಗಳ ಹೊರತಾಗಿ ನದಿಗಳಿಗೆ ಅಡ್ಡವಾಗಿ ತಡೆಯನ್ನು ಕಟ್ಟಿ ನೀರನ್ನು ಸಂಗ್ರಹಿಸಿ ನಿಲ್ಲಿಸಿ, ಅಲ್ಲಿಂದ ಕೃತಕ ಕಾಲುವೆಗಳ ಮೂಲಕ ಚೋಳ ರಾಜ್ಯದ ವಿವಿಧ ಭಾಗಗಳಿಗೆ ನೀರು ಲಭ್ಯವಾಗುವಂತೆ ಮಾಡಿದರು. ಪ್ರಾಕೃತಿಕವಾದ ತೋಡುಗಳು ಇಲ್ಲದ ಪ್ರದೇಶಗಳಲ್ಲಿ ಬೃಹತ್ ಕೆರೆಗಳನ್ನು ನಿರ್ಮಿಸಿ ಅವುಗಳಲ್ಲಿ ಮಳೆನೀರನ್ನು ಸಂಗ್ರಹಿಸಿದರು. ನೀರು ಬತ್ತಿ ಹೋಗದ ರೀತಿಯಲ್ಲಿ ಸಂರಕ್ಷಿಸಲ್ಪಟ್ಟ ಸಂಗ್ರಾಹಕಗಳನ್ನು ಏರಿಪ್ಪಟ್ಟಿ ಎಂದು ಕರೆಯುತ್ತಿದ್ದರು. ಮಾತ್ರವಲ್ಲದೆ ಕೃಷಿಯ ಪ್ರಗತಿಗಾಗಿ ಕೃಷಿಕರಿಗೆ ತೆರಿಗೆಯಲ್ಲಿ ವಿನಾಯಿತಿಗಳನ್ನು ನೀಡಿ ಬಂಜರು ಭೂಮಿಯನ್ನು ಕೃಷಿಯೋಗ್ಯವನ್ನಾಗಿ ಮಾಡಲು ಪ್ರೋತ್ಸಾಹಿಸಲಾಯಿತು. ಕ್ಷೇತ್ರಗಳಿಗೆ ಮತ್ತು ಬ್ರಾಹ್ಮಣರಿಗೆ ಭೂಮಿಯನ್ನು ದಾನ ಮಾಡಿದುದರಿಂದ ಮತ್ತಷ್ಟು ಪ್ರದೇಶಗಳಿಗೆ ಕೃಷಿ ವ್ಯಾಪಿಸಿತು. ಆದರೆ ವಾಸ್ತವವಾಗಿ ಇಂತಹ ಕೃಷಿ ಭೂಮಿಗಳಲ್ಲಿ ಕೃಷಿ ಕೆಲಸ ಮಾಡಿದವರು ಗುಲಾಮರಂತೆ ಜೀವನ ನಡೆಸಿದ ಕೃಷಿ ಕಾರ್ಮಿಕರಾಗಿದ್ದರು.



ಏರಿಪ್ಪಟ್ಟಿ

ಚೋಳ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿವಲಯವು ವಹಿಸಿದ ಪಾತ್ರವನ್ನು ವಿಶ್ಲೇಷಿಸಿರಿ.

ಕೃಷಿಯ ಪ್ರಗತಿಯ ಮೂಲಕ ಗಳಿಸುವ ಮಿಗತೆ ಉತ್ಪಾದನೆಯು ವಾಣಿಜ್ಯಕ್ಕೆ ದಾರಿ ಮಾಡಿಕೊಡುವುದೆಂದು ಹಿಂದಿನ ತರಗತಿಗಳಲ್ಲಿ ನಾವು ಚರ್ಚಿಸಿರುವೆವಲ್ಲವೇ?

ಚೋಳ ರಾಜ್ಯದಲ್ಲಿಯೂ ಆಂತರಿಕ ವಾಣಿಜ್ಯ ಮತ್ತು ದೂರದ ದೇಶಗಳೊಂದಿಗಿನ ಸಮುದ್ರ ವ್ಯಾಪಾರವು ವಿಕಾಸಗೊಂಡಿರುವುದಾಗಿ ಆ ಕಾಲದ ಬರಹಗಳು ಪುರಾವೆಗಳನ್ನೊದಗಿಸುತ್ತವೆ. ಪ್ರಾದೇಶಿಕ ಮಾರುಕಟ್ಟೆಗಳಲ್ಲಿ ಅನೇಕ ಉತ್ಪನ್ನಗಳು ವಿನಿಮಯವಾಗುತ್ತಿದ್ದವು. ನೆಯ್ಗೆಯು ಪ್ರಧಾನ ಉದ್ದಿಮೆಯಾಗಿತ್ತು. ಆ ಕಾಲದಲ್ಲಿ ನೆಯ್ಗೆದಾರರ ಸಂಘಗಳಿದ್ದುವು. ಉತ್ತಮ ದರ್ಜೆಯ ವಸ್ತ್ರ ಉತ್ಪನ್ನಗಳು ಉತ್ತರ ಭಾರತ ಮತ್ತು ಇತರ ಕಡೆಗಳಿಗೆ ರಫ್ತಾಗುತ್ತಿದ್ದುವು. ಕಬ್ಬು ಒಂದು ಪ್ರಧಾನ ವಾಣಿಜ್ಯ ಉತ್ಪನ್ನವಾಗಿತ್ತು. ಕೃಷಿಯ ಹೊರತಾಗಿ ಲೋಹದ ಕೆಲಸವೂ ವಿಕಾಸವನ್ನು ಹೊಂದಿತ್ತು. ದೇವಾಲಯಗಳಲ್ಲಿ ಕಂಡುಬಂದ ವಿಗ್ರಹಗಳು, ಪಾತ್ರೆಗಳು ಇದಕ್ಕೆ ಪುರಾವೆಗಳಾಗಿವೆ. ಚಿನ್ನ, ಬೆಳ್ಳಿ ಇತ್ಯಾದಿಗಳಿಂದ ತಯಾರಿಸುವ ಆಭರಣ ನಿರ್ಮಾಣ, ಕಬ್ಬಿಣದ ಉಪಕರಣಗಳ ನಿರ್ಮಾಣವು ಪ್ರಗತಿ ಹೊಂದಿತ್ತು. ಸಮುದ್ರದಿಂದ ಮುತ್ತು, ಹವಳಗಳನ್ನು ಸಂಗ್ರಹಿಸಿ ವಿದೇಶಕ್ಕೆ ರಫ್ತು ಮಾಡುತ್ತಿದ್ದರು. ಕಾಂಬೋಡಿಯಾದ ವ್ಯಾಪಾರಿ ಸಂಘವೊಂದು ಹನ್ನೊಂದನೆಯ ಶತಮಾನದಲ್ಲಿ ಚೋಳ ರಾಜ್ಯವನ್ನು ಸಂದರ್ಶಿಸಿತ್ತು. ನಾಗಪಟ್ಟಣ, ಮಹಾಬಲಿಪುರಂ, ಕಾವೇರಿಪೂಂಪಟ್ಟಣ, ಶಾಲಿಯೂರ್, ಕೋರ್ ಕೈ ಎಂಬಿವುಗಳು ಆ ಕಾಲದ ಪ್ರಧಾನ ತೀರದೇಶ ವಾಣಿಜ್ಯ ಕೇಂದ್ರಗಳಾಗಿದ್ದವು. ಈಗಿನ ವಿಶಾಖಪಟ್ಟಣ ಬಂದರು ಇರುವ ಪ್ರದೇಶವನ್ನು 'ಕುಲೋತ್ತುಂಗ ಚೋಳ ಪಟ್ಟಣಂ' ಎಂದು ಕರೆಯುತ್ತಿದ್ದರು. ಕುಲೋತ್ತುಂಗ ಚೋಳನು ಅಂದಿನ ಚೋಳ ರಾಜ್ಯದ ಆಡಳಿತಾಧಿಕಾರಿಯಾಗಿದ್ದನು. ನಗರತ್ತಾರ್, ಮಣಿಗ್ರಾಮಂ ಮೊದಲಾದ ಸಿರಿವಂತ ವ್ಯಾಪಾರಿ ಸಂಘಗಳು ಉತ್ತಮ ವ್ಯಾಪಾರ ವ್ಯವಸ್ಥೆಯನ್ನು ನಡೆಸುತ್ತಿದ್ದವು.




ಚೋಳರ ವಾಣಿಜ್ಯ ಶೃಂಖಲೆ

ಭೂಪಟವನ್ನು ನಿರೀಕ್ಷಣೆ ಮಾಡಿ ಚೋಳ ರಾಜ್ಯಕ್ಕೆ ಯಾವೆಲ್ಲಾ ಪ್ರದೇಶಗಳೊಂದಿಗೆ ವಾಣಿಜ್ಯ ಸಂಬಂಧವಿತ್ತು ಎಂಬುದನ್ನು ಕಂಡುಹಿಡಿದು ಪಟ್ಟಿ ಮಾಡಿರಿ.

ಚೋಳರ ರಾಜಧಾನಿಯಾದ ತಂಜಾವೂರಿನಲ್ಲಿ ನೆಲೆನಿಂತಿರುವ ಜಗತ್ಪ್ರಸಿದ್ಧ ದೇವಾಲಯ ಯಾವುದೆಂದು ನಿಮಗೆ ತಿಳಿದಿದೆಯೇ? ಇದು ರಾಜರಾಜಚೋಳನ ಕಾಲದಲ್ಲಿ (985-1014) ನಿರ್ಮಿಸಿದ ಬೃಹದೀಶ್ವರ ದೇವಾಲಯವಾಗಿದೆ. ಆತನ ಉತ್ತರಾಧಿಕಾರಿಯಾದ ಒಂದನೆಯ ರಾಜೇಂದ್ರಚೋಳನ ಕಾಲದಲ್ಲಿ (1014-1044) ಗಂಗೈಕೊಂಡ ಚೋಳ ಪುರದಲ್ಲಿ ದೇವಾಲಯವೊಂದು ನಿರ್ಮಾಣವಾಯಿತು. ಆ ಕಾಲದ ದೇವಾಲಯಗಳು ಅತ್ಯಂತ ಶ್ರೀಮಂತಿಕೆಯಿಂದ ಕೂಡಿದ್ದವು. ಸಂಪದ್ಭರಿತ ಖಜಾನೆಯು ದೇವಾಲಯ ನಿರ್ಮಾಣಕ್ಕೆ ರಾಜರಿಗೆ ಪ್ರಚೋದನೆಯಾಗಿತ್ತು. ದಾನವಾಗಿ ಲಭಿಸಿದ ಭೂಮಿಯಿಂದ ಬರುವ ಆದಾಯ, ಗ್ರಾಮಸಭೆಗಳಿಂದ ಬರುವ ದೇಣಿಗೆಗಳು, ತೆರಿಗೆ ಸಂಗ್ರಹಿಸುವ ಹಕ್ಕು ಇರುವ ಭೂಮಿಯಿಂದ ಸಂಗ್ರಹವಾಗುವ ತೆರಿಗೆಗಳು, ಭಕ್ತರಿಂದ ಸಿಗುವ ಕೊಡುಗೆಗಳು, ಗ್ರಾಮಗಳ ಹಣಕಾಸಿನ ವ್ಯವಹಾರಗಳನ್ನು ನಡೆಸುವ ಸಂಸ್ಥೆಗಳಿಂದ ಲಭಿಸುವ ಸಂಪತ್ತು ಇತ್ಯಾದಿಗಳು ದೇವಾಲಯದ ಆದಾಯ ಮಾರ್ಗಗಳಾಗಿದ್ದುವು. ದೇವಾಲಯಗಳಿಗೆ ಹೊಂದಿಕೊಂಡು ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು ಮೊದಲಾದವುಗಳು ಕಾರ್ಯನಿರ್ವಹಿಸುತ್ತಿದ್ದುವು. ದೇವಾಲಯಗಳ ನಿರ್ಮಾಣ, ಅವುಗಳ ಪರಿಪಾಲನೆ ಇತ್ಯಾದಿಗಳ ಮೂಲಕ ಅನೇಕರಿಗೆ ಉದ್ಯೋಗವು ಲಭಿಸುತ್ತಿತ್ತು. ಕೈಕಸುಬುಗಾರರು, ಕರಕೌಶಲ ಪರಿಣತರು ತಮ್ಮ ಜೀವನ ನಿರ್ವಹಣೆಗಾಗಿ ದೇವಾಲಯಗಳನ್ನು ಆಶ್ರಯಿಸಿದ್ದರು.

ಚೋಳ ರಾಜ್ಯದ ಸಾಮಾಜಿಕ ಆರ್ಥಿಕ ಜೀವನದಲ್ಲಿ ದೇವಾಲಯಗಳು ವಹಿಸಿದ ಪಾತ್ರವನ್ನು ಅವಲೋಕಿಸಿರಿ.

ನಮ್ಮ ನೆರೆದೇಶವಾದ ಶ್ರೀಲಂಕಾ ಮತ್ತು ಇತರ ದೇಶಗಳೊಂದಿಗೆ ಚೋಳರಾಜರು ವಾಣಿಜ್ಯ ಸಂಬಂಧವಿರಿಸಿಕೊಂಡಿದ್ದಾರೆಂದು ತಿಳಿದು ಕೊಂಡಿರಲ್ಲವೇ? ಶ್ರೀಲಂಕಾದೊಂದಿಗೆ ವಾಣಿಜ್ಯ ಸಂಬಂಧ ಮಾತ್ರವಲ್ಲದೆ ಅವರು ಅಲ್ಲಿ ಆಧಿಪತ್ಯವನ್ನೂ ಸ್ಥಾಪಿಸಿದ್ದರು. ಚೋಳರ ಬರಹಗಳು, ಮಹಾವಂಶಂ, ಚುಳವಂಶಂ ಮೊದಲಾದ ಶ್ರೀಲಂಕನ್ ಕೃತಿಗಳು ಇದಕ್ಕೆ ಪುರಾವೆಗಳನ್ನು ಒದಗಿಸುತ್ತದೆ. ಚೋಳರ ಆಡಳಿತ ಕಾಲದಲ್ಲಿ ಆಗ್ನೇಯ ಏಷ್ಯಾಕ್ಕೆ ಮತ್ತು ದಕ್ಷಿಣ ಭಾರತದ ನಡುವಿನ ಸೌಹಾರ್ದ ಸಂಬಂಧವು ಹೆಚ್ಚು ಬಲಗೊಂಡಿತ್ತು. ಸುಮಾತ್ರ, ಜಾವಾ, ಮಲೇಷ್ಯಾ ಮೊದಲಾದ ಪ್ರದೇಶಗಳಿಗೆ ಚೋಳನಾಡಿನಿಂದ ವ್ಯಾಪಾರಿಗಳು ಮಾತ್ರವಲ್ಲದೆ ಬೌದ್ಧ-ಹಿಂದೂ ಸನ್ಯಾಸಿಗಳು ತುಂಬಾ ಸಂಖ್ಯೆಯಲ್ಲಿ ಪ್ರಯಾಣ ಮಾಡುತ್ತಿದ್ದರು. ಈ ಯಾತ್ರೆಗಳು ಚೋಳನಾಡಿನ ಭಾಷೆ, ಧರ್ಮ, ಆಶಯಗಳು, ವಾಸ್ತುಶಿಲ್ಪ ಮೊದಲಾದವುಗಳು ಆ ಪ್ರದೇಶಗಳಿಗೆ ವ್ಯಾಪಿಸಲು ಕಾರಣವಾಯಿತು.



**ಬೃಹದೀಶ್ವರ ಕ್ಷೇತ್ರ**

ಬೃಹದೀಶ್ವರ ದೇವಾಲಯ ಅಥವಾ ರಾಜರಾಜೇಶ್ವರ ಕ್ಷೇತ್ರವು ತಮಿಳುನಾಡಿನ ತಂಜಾವೂರಿನಲ್ಲಿರುವ ಪ್ರಧಾನ ಚಾರಿತ್ರಿಕ ಸ್ಮಾರಕವಾಗಿದೆ. ತಂಜೈಪೆರಿಯ ಕೋವಿಲ್ ಎಂದೂ ಇದನ್ನು ಕರೆಯುತ್ತಾರೆ. ಇದರ ಸುತ್ತಲು ಶಿವಗಂಗೈ ಕೋಟೆಯಿದೆ. ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಎರಡು ಬೃಹತ್ ಗೋಪುರಗಳು ಇದರ ಮುಖ್ಯ ಪ್ರವೇಶದ್ವಾರ ಗಳಾಗಿವೆ. ಗರ್ಭಗುಡಿಯ ಮೇಲಿನ ಕಮಾನಿಗೆ ಹದಿಮೂರು ಅಂತಸ್ತುಗಳಿವೆ. ಯುನೆಸ್ಕೋವು ಈ ದೇವಾಲಯವನ್ನು ಲೋಕ ಜಾಗತಿಕ ಪಾರಂಪರಿಕ ತಾಣಗಳ ಸಾಲಿನಲ್ಲಿ ಸೇರಿಸಿದೆ.



**ಗಂಗೈಕೊಂಡ ಚೋಳಪುರಂ**

ತಮಿಳುನಾಡಿನ ಕುಂಭಕೋಣದಿಂದ 36 ಕಿಲೋಮೀಟರ್ ಉತ್ತರದಲ್ಲಿ ಗಂಗೈಕೊಂಡ ಚೋಳಪುರಂ ಎನ್ನುವ ಚೋಳರಾಜ್ಯದ ನಂತರದ ರಾಜಧಾನಿಯು ನೆಲೆಗೊಂಡಿದೆ. ರಾಜೇಂದ್ರ ಚೋಳನ ಕಾಲದಲ್ಲಿ ರಾಜಧಾನಿಯನ್ನು ತಂಜಾವೂರಿನಿಂದ ಇಲ್ಲಿಗೆ ಬದಲಾಯಿಸಲಾಯಿತು. ಗಂಗಾ ನದಿಯನ್ನು ದಾಟಿ ಉತ್ತರ ಭಾರತದ ಕಡೆಗೆ ಈತನು ನಡೆಸಿದ ದಂಡಯಾತ್ರೆಯ ವಿಜಯದ ನೆನಪಿಗಾಗಿ ಈ ಪಟ್ಟಣ ಮತ್ತು ಇಲ್ಲಿಯ ದೇವಾಲಯವನ್ನು ನಿರ್ಮಿಸಲಾಗಿದೆ.

**ಚೋಳ ಸರೋವರ**

ಬಂಗಾಳಕೊಲ್ಲಿಯ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಚೋಳರು ತಮ್ಮ ಆಧಿಪತ್ಯವನ್ನು ವಿಸ್ತರಿಸಿದ್ದರು. ಬಂಗಾಳ ಕೊಲ್ಲಿಯು ಚೋಳರ ನಾವಿಕಸೇನೆಯ ನಿಯಂತ್ರಣದಲ್ಲಿತ್ತು. ಆದ್ದರಿಂದ ಬಂಗಾಳ ಕೊಲ್ಲಿಯನ್ನು ಚೋಳ ಸರೋವರ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು.

ದಕ್ಷಿಣ ಭಾರತದ ಸಂಸ್ಕೃತಿ, ತಮಿಳು ಭಾಷೆ ಆಗ್ನೇಯ ಏಷ್ಯಾದ ವರೆಗೆ ವ್ಯಾಪಿಸುವಲ್ಲಿ ಚೋಳರು ವಹಿಸಿದ ಪಾತ್ರ ಮತ್ತು ಅವು ಆಗ್ನೇಯ ಏಷ್ಯಾದ ಜನಜೀವನದ ಮೇಲೆ ಉಂಟುಮಾಡಿದ ಪ್ರಭಾವವನ್ನು ಚರ್ಚಿಸಿರಿ.

## ಚೋಳರ ಆಡಳಿತ

ಚೋಳ ರಾಜ್ಯದ ಪ್ರಧಾನ ಅರಸರನ್ನು ನಾವು ಪರಿಚಯಿಸಿಕೊಂಡೆ ವಲ್ಲವೇ? ರಾಜರಿಗೆ ಆಡಳಿತದಲ್ಲಿ ಸಹಾಯ ಮಾಡಲು ಮಂತ್ರಿಗಳ ಒಂದು ಸಮಿತಿ ಇತ್ತು. ನಾವಿಕ ಪಡೆಯನ್ನೊಳಗೊಂಡ ಪ್ರಬಲವಾದ ಒಂದು ಸೈನ್ಯವು ಚೋಳರಿಗಿತ್ತೆಂದು ಹದಿಮೂರನೇ ಶತಮಾನದಲ್ಲಿ ಭಾರತವನ್ನು ಸಂದರ್ಶಿಸಿದ ವೆನೀಸಿನ ಯಾತ್ರಿಕನಾದ ಮಾರ್ಕೋಪೋಲೋ ಅಭಿಪ್ರಾಯಪಡುತ್ತಾನೆ. ರಾಜ್ಯದ ಆಡಳಿತ ಸೌಕರ್ಯಕ್ಕಾಗಿ ಮಂಡಲಗಳು, ಒಳನಾಡು, ನಾಡು ಎಂದು ವರ್ಗೀಕರಿಸಲಾಗಿತ್ತು. ವ್ಯಾಪಾರದ ಪ್ರಗತಿ ಮತ್ತು ಸೈನ್ಯದ ಸಂಚಾರಕ್ಕಾಗಿ ಆಡಳಿತಾಧಿಕಾರಿಗಳು ಅನೇಕ ರಸ್ತೆಗಳನ್ನು ನಿರ್ಮಿಸಿದ್ದರು. ಭೂತೆರಿಗೆಯ ಹೊರತಾಗಿ, ಅರಣ್ಯ, ಗಣಿ, ಉಪ್ಪು ಇತ್ಯಾದಿಗಳ ಮೇಲೆಯೂ ತೆರಿಗೆಯನ್ನು ಹೇರಲಾಗಿತ್ತು. ವ್ಯಾಪಾರ ತೆರಿಗೆ ಮತ್ತು ವೃತ್ತಿ ತೆರಿಗೆಯನ್ನು ಸಂಗ್ರಹಿಸುತ್ತಿದ್ದರು. ವೆಟ್ಟಿ ಎಂಬ ಹೆಸರಿನ ವೇತನ ರಹಿತ ದುಡಿಮೆಯನ್ನು ತೆರಿಗೆಗೆ ಸಮಾನವಾಗಿ ಪರಿಗಣಿಸಲಾಗುತ್ತಿತ್ತು.

ಚೋಳರ ಗ್ರಾಮ ಸ್ವಯಂಆಡಳಿತದ ಕುರಿತು ಆ ಕಾಲದ ಹಲವಾರು ಬರಹಗಳು ಪುರಾವೆಗಳನ್ನೊದಗಿಸುತ್ತವೆ. ಉತ್ತರ ಮೇರೂರ್ ಬರಹವು ಅವುಗಳಲ್ಲಿ ಅತ್ಯಂತ ಪ್ರಧಾನವಾದುದಾಗಿದೆ. ಊರ್ ಮತ್ತು ಸಭಾ ಎಂಬ ಎರಡು ಸಭೆಗಳು ಆ ಕಾಲದಲ್ಲಿ ನೆಲೆನಿಂತಿದ್ದವು. ಇವುಗಳಿಗೆ ಸ್ವಯಂ ಆಡಳಿತದ ಅಧಿಕಾರವಿತ್ತು.




ಕೊಳಗಳು, ಬಾವಿಗಳು, ರಸ್ತೆಗಳು ಇತ್ಯಾದಿಗಳ ಪರಿಪಾಲನೆಯ ಜವಾಬ್ದಾರಿಯು ಪ್ರಾದೇಶಿಕ ಆಡಳಿತ ಒಕ್ಕೂಟಗಳಿಗಾಗಿತ್ತು. ಆದರೆ, ನೀವು ಹಿಂದಿನ ತರಗತಿಗಳಲ್ಲಿ ಪರಿಚಯಿಸಿಕೊಂಡಿರುವ ನಾಡುವಾಳಿ ವ್ಯವಸ್ಥೆಯ ಬೆಳವಣಿಗೆಯು ಈ ಸಭೆಗಳ ಕಾರ್ಯಚಟುವಟಿಕೆಗಳನ್ನು ಪರಿಮಿತಗೊಳಿಸಿತು.

ಚೋಳರ ರಾಜ್ಯದ ಸಮಾಜವು ಸಮಾನತೆಯಿಂದ ಕೂಡಿದ ಒಂದು ಸಮಾಜವಾಗಿರಲಿಲ್ಲ. ಜಾತಿವ್ಯವಸ್ಥೆ, ಅನೇಕ ಉಚ್ಚನೀಚತ್ವಗಳೂ ನೆಲೆನಿಂತಿದ್ದವು. ಬ್ರಾಹ್ಮಣರು ಸಮಾಜದ ಉನ್ನತ ವಿಭಾಗದಲ್ಲಿದ್ದರು. ಸ್ವಂತವಾಗಿ ಕೃಷಿಭೂಮಿಯಿಲ್ಲದ ಕೃಷಿ ಕಾರ್ಮಿಕರು, ಗುಲಾಮ ವೃತ್ತಿಯನ್ನು ಮಾಡುವವರು ಅನೇಕ ಸಂಖ್ಯೆಯಲ್ಲಿದ್ದರು.

ಆಧುನಿಕ ಕಾಲದ ಆಡಳಿತ ವ್ಯವಸ್ಥೆಗಳಿಗೆ ಹೋಲಿಸುವಾಗ ಚೋಳರ ಆಡಳಿತವು ಎಷ್ಟರ ಮಟ್ಟಿಗೆ ಕಾರ್ಯದಕ್ಷತೆಯಿಂದ ಕೂಡಿತ್ತು ಎಂದು ಅವಲೋಕಿಸಿರಿ.

## ಚಾಲುಕ್ಯರು

ಕರ್ನಾಟಕದ ವಾತಾಪಿ (ಬಾದಾಮಿ) ಯಲ್ಲಿ ಶಿಲೆಯನ್ನು ಕೊರೆದು ನಿರ್ಮಿಸಿದ ದೇವಾಲಯದ (Rock cut temple) ಚಿತ್ರವನ್ನು ಕೊಡಲಾಗಿದೆ. ಸಿ.ಇ. ಆರನೇ ಶತಮಾನದಿಂದ ಹನ್ನೆರಡನೆಯ ಶತಮಾನದ ವರೆಗೆ ದಕ್ಷಿಣ ಭಾರತದಲ್ಲಿಯೂ ದಕ್ಖಣದಲ್ಲಿಯೂ ಆಡಳಿತವನ್ನು ನಡೆಸಿದ ಚಾಲುಕ್ಯರು ಈ ದೇವಾಲಯವನ್ನು ನಿರ್ಮಿಸಿದ್ದಾರೆ. ಜೈನ-ಶೈವ-ವೈಷ್ಣವ ದೇವರುಗಳನ್ನು ಈ ರೀತಿಯ ದೇವಾಲಯಗಳಲ್ಲಿ ಪ್ರತಿಷ್ಠಾಪಿಸಲಾಗಿತ್ತು.


ಬಾದಾಮಿಯ ಗುಹಾದೇವಾಲಯ


ವಿರೂಪಾಕ್ಷ ದೇವಾಲಯ - ಪಟ್ಟದಕಲ್ಲು

ಈ ಕಾಲಘಟ್ಟದಲ್ಲಿ ಚಾಲುಕ್ಯರು ಅನೇಕ ದೇವಾಲಯಗಳನ್ನು ನಿರ್ಮಿಸಿದರು. ಆರಂಭಕಾಲದಲ್ಲಿ ಅವರು ಶಿಲೆಗಳನ್ನು ಕೊರೆದು ಗುಹಾದೇವಾಲಯಗಳನ್ನು ನಿರ್ಮಿಸಿದರೆ, ನಂತರದಲ್ಲಿ ರಚನಾತ್ಮಕ ದೇವಾಲಯಗಳನ್ನು (Structured temples) ನಿರ್ಮಿಸಿದರು. ಕರ್ನಾಟಕದ ಐಹೊಳೆಯಲ್ಲಿ ಮೆಗುತಿ ಜೈನ ಕ್ಷೇತ್ರ, ಪಟ್ಟದ ಕಲ್ಲಿನ ವಿರೂಪಾಕ್ಷ ದೇವಾಲಯ ಎಂಬಿವುಗಳು ಚಾಲುಕ್ಯರ ರಚನಾತ್ಮಕ ದೇವಾಲಯಗಳಿಗೆ ಉದಾಹರಣೆಗಳಾಗಿವೆ. ದೇವಾಲಯಗಳಲ್ಲಿ ಅವುಗಳ ಮೇಲ್ಛಾವಣಿಗಳನ್ನು ಆಧರಿಸುವ ಕಂಬಗಳಲ್ಲಿ ಕೆತ್ತನೆ ಕೆಲಸಗಳನ್ನು ಕಾಣಬಹುದು.

ಚಾಲುಕ್ಯರ ದೇವಾಲಯಗಳು ಗುಪ್ತರ ಶೈಲಿಯಿಂದ ರೂಪುಗೊಂಡದ್ದಾದರೂ ದಕ್ಷಿಣ ಭಾರತದ ಪ್ರಾದೇಶಿಕ ಪರಂಪರಾಗತ ಶೈಲಿಯಾದ ದ್ರಾವಿಡ ಶೈಲಿಯು ಅವುಗಳಲ್ಲಿ ಪ್ರತಿಫಲಿಸಿರುವುದನ್ನೂ ಕಾಣಬಹುದು. ಶಿಲೆ ಕಲ್ಲುಗಳಿಂದ ಮಾಡಿದ ನಿರ್ಮಾಣ ರೀತಿಯು ದ್ರಾವಿಡ ವಾಸ್ತುವಿದ್ಯಾಶೈಲಿಯ ಪ್ರಧಾನ ವಿಶೇಷತೆಯಾಗಿದೆ. ಸಹ್ಯ ಪರ್ವತದಿಂದಲೂ ದಕ್ಖಣದ ಪೀಠಭೂಮಿಯಿಂದಲೂ ಧಾರಾಳ ಶಿಲೆಕಲ್ಲುಗಳು ಲಭಿಸಿದವು. ಪ್ರಕೃತಿದತ್ತವಾದ ಶಿಲೆಕಲ್ಲಿನಿಂದ, ಸಮರ್ಥರಾದ ಶಿಲ್ಪಿಗಳು ಮನೋಹರವಾದ ದೇವಾಲಯಗಳನ್ನು ನಿರ್ಮಿಸಿದರು.

ದಕ್ಷಿಣ ಭಾರತದ ಭೌಗೋಳಿಕ ವಿಶೇಷತೆಗಳು ಚಾಲುಕ್ಯರ ದೇವಾಲಯ ನಿರ್ಮಾಣದ ಮೇಲೆ ಹೇಗೆ ಪ್ರಭಾವ ಬೀರಿತು?

ಇಷ್ಟೆಲ್ಲಾ ದೇವಾಲಯಗಳನ್ನು ನಿರ್ಮಿಸಲು ಚಾಲುಕ್ಯ ರಾಜರಿಗೆ ಹೇಗೆ ಸಾಧ್ಯವಾಯಿತೆಂದು ನೀವು ಆಲೋಚಿಸಿರುವಿರಾ? ಸಂಪನ್ಮೂಲಗಳು, ಕಾರ್ಮಿಕರು, ಇದಕ್ಕೆ ಬೇಕಾದ ಸಂಪತ್ತನ್ನು ಇವರು ಹೇಗೆಲ್ಲಾ ಸಂಗ್ರಹಿಸಿರಬಹುದು?

ದೇವಾಲಯಗಳನ್ನು ನಿರ್ಮಿಸಲು ಅಗತ್ಯವಾದ ಶಿಲೆಕಲ್ಲುಗಳು ಲಭಿಸಿದುದರ ಕುರಿತು ನಾವು ಚರ್ಚಿಸಿದೆವಲ್ಲವೇ? ಫಲವತ್ತಾದ ದಕ್ಖಣ ಪೀಠಭೂಮಿಯ ಕೃಷಿಯಿಂದ ಅವರು ಸಂಪತ್ತನ್ನು ಸಂಗ್ರಹಿಸಿದರು. ಕೃಷ್ಣಾ, ಗೋದಾವರಿ ನದಿ ದಡಗಳಲ್ಲಿ ಕೃಷಿ ಮಾಡುವ ಮೂಲಕ ಅವರು ಉತ್ಪಾದನೆಯಲ್ಲಿ ಮಿಗತೆಯನ್ನು ಸಾಧಿಸಿದರು. ಉತ್ಪಾದನೆಯ ಮಿಗತೆಯು ಹೊರಗಿನಿಂದ ಕಾರ್ಮಿಕರನ್ನು ಈ ಪ್ರದೇಶಕ್ಕೆ ಕರೆ ತಂದು ದೇವಾಲಯ ನಿರ್ಮಾಣದಲ್ಲಿ ತೊಡಗಿಸಲು ಸಹಾಯಕವಾಯಿತು.

ಹಿಂದಿನ ತರಗತಿಗಳಲ್ಲಿ ನಾವು ಕಲಿತುಕೊಂಡ ಚೋಳರಂತಹ ಒಂದು ಕೇಂದ್ರೀಕೃತ ಆಡಳಿತವು ಚಾಲುಕ್ಯರಲ್ಲಿ ಇರಲಿಲ್ಲ. ಬದಲಾಗಿ ದೇವಾಲಯಗಳು ಮತ್ತು ಬ್ರಹ್ಮದೇಯ ಭೂಮಿಯ ಒಡೆಯರಾದ ಬ್ರಾಹ್ಮಣರು, ಸಾಮಂತರು ಎಂಬಿವರಿಂದ ನಿಯಂತ್ರಿಸ ಲ್ಪಡುತ್ತಿದ್ದ ರಾಜಾಡಳಿತವು ಚಾಲುಕ್ಯರ ಕಾಲ ದಲ್ಲಿ ನೆಲೆನಿಂತಿತ್ತು. ಆದುದರಿಂದಲೇ ಅಧಿಕಾರ ಕೇಂದ್ರಗಳು ಬದಲಾಗುತ್ತಿದ್ದವು. ಸಿ.ಇ. ಆರನೆಯ ಶತಮಾನದಿಂದ ಹನ್ನೆರಡನೆಯ ಶತಮಾನದ ವರೆಗೆ ವಾತಾಪಿ, ವೆಂಕಿ, ಕಲ್ಯಾಣಿ ಎಂಬೀ ಸ್ಥಳಗಳನ್ನು ಕೇಂದ್ರವಾಗಿರಿಸಿ ಚಾಲುಕ್ಯರು ಆಡಳಿತ ನಡೆಸಿದರು.




ಭೂಪಟವನ್ನು ನಿರೀಕ್ಷಿಸಿ ಇಂದಿನ ಭಾರತದ ಯಾವೆಲ್ಲ ರಾಜ್ಯಗಳಲ್ಲಿ ಚಾಲುಕ್ಯರ ಆಡಳಿತವು ವ್ಯಾಪಿಸಿತ್ತು ಎಂದು ಕಂಡುಹಿಡಿಯಿರಿ.

ಕೇಂದ್ರೀಕೃತವಾದ ತೆರಿಗೆ ವ್ಯವಸ್ಥೆ ಮತ್ತು ಸಂಘಟಿತವಾದ ಉದ್ಯೋಗಸ್ಥ ವೃಂದವಿದ್ದರೂ ಸೈನಿಕ ಶಕ್ತಿಯಾಧಾರಿತವಾದ ಪ್ರಭುಗಳನ್ನು ಕೇಂದ್ರೀಕರಿಸಿ ಆಡಳಿತವು ನೆಲೆನಿಂತಿತ್ತು. ಸ್ಥಿರವಾದ ಯಾವುದೇ ಸೈನಿಕ ಪಡೆಯು ಚಾಲುಕ್ಯರಿಗಿರಲಿಲ್ಲ. ಚೋಳರ ಆಡಳಿತದಂತೆ ಆಡಳಿತದಲ್ಲಿ ರಾಜನಿಗೆ ಸಹಾಯ ಮಾಡಲು ಮಂತ್ರಿಮಂಡಲವಿರಲಿಲ್ಲ. ರಾಜನ ಕುಟುಂಬದ ಸದಸ್ಯರೇ ಅಧಿಕಾರವನ್ನು ವಿನಿಯೋಗಿಸುತ್ತಿದ್ದರು. ಎರಡನೇ ಪುಲಕೇಶಿಯು ಚಾಲುಕ್ಯರ ಪ್ರಸಿದ್ಧ ಅರಸನಾಗಿದ್ದನು.

ಕೆಳಗೆ ನೀಡಿರುವ ಸೂಚಕಗಳ ಆಧಾರದಲ್ಲಿ ಚೋಳ ಮತ್ತು ಚಾಲುಕ್ಯರ ಆಡಳಿತವನ್ನು ಹೋಲಿಸಿರಿ.

- ಕೇಂದ್ರೀಕೃತ ಆಡಳಿತ
- ಸಾಮಂತರ ಆಳ್ವಿಕೆ
- ಪ್ರಾದೇಶಿಕ ಆಡಳಿತ
- ದೇವಾಲಯಗಳ ಪ್ರಭಾವ



ನಲಂದ ವಿಶ್ವವಿದ್ಯಾಲಯ



ವಿಕ್ರಮಶಿಲ ವಿಶ್ವವಿದ್ಯಾಲಯ



ಬುದ್ಧವಿಹಾರ

## ತ್ರಿಶಕ್ತಿಗಳು

ಸಿ.ಇ. ಐದನೇ ಶತಮಾನದಲ್ಲಿ ಭಾರತದಲ್ಲಿ ನೆಲೆನಿಂತಿದ್ದ ಬೌದ್ಧ ಮತ ಅಧ್ಯಯನ ಕೇಂದ್ರವಾದ ನಲಂದಾ ವಿಶ್ವವಿದ್ಯಾಲಯದ ಚಿತ್ರವನ್ನು ಕೊಡಲಾಗಿದೆ. ಚೀನಾದ ಯಾತ್ರಿಕನಾದ ಹ್ಯೂಯೆನ್ ತ್ಸಾಂಗ್ ಸಹಿತ ಅನೇಕರು ಸಂದರ್ಶಿಸಿ ಅಧ್ಯಯನ ನಡೆಸಿದ ಈ ವಿಶ್ವ ವಿಜ್ಞಾನ ಕೇಂದ್ರವು ನಂತರದ ಕಾಲದಲ್ಲಿ ಅಧಃಪತನವಾಯಿತು. ಆದರೆ ನಲಂದ ವಿಶ್ವವಿದ್ಯಾಲಯವನ್ನು ಪುನರುದ್ಧಾರಗೊಳಿಸಿದ ಆಡಳಿತಾಧಿಕಾರಿಗಳಲ್ಲಿ ಪಾಲರಾಜನಾದ ಧರ್ಮಪಾಲನು ಪ್ರಮುಖನಾಗಿದ್ದನು. ನಲಂದಾದ ಖರ್ಚಿಗಾಗಿ ಅವನು ಇನ್ನೂರು ಗ್ರಾಮಗಳನ್ನು ದಾನ ಮಾಡಿದನು. ಮಾತ್ರವಲ್ಲದೆ ಅವನು ಮಗಧದಲ್ಲಿ ಗಂಗಾ ನದಿಯ ತೀರದಲ್ಲಿರುವ ಬೆಟ್ಟವೊಂದರಲ್ಲಿ ಜ್ಞಾನದ ಅಭಿವೃದ್ಧಿಗಾಗಿ ವಿಕ್ರಮಶಿಲ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದನು. ಸಿ.ಇ. ಎಂಟನೇ ಶತಮಾನದಿಂದ ಒಂಭತ್ತನೇ ಶತಮಾನದ ಮಧ್ಯದ ವರೆಗೆ ಪೂರ್ವಭಾರತವನ್ನು (ಬಂಗಾಲ) ಕೇಂದ್ರೀಕರಿಸಿ ಆಡಳಿತವನ್ನು ನಡೆಸಿದ ಪಾಲರು ಅನೇಕ ಬೌದ್ಧ ವಿಹಾರಗಳನ್ನು ಸ್ಥಾಪಿಸಿದರು.

ನೆರೆದೇಶವಾದ ಟಿಬೆಟಿನೊಂದಿಗೆ ಇವರು ಸಂಬಂಧವಿರಿಸಿಕೊಂಡರು. ಇದರ ಫಲವಾಗಿ ಟಿಬೆಟಿನಿಂದ ಅನೇಕ ಬೌದ್ಧ ಮತ ಅನುಯಾಯಿಗಳು ಅಧ್ಯಯನಕ್ಕಾಗಿ ನಲಂದಾಕ್ಕೂ, ವಿಕ್ರಮಶಿಲೆಗೂ ಬರುತ್ತಿದ್ದರು. ಪಾಲರು ಅರೇಬಿಯಾದ ಖಲೀಫರೊಂದಿಗೂ ಆಗ್ನೇಯ ಏಷ್ಯಾದ ದೇಶಗಳೊಂದಿಗೂ ಸಂಬಂಧವನ್ನು ಸ್ಥಾಪಿಸಿದರು. ಈ ಪ್ರದೇಶಗಳೊಂದಿಗಿನ ವ್ಯಾಪಾರದಿಂದ ಪಾಲ ರಾಷ್ಟ್ರದ ಆರ್ಥಿಕ ಸ್ಥಿತಿಯು ಉತ್ತಮಗೊಂಡಿತು. ಮಾತ್ರವಲ್ಲದೆ, ಮಲಯ, ಜಾವ, ಸುಮಾತ್ರ ಎಂಬೀ ಪ್ರದೇಶಗಳಲ್ಲಿ ಆಡಳಿತವನ್ನು ನಡೆಸುತ್ತಿದ್ದ ಶೈಲೇಂದ್ರ ರಾಜರು ಪಾಲರ ಅರಮನೆಗೆ ರಾಜತಾಂತ್ರಿಕ ಪ್ರತಿನಿಧಿಗಳನ್ನು ಕಳುಹಿಸಿದ್ದರು.



ಪಾಲರ ಆಡಳಿತ ಕಾಲವು ಭಾರತದ ಸಂಸ್ಕೃತಿ ಮತ್ತು ಬೌದ್ಧ ಮತದ ವ್ಯಾಪಿಸುವಿಕೆಯ ಕಾಲವಾಗಿತ್ತು. ಈ ಹೇಳಿಕೆಯ ಆಧಾರದಲ್ಲಿ ಡಿಜಿಟಲ್ ಸಂಚಿಕೆಯೊಂದನ್ನು ತಯಾರಿಸಿ ಮಂಡಿಸಿರಿ.

ಪಾಲರು ರಾಜ್ಯವಾಳಿದ ಅದೇ ಕಾಲದಲ್ಲಿ (ಸಿ.ಇ. ಎಂಟನೇ ಶತಮಾನದಿಂದ ಸಿ.ಇ. ಹತ್ತನೇ ಶತಮಾನದ ವರೆಗೆ) ಉತ್ತರ ಭಾರತದ ಪಶ್ಚಿಮ ಭಾಗವನ್ನು ಪ್ರತಿಹಾರರು ಆಡಳಿತ ನಡೆಸಿದರು. ಹತ್ತನೇ ಶತಮಾನದ ಆರಂಭದಲ್ಲಿ ಗುಜರಾತನ್ನು ಸಂದರ್ಶಿಸಿದ್ದ ಬಾಗ್ದಾದ್ ಯಾತ್ರಿಕನಾದ ಅಲ್ ಮಸೂದಿಯು ಪ್ರತಿಹಾರ ರಾಜರ ಸಾಧನೆಗಳ ಬಗ್ಗೆ ವಿವರಿಸಿರುವನು. ಭೋಜನು ಪ್ರಸಿದ್ಧನಾದ ಪ್ರತಿಹಾರ ಆಡಳಿತಾಧಿಕಾರಿಯಾಗಿದ್ದನು.

ಪ್ರತಿಹಾರರು ಕಲೆ ಮತ್ತು ಸಾಹಿತ್ಯವನ್ನು ಪ್ರೋತ್ಸಾಹಿಸಿದರು. ಸಂಸ್ಕೃತ ಭಾಷೆಯ ಕವಿ, ನಾಟಕಕಾರ, 'ಕಾವ್ಯಮೀಮಾಂಸೆ' ಮತ್ತು 'ಕರ್ಪೂರಮಂಜರಿ' ಕೃತಿಗಳನ್ನು ರಚಿಸಿದ ರಾಜಶೇಖರನು ಪ್ರತಿಹಾರರ ಆಸ್ಥಾನದಲ್ಲಿ ಜೀವಿಸಿದ್ದನು. ಇಂದಿನ ಉತ್ತರ ಪ್ರದೇಶದ ಕನೋಜದಲ್ಲಿ ಮನೋಹರವಾದ ಅನೇಕ ಕ್ಷೇತ್ರಗಳನ್ನೂ ಕಟ್ಟಡಗಳನ್ನೂ ಪ್ರತಿಹಾರರು ನಿರ್ಮಿಸಿದರು. ಎಂಟು ಮತ್ತು ಒಂಭತ್ತನೆಯ ಶತಮಾನದಲ್ಲಿ ಭಾರತದಿಂದ ಅನೇಕ ಪಂಡಿತರನ್ನು ರಾಜತಾಂತ್ರಿಕ ಪ್ರತಿನಿಧಿಗಳಾಗಿ ಬಾಗ್ದಾದಿನ ಖಲೀಫರ ಆಸ್ಥಾನಕ್ಕೆ ಕಳುಹಿಸಿದ್ದರು. ಅವರು ಭಾರತದ ವಿಜ್ಞಾನ ಮತ್ತು ಗಣಿತವನ್ನು ಅರೇಬಿಯಾ ಜಗತ್ತಿನಲ್ಲಿ ಪ್ರಚಾರ ಮಾಡಿದರು. ಸಿಂಧ್ ಪ್ರದೇಶದ ಅರಬ್ ಆಡಳಿತಾಧಿಕಾರಿಗಳೊಡನೆ ಪ್ರತಿಹಾರರು ಶತ್ರುತ್ವವನ್ನು ಬೆಳೆಸಿಕೊಂಡಿದ್ದರೂ ಉತ್ಪನ್ನಗಳ ವಿನಿಮಯ ಮತ್ತು ಪಂಡಿತರ ಸಂಚಾರವು ಭಾರತ ಮತ್ತು ಪಶ್ಚಿಮ ಏಷ್ಯಾದ ನಡುವೆ ಈ ಕಾಲದಲ್ಲಿ ಸಾಗಿತ್ತು.



ತೆಲಿ ಕಾ ಮಂದಿರ - ಗ್ವಾಲಿಯರ್
(ಪ್ರತಿಹಾರರ ಕಾಲಘಟ್ಟದಲ್ಲಿ ನಿರ್ಮಾಣವಾದ ದೇವಾಲಯ)

ಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಪ್ರತಿಹಾರರ ಸಾಧನೆಗಳನ್ನು ತಿಳಿಸುವ ಒಂದು ಆಲ್ಬಂ ತಯಾರಿಸಿರಿ.

ಕರ್ನಾಟಕದ ಗುಲ್ಬರ್ಗ ಜಿಲ್ಲೆಯ ಮಾಲ್‌ಖೇದ್ (ಮಾನ್ಯ ಖೇದ) ಕೋಟೆಯ ಚಿತ್ರವನ್ನು ನೀಡಲಾಗಿದೆ. ಈ ಪ್ರದೇಶಗಳಲ್ಲಿ ಕಂಡುಬರುವ 'ಶಹ್‌ಬಾದ್ ಶಿಲೆ' ಎನ್ನುವ ಸುಣ್ಣದ ಕಲ್ಲಿನಿಂದ ಈ ಕೋಟೆಯನ್ನು ನಿರ್ಮಿಸಲಾಗಿದೆ. ಇದರಿಂದ ಇದೊಂದು ಪೌರಾಣಿಕ ಐತಿಹ್ಯವಿರುವ ಕೋಟೆಯಾಗಿದೆಯೆಂದು ತಿಳಿಯಿತಲ್ಲವೇ.



ಮಾಲ್‌ಖೇದ್ ಕೋಟೆ

ಸಿ.ಇ. ಎಂಟನೇ ಶತಮಾನದಿಂದ ಹತ್ತನೆಯ ಶತಮಾನದ ವರೆಗೆ ದಕ್ಖಣ ಮತ್ತು ದಕ್ಷಿಣ ಭಾರತದಲ್ಲಿ ಆಧಿಪತ್ಯವನ್ನು ಸ್ಥಾಪಿಸಿದ ರಾಷ್ಟ್ರಕೂಟರು ಈ ಕೋಟೆಯನ್ನು ನಿರ್ಮಿಸಿದರು. ಮೂರನೆಯ ಗೋವಿಂದ, ಅಮೋಘವರ್ಷ ಮೊದಲಾದವರು ರಾಷ್ಟ್ರಕೂಟರಲ್ಲಿ ಪ್ರಮುಖರಾದ ರಾಜರಾಗಿದ್ದರು. ಕವಿರಾಜಮಾರ್ಗವು ಅಮೋಘವರ್ಷನು ಕನ್ನಡ ಭಾಷೆಯಲ್ಲಿ ರಚಿಸಿದ ಗಮನಾರ್ಹವಾದ ಕೃತಿಯಾಗಿದೆ. ಮತ ಸಹಿಷ್ಣುಗಳಾಗಿದ್ದ ರಾಷ್ಟ್ರಕೂಟ ಆಡಳಿತಗಾರರು ಶೈವ ಮತ್ತು ವೈಷ್ಣವ ಮತದೊಂದಿಗೆ ಜೈನ ಮತವನ್ನೂ ಪ್ರೋತ್ಸಾಹಿಸಿದರು. ಮುಸಲ್ಮಾನ ವ್ಯಾಪಾರಿಗಳಿಗೆ ವ್ಯಾಪಾರವನ್ನು ನಡೆಸಲೂ ಸ್ಥಿರವಾಸಕ್ಕೂ ಮತಪ್ರಚಾರ ಮಾಡಲೂ ಅಗತ್ಯವಾದ ಸೌಕರ್ಯಗಳನ್ನು ಅವರು ಒದಗಿಸಿದರು. ಇದು ವಿದೇಶೀ ವ್ಯಾಪಾರವನ್ನು ಬಲಪಡಿಸಿತು. ಕಲೆ ಮತ್ತು ಸಾಹಿತ್ಯವನ್ನು


ಕೈಲಾಸ ದೇವಾಲಯ - ಎಲ್ಲೋರ

ರಾಷ್ಟ್ರಕೂಟರು ಪ್ರೋತ್ಸಾಹಿಸಿದರು. ಅವರ ಆಸ್ಥಾನದಲ್ಲಿ ಸಂಸ್ಕೃತ ಪಂಡಿತರಲ್ಲದೆ ಇತರ ಭಾಷೆಗಳಲ್ಲಿ ಬರೆಯುತ್ತಿದ್ದ ಸಾಹಿತ್ಯಗಾರರೂ ಇದ್ದರು. ಎಲ್ಲೋರದ ಶಿಲಾದೇವಾಲಯವನ್ನು ರಾಷ್ಟ್ರಕೂಟರು ನಿರ್ಮಿಸಿದರು.

ರಾಷ್ಟ್ರಕೂಟರ ಆಡಳಿತ ಕಾಲದಲ್ಲಿ ಸಮಾಜವು ಜಾತಿ ಆಧಾರಿತವಾಗಿ ವಿಭಜಿಸಲ್ಪಟ್ಟಿತು. ಚಾತುರ್ವರ್ಣ ವ್ಯವಸ್ಥೆಗೆ ಹೊರತಾಗಿ ಅನೇಕ ತರದ ಪಕ್ಷಪಾತಕ್ಕೂ ಅಸ್ಪೃಶ್ಯತೆಗೂ ವಿಧೇಯರಾದ ಸಮೂಹಗಳು ನೆಲೆನಿಂತಿದ್ದವು. ಮರದ ಕೆಲಸದವರು, ಚಪ್ಪಲಿ ತಯಾರಿಸುವವರು, ಮೀನು ಹಿಡಿಯುವವರು ಮೊದಲಾದವರು ಇದರಲ್ಲಿ ಒಳಗೊಂಡಿದ್ದರು. ಸಮಾಜದಲ್ಲಿ ಆಧಿಪತ್ಯವನ್ನುಗಳಿಸಿದ ವಿಭಾಗಗಳಾದ ಬ್ರಾಹ್ಮಣರು ಮತ್ತು ಕ್ಷತ್ರಿಯರು ಸಮಾಜದಲ್ಲಿ ಅವರ ಸ್ಥಾನವನ್ನು ಉಳಿಸಿಕೊಂಡಿದ್ದರು. ಆದರೆ ವಾಣಿಜ್ಯದ ಅಧಃಪತನ ಮತ್ತು ಕೃಷಿಯ ಅಭಿವೃದ್ಧಿಯು ವೈಶ್ಯರ ಸ್ಥಾನವನ್ನು ಕಡಿಮೆ ಮಾಡುವುದರೊಂದಿಗೆ ಶೂದ್ರರ ಜೀವನ ಮಟ್ಟವು ಉತ್ತಮಗೊಳ್ಳಲು ಕಾರಣವಾಯಿತು. ಸೈನ್ಯದಲ್ಲಿ ಸೇರುವುದರ ಮೂಲಕವೂ ಶೂದ್ರರ ಸ್ಥಾನವು ಉನ್ನತಮಟ್ಟಕ್ಕೇರಲು ಕಾರಣವಾಯಿತು.

ಕಲೆ, ಸಾಹಿತ್ಯ ವಲಯಗಳಲ್ಲಿ ಪ್ರಗತಿಯನ್ನು ಸಾಧಿಸಿದ್ದರೂ, ರಾಷ್ಟ್ರಕೂಟರ ಆಡಳಿತ ಕಾಲದಲ್ಲಿ ಸಮತ್ವಾಧಾರಿತ ಸಮಾಜವಿತ್ತು ಎಂದು ಹೇಳಲು ಸಾಧ್ಯವೇ? ಅವಲೋಕಿಸಿರಿ.

ನಾವು ಪರಿಚಯಿಸಿದ ಈ ಮೂರು ರಾಷ್ಟ್ರಗಳು ತಮ್ಮೊಳಗೆ ನಿರಂತರವಾದ ಯುದ್ಧಗಳಲ್ಲಿ ಏರ್ಪಟ್ಟಿದ್ದರೂ ತಾವು ಆಡಳಿತ ನಡೆಸುತ್ತಿದ್ದ ಪ್ರದೇಶಗಳಲ್ಲಿ ಸ್ಥಿರವಾದ ಆಡಳಿತವನ್ನು ಅವರು ಖಾತರಿಪಡಿಸಿದ್ದರು. ಕೃಷಿ, ಕಲೆಯೊಂದಿಗೆ ಸಾಹಿತ್ಯ, ದೇವಾಲಯ ನಿರ್ಮಾಣಗಳನ್ನು ಪ್ರೋತ್ಸಾಹಿಸಿದರು.

ಸಿ.ಇ. ಎಂಟನೇ ಶತಮಾನದಿಂದ ಹನ್ನೆರಡನೇ ಶತಮಾನದ ವರೆಗಿನ ಕಾಲಘಟ್ಟದಲ್ಲಿ ಭಾರತದ ವಿವಿಧ ಭಾಗಗಳಲ್ಲಿ ನೆಲೆನಿಂತಿದ್ದ ಪ್ರಾದೇಶಿಕ ಆಡಳಿತಗಳ ಸ್ಥಿತಿಗತಿಯನ್ನು ಅವಲೋಕಿಸಿರಿ.

## ದೆಹಲಿಯ ಸುಲ್ತಾನರು

ನಾವೀಗ ಚರ್ಚೆ ನಡೆಸಿದ್ದು ಭಾರತದ ವಿವಿಧ ಪ್ರದೇಶಗಳಲ್ಲಿ ನೆಲೆನಿಂತಿದ್ದ ಪ್ರಾದೇಶಿಕ ರಾಜ್ಯಗಳ ಕುರಿತಲ್ಲವೇ. ಸಿ.ಇ. ಹದಿಮೂರನೆಯ ಶತಮಾನದ ಆರಂಭದೊಂದಿಗೆ ಭಾರತದ ಬಹುತೇಕ ಪ್ರದೇಶಗಳು ದೆಹಲಿಯನ್ನು ಕೇಂದ್ರೀಕರಿಸಿ ರಾಜ್ಯವನ್ನಾಳಿದ ಒಂದು ಆಡಳಿತ ವ್ಯವಸ್ಥೆಯ ನಿಯಂತ್ರಣಕ್ಕೆ ಬಂತು. ಅದರ ವಿಶೇಷತೆ ಮತ್ತು ಹಿನ್ನೆಲೆಗಳು ಯಾವುವೆಂದು ನೋಡುವ.

ಭಾರತದೊಂದಿಗೆ ಅರಬಿಗಳಿಗೆ ವಾಣಿಜ್ಯ, ಸಾಂಸ್ಕೃತಿಕ ಸಂಬಂಧವಿತ್ತೆಂದು ನಾವು ಹಿಂದಿನ ತರಗತಿಗಳಲ್ಲಿ ಕಲಿತುಕೊಂಡಿರುವೆವು. ಆದರೆ ಸಿ.ಇ. ಎಂಟನೇ ಶತಮಾನದ ಆರಂಭದಲ್ಲಿ ಅರಬಿಗಳು ಭಾರತದ ಉಪಭೂಖಂಡದ ಪಶ್ಚಿಮ ಕರಾವಳಿಯ ಸಿಂಧ್ ಪ್ರದೇಶವನ್ನು ಆಕ್ರಮಿಸಿದರು. ಭಾರತದ ಅಗಾಧವಾದ ಸಂಪತ್ತು ಮತ್ತು ಅರಬಿಗಳ ವ್ಯಾಪಾರದ ಆಸಕ್ತಿ ಈ ಆಕ್ರಮಣದ ಹಿಂದಿನ ಉದ್ದೇಶವಾಗಿತ್ತು.

## ಅರಬಿಗಳ ಸಿಂಧ್ ಆಕ್ರಮಣ




ಸಿ.ಇ. 712ರಲ್ಲಿ ಅರಬಿಗಳು ಸಿಂಧ್ ಪ್ರದೇಶವನ್ನು ಆಕ್ರಮಿಸಿದರು. ಉಮಯಾದ್ ಖಲೀಫರ ಸೈನಿಕ ನೇತಾರನಾಗಿದ್ದ ಮುಹಮ್ಮದ್ ಬಿನ್ ಖಾಸಿಂ ಇದರ ನೇತೃತ್ವವನ್ನು ವಹಿಸಿದ್ದನು. ಖಲೀಫನಿಗೆ ಮತ್ತು ಗವರ್ನರ್ ಆಗಿದ್ದ ಅಲ್ ಹಜಾಜಿಗೆ ಉಡುಗೊರೆಗಳೊಂದಿಗೆ ಸಿಲೋನಿನಿಂದ ಅರೇಬಿಯಾಕ್ಕೆ ಹೋಗುತ್ತಿದ್ದ ಹಡಗನ್ನು ಸಿಂಧ್ ಪ್ರದೇಶದ ಸಮೀಪ ಕಡಲುಗಳ್ಳರು ಆಕ್ರಮಿಸಿದುದು ಅರಬಿಗಳ ಸಿಂಧ್ ಆಕ್ರಮಣಕ್ಕಿದ್ದ ತತ್‌ಕ್ಷಣದ ಕಾರಣವಾಗಿತ್ತು.

ಈ ಆಕ್ರಮಣದೊಂದಿಗೆ ಭಾರತದಲ್ಲಿ ವಿವಿಧ ಆಡಳಿತಾಧಿಕಾರಿಗಳಲ್ಲಿದ್ದ ದೌರ್ಬಲ್ಯವು ಇತರ ದೇಶಗಳಿಗೆ ಅರಿವಾಯಿತು. ನಂತರದಲ್ಲಿ ತುರ್ಕಿಗಳಾದ ಗಸ್ನಿಯ ಮಹಮ್ಮೂದ್ ಮತ್ತು ಗೋರಿಯ ಮುಹಮ್ಮದ್ ಹನ್ನೊಂದು ಮತ್ತು ಹನ್ನೆರಡನೆಯ ಶತಮಾನದಲ್ಲಿ ಭಾರತವನ್ನು ಆಕ್ರಮಿಸಿದರು. ಗಸ್ನಿ ಮಹಮ್ಮೂದ್ ಹದಿನೇಳು ಬಾರಿ ಭಾರತವನ್ನು ಆಕ್ರಮಿಸಿದನೆಂದು ಹೇಳಲಾಗುತ್ತಿದೆ. ಭಾರತದ ಹೇರಳ ಸಂಪತ್ತಿನಲ್ಲಿ ಅವರಿಗಿದ್ದ ವ್ಯಾಮೋಹ ಇದರಿಂದ ಅರ್ಥವಾಗುವುದು. ಕ್ರಮೇಣ ಈ ಆಕ್ರಮಣಗಳು ದೆಹಲಿಯನ್ನು ಕೇಂದ್ರೀಕರಿಸಿದ ಸುಲ್ತಾನರ ಆಡಳಿತಕ್ಕೆ (ದೆಹಲಿ ಸಲ್ತಾನತ್) ಕಾರಣವಾಯಿತು. ಉತ್ತರ ಭಾರತ, ಮಧ್ಯಭಾರತ ಮತ್ತು ದಕ್ಷಿಣ ಭಾರತದ ಕೆಲವೊಂದು ಪ್ರದೇಶಗಳು ಸುಲ್ತಾನರ ಆಡಳಿತದ ಭಾಗವಾಗಿತ್ತು. ಸಿ.ಇ. 1206 ರಿಂದ ಸಿ.ಇ. 1526ರ ವರೆಗಿನ ಸುಲ್ತಾನರ ಆಡಳಿತದ ಕಾಲದಲ್ಲಿ ಐದು ರಾಜವಂಶಗಳು ಆಡಳಿತವನ್ನು ನಡೆಸಿದವು. ಅವುಗಳನ್ನು ಕೆಳಗೆ ಕೊಡಲಾಗಿದೆ.

### ದೆಹಲಿ ಸಲ್ತಾನತ್ ಕಾಲದ ರಾಜವಂಶಗಳು

ಮಾಮ್ಲುಕ್ → ಖಲ್ಜಿ → ತುಗ್ಲಕ್ → ಸಯ್ಯಿದ್ → ಲೋದಿ

ಈ ಕಾಲಘಟ್ಟವು ಹಲವಾರು ಆಡಳಿತ ಪರಿಷ್ಕಾರಕ್ಕೂ ಪ್ರಯೋಗಗಳಿಗೂ ಸಾಕ್ಷಿಯಾಯಿತು. ಅಲ್ಲಾವುದ್ದೀನ್ ಖಲ್ಜಿಯ ಆಡಳಿತ ಕಾಲದಲ್ಲಿ (1296-1316) ಜಾರಿಗೊಳಿಸಿದ ಮಾರುಕಟ್ಟೆ ನಿಯಂತ್ರಣವು ಅವುಗಳಲ್ಲಿ ಪ್ರಧಾನವಾಗಿತ್ತು.

ಸಾಮಾನ್ಯವಾಗಿ ಎಲ್ಲಾ ಉತ್ಪಾದನೆಗಳ ಬೆಲೆ ಮತ್ತು ಪ್ರತ್ಯೇಕವಾಗಿ ಆಹಾರ ವಸ್ತುಗಳ ಬೆಲೆಯನ್ನು ನಿಯಂತ್ರಿಸುವುದು ಇದರ ಪ್ರಧಾನ ಉದ್ದೇಶವಾಗಿತ್ತು. ಮಂಗೋಲಿಯನರ ಆಕ್ರಮಣದ ನಂತರ ಒಂದು ಪ್ರಬಲವಾದ ಸೈನ್ಯವನ್ನು ಅಲ್ಲಾವುದ್ದೀನ್ ಸಂಘಟಿಸಬೇಕಾಯಿತು. ಬೃಹತ್ತಾದ ಒಂದು ಸೈನ್ಯಕ್ಕೆ ಸಂಬಳವಾಗಿ ಬೃಹತ್ ಮೊತ್ತದ ಹಣವನ್ನು ನೀಡಬೇಕಾಗುವುದೆಂಬ ಆತಂಕವು ಅವನನ್ನು ಈ ಪರಿಷ್ಕಾರಕ್ಕೆ ಪ್ರಚೋದಿಸಿತು. ವಸ್ತುಗಳಿಗೆ ಬೆಲೆ ಕಡಿಮೆಯಾದರೆ ಸೈನಿಕರಿಗೆ ಕಡಿಮೆ ಸಂಬಳ ಕೊಟ್ಟರೆ ಸಾಕಲ್ಲವೇ? ಇದರ ಭಾಗವಾಗಿ ಅವನು ದಾಸ್ತಾನು ಮಳಿಗೆಗಳನ್ನು ಸ್ಥಾಪಿಸಿದ್ದು ಮಾತ್ರವಲ್ಲದೆ, ಅಮಿತ ಬೆಲೆಗೆ ವಸ್ತುಗಳನ್ನು ಮಾರುವವರಿಗೂ ಕಳ್ಳ ದಾಸ್ತಾನು ಮಾಡುವವರಿಗೂ ಕಠಿಣವಾದ ಶಿಕ್ಷೆಯನ್ನು ನೀಡಿದನು.

### ರಸಿಯಾ ಸುಲ್ತಾನ (1236-39)

ರಸಿಯಾ ಮಾಮ್ಲುಕ್ ರಾಜವಂಶದ ಪ್ರಭಾವೀ ಆಡಳಿತಾಧಿಕಾರಿಯಾಗಿದ್ದ ಇಲ್ತುಮಿಷ್ ನ ಮಗಳಾಗಿದ್ದಳು. ತನ್ನ ಗಂಡು ಮಕ್ಕಳು ತನ್ನ ನಂತರ ಯಾರೂ ಕೂಡ ಸಿಂಹಾಸನವೇರಲು ಯೋಗ್ಯರಲ್ಲ ಎಂದರಿತ ಇಲ್ತುಮಿಷ್ ತನ್ನ ಮಗಳನ್ನು ಉತ್ತರಾಧಿಕಾರಿಯಾಗಿ ನಿರ್ದೇಶಿಸಿದನು. ಇರಾನ್ ಮತ್ತು ಈಜಿಪ್ಟ್ ದೇಶಗಳಲ್ಲಿ ಸ್ತ್ರೀಯರು ಆಡಳಿತಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದ್ದರೂ ಸ್ತ್ರೀಯೊಬ್ಬಳನ್ನು ಸಿಂಹಾಸನವನ್ನೇರಲು ನಿರ್ದೇಶಿಸಿದ್ದು ಈ ಕಾಲದ ಒಂದು ಪ್ರಧಾನ ಬದಲಾವಣೆಯಾಗಿತ್ತು.




ಆಧುನಿಕ ಕಾಲದಲ್ಲಿ ಸರಕಾರಗಳ ಸಾರ್ವಜನಿಕ ವೆಚ್ಚ ಮತ್ತು ಜನರ ದೈನಂದಿನ ಖರ್ಚು ಕಡಿಮೆಮಾಡಲು ಅಗತ್ಯವಾದ ಮಾರ್ಗಗಳ ಕುರಿತು ತರಗತಿಯಲ್ಲಿ ಒಂದು ಪ್ಯಾನೆಲ್ ಚರ್ಚೆಯನ್ನು ಆಯೋಜಿಸಿರಿ.

## ಸಾಮಾಜಿಕ - ಆರ್ಥಿಕ ಜೀವನ

ಭಾರತದ ಫಲವತ್ತಾದ ಮಣ್ಣು ಕೃಷಿಗೆ ಹೆಚ್ಚು ಸೂಕ್ತವಾಗಿದೆ ಎಂದು ಹದಿನಾಲ್ಕನೆಯ ಶತಮಾನದಲ್ಲಿ ಭಾರತ ಸಂದರ್ಶಿಸಿದ ಮೊರಾಕ್ಕೋ ಯಾತ್ರಿಕನಾದ ಇಬನ್ ಬತೂತ ಅಭಿಪ್ರಾಯಪಟ್ಟಿದ್ದಾನೆ. ವರ್ಷದಲ್ಲಿ ಎರಡು ಮೂರು ಸಲ ಕೃಷಿಯನ್ನು ಮಾಡುತ್ತಿದ್ದರು ಎಂದು ಅವನು ದಾಖಲಿಸಿದ್ದಾನೆ. ಜನಸಂಖ್ಯೆಯ ಬಹುಭಾಗವೂ ಕೃಷಿಕರಾಗಿದ್ದರು. ಆದರೆ ನಿರಂತರವಾದ ಕ್ಷಾಮ, ಯುದ್ಧಗಳು ಕೃಷಿಕರನ್ನು ಕಷ್ಟಕ್ಕೊಳಪಡಿಸಿತ್ತು. ಕಬ್ಬು, ಗೋಧಿ, ನೀಲ, ಹತ್ತಿ, ಎಣ್ಣೆಬೀಜಗಳು, ಹಣ್ಣುಹಂಪಲುಗಳು, ವಿವಿಧ ತರದ ಹೂಗಳನ್ನು ಕೃಷಿ ಮಾಡುತ್ತಿದ್ದರು. ಇವು ಗಾಣದಿಂದ ಎಣ್ಣೆ ತೆಗೆಯುವುದು, ಬೆಲ್ಲ ತಯಾರಿ, ನೇಯ್ಗೆ, ಬಟ್ಟೆಗಳಿಗೆ ಬಣ್ಣ ಹಾಕುವುದು ಮುಂತಾದ ಕೈಕಸುಬುಗಳ ಬೆಳವಣಿಗೆಗೆ ಕಾರಣವಾಯಿತು. ಜಲಾಶಯಗಳಿಂದ ಎತ್ತುಗಳನ್ನು ಉಪಯೋಗಿಸಿ ಚಕ್ರವನ್ನು ತಿರುಗಿಸುವ ಮೂಲಕ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವ 'ರಹತ್ ನೀರಾವರಿ ಸಂಪ್ರದಾಯ'ವು ಈ ಪ್ರದೇಶದಲ್ಲಿ ಅಸ್ತಿತ್ವದಲ್ಲಿತ್ತು.



ರಹತ್ ನೀರಾವರಿ ಸಂಪ್ರದಾಯ

ಕೃಷಿಕ್ಷೇತ್ರದ ಬೆಳವಣಿಗೆಯ ಹೊರತಾಗಿ ಆಡಳಿತ ಸ್ಥಿರತೆ, ಸಾರಿಗೆ ವ್ಯವಸ್ಥೆಯ ಬೆಳವಣಿಗೆ, ಟಾಂಕ (ಬೆಳ್ಳಿ), ದಿರ್‌ಹಂ (ತಾಮ್ರ) ಎಂಬೀ ನಾಣ್ಯಗಳನ್ನು ಆಧರಿಸಿ ರೂಪುಗೊಂಡ ಹಣಕಾಸು ವ್ಯವಸ್ಥೆ (Monetary System) ಎಂಬಿವುಗಳು ವ್ಯಾಪಾರದ ಬೆಳವಣಿಗೆಗೆ ಕಾರಣವಾಯಿತು. ಆಮದು ಮತ್ತು ರಫ್ತುಗಳ ವರ್ಧನೆಯಾಯಿತು. ನಯವಾದ ರೇಶ್ಮೆ ಬಟ್ಟೆ, ಸ್ಪಟಿಕ, ಕುದುರೆಗಳು, ಚೀನಾ ಪಾತ್ರೆಗಳು, ಆನೆಯ ದಂತ, ಸುಗಂಧ ದ್ರವ್ಯಗಳು ಇತ್ಯಾದಿಗಳನ್ನು ವಿವಿಧ ದೇಶಗಳಿಂದ ಆಮದು ಮಾಡಲಾಯಿತು. ಭಾರತದಲ್ಲಿ ರಫ್ತು ಆಮದಿಗಿಂತ ಹೆಚ್ಚಾಗಿತ್ತು. ಆ ಕಾಲದಲ್ಲಿ ಚಿನ್ನ ಮತ್ತು ಬೆಳ್ಳಿಯು ಅಗಾಧ ಪ್ರಮಾಣದಲ್ಲಿ ಭಾರತಕ್ಕೆ ಹರಿದು ಬಂತು.

ವ್ಯಾಪಾರದ ಬೆಳವಣಿಗೆಯು ನಗರ ಮತ್ತು ನಗರ ಜೀವನವನ್ನು ಸುದೃಢಗೊಳಿಸಲು ಕಾರಣವಾಯಿತು. ದೆಹಲಿ ಮತ್ತು ದೌಲತಾಬಾದ್ ಗಳು ಅಂದಿನ ಪೂರ್ವಜಗತ್ತಿನ ಬೃಹತ್ ನಗರಗಳಾಗಿದ್ದವು. ಬಂಗಾಳ ಮತ್ತು ಗುಜರಾತಿನ ನಗರಗಳು ವಸ್ತ್ರ ವ್ಯಾಪಾರಕ್ಕೆ ಹೆಸರುವಾಸಿಯಾಗಿತ್ತು. ಲಾಹೋರ್, ಮುಲ್ತಾನ್, ಲಕ್ನೊ ಮೊದಲಾದವುಗಳು ಜನನಿಬಿಡವಾದ ನಗರಗಳಾಗಿದ್ದವು. ಇಲ್ಲಿ ನೆಲೆನಿಂತಿದ್ದ ಚರ್ಮದ ಕೆಲಸ, ಲೋಹದ ಕೆಲಸ, ಜಮಖಾನೆಗಳು, ಮರದ ಕೆಲಸದಂತಹ ಗುಡಿಕೈಗಾರಿಕೆಗಳ ಹೊರತಾಗಿ ತುರ್ಕಿಗಳು ಕಾಗದ ನಿರ್ಮಾಣವನ್ನು ಆರಂಭಿಸಿದರು. ದೇಶದ ಭೂಮಿಯೆಲ್ಲವನ್ನು ಇಖ್ತಾಗಳಾಗಿ ವಿಂಗಡಿಸಿ ತುರ್ಕಿ ಪ್ರಭುಗಳಿಗೆ ಹಂಚಿದರು. ಈ ಇಖ್ತಾಗಳಿಂದ ಭೂತೆರಿಗೆಯನ್ನು ಪ್ರಭುಗಳು ವಸೂಲಿ ಮಾಡಿ ಸುಲ್ತಾನರಿಗೆ ನೀಡುತ್ತಿದ್ದರು. ತೆರಿಗೆಯನ್ನು ಹಣದ ರೂಪದ ಮೂಲಕ ವಸೂಲಿ ಮಾಡಿದ್ದು ಒಂದು ಹಣದ ಆರ್ಥಿಕತೆಯ ಅವಿರ್ಭಾವಕ್ಕೂ ಆ ಮೂಲಕ ಬೃಹತ್ ಪ್ರಮಾಣದ ಆರ್ಥಿಕ ಅಭಿವೃದ್ಧಿಗೂ ದಾರಿಮಾಡಿಕೊಟ್ಟಿತು.

### ಇಖ್ತಾ ಸಂಪ್ರದಾಯ

ದೆಹಲಿಯ ಸುಲ್ತಾನನಾಗಿದ್ದ ಇಲ್ತುಮಿಷ್ ನ ಕಾಲದಲ್ಲಿ ಇಖ್ತಾ ಸಂಪ್ರದಾಯವನ್ನು ಆರಂಭಿಸಲಾಯಿತು. ದೇಶವನ್ನು ಸಣ್ಣ ಮತ್ತು ದೊಡ್ಡ ಭೂಪ್ರದೇಶಗಳಾಗಿ ವಿಂಗಡಿಸಿ ಅವುಗಳನ್ನು ಸೈನಿಕರು, ಉದ್ಯೋಗಸ್ಥರು ಮತ್ತು ಪ್ರಭುಗಳಿಗೆ ಹಂಚಿಕೊಡುವ ಭೂದಾನ ವ್ಯವಸ್ಥೆಯು ಇದಾಗಿತ್ತು. ದಾನವಾಗಿ ನೀಡುವ ಪ್ರದೇಶವನ್ನು ಇಖ್ತಾ ಎಂದು ಕರೆಯುತ್ತಿದ್ದರು.

ಸುಲ್ತಾನರ ಆಡಳಿತ ಕಾಲದಲ್ಲಿ ಕೃಷಿ ಕ್ಷೇತ್ರದಲ್ಲುಂಟಾದ ಪ್ರಗತಿಯು ದೇಶದ ಆರ್ಥಿಕ ಕ್ಷೇತ್ರದಲ್ಲಿ ಯಾವೆಲ್ಲಾ ರೀತಿಯಲ್ಲಿ ಪ್ರಭಾವ ಬೀರಿತೆಂದು ಪರಿಶೋಧಿಸಿರಿ.

ಇನ್ನು ಸುಲ್ತಾನರ ಕಾಲದಲ್ಲಿನ ಸಾಮಾಜಿಕ ಜೀವನವು ಹೇಗಿತ್ತೆಂದು ನೋಡುವ. ಮಧ್ಯಕಾಲದ ಸಮಾಜವು ಅನೇಕ ರೀತಿಯ ಅಸಮಾನತೆಗಳಿಂದ ಕೂಡಿತ್ತು. ಸುಲ್ತಾನರು, ಮುಖ್ಯ ಪ್ರಭುಗಳು, 'ಮುಖ್‌ದಂ' ಎಂದು ಕರೆಯಲ್ಪಡುತ್ತಿದ್ದ ಗ್ರಾಮದ ಮುಖ್ಯಸ್ಥ, ಸಣ್ಣ ಪ್ರಭುಗಳು ಸಮಾಜದಲ್ಲಿ ಉನ್ನತ ಮಟ್ಟದ ಜೀವನವನ್ನು ನಡೆಸುತ್ತಿದ್ದರು. ನಗರ ಮತ್ತು ಗ್ರಾಮಗಳಲ್ಲಿದ್ದ ಬಹುಪಾಲು ಜನರು ಅನೇಕ ಯಾತನೆಗಳನ್ನು ಅನುಭವಿಸುತ್ತಿದ್ದರು. ಜಾತಿ ವ್ಯವಸ್ಥೆ ಆಧಾರಿತವಾಗಿ ನೆಲೆನಿಂತ ಸಾಮಾಜಿಕ ರಚನೆಗೆ ಸ್ತ್ರೀಯರ ಸ್ಥಾನಮಾನದಲ್ಲಿ ಮೂಲಭೂತವಾದ ಯಾವುದೇ ಬದಲಾವಣೆಗಳು ಸಂಭವಿಸಲಿಲ್ಲ. ಆದರೆ ಸ್ತ್ರೀಯರ ಸ್ಥಾನಮಾನದಲ್ಲಿ ಸಣ್ಣ ಪ್ರಮಾಣದ ಬದಲಾವಣೆಯಾಯಿತು ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಸಂಪತ್ತಿನ ಮೇಲಿರುವ ಸ್ತ್ರೀಯರ ಅಧಿಕಾರದಲ್ಲಿ ಪ್ರಗತಿಪರವಾದ ಈ ಬದಲಾವಣೆಯನ್ನು ಕಾಣಲು ಸಾಧ್ಯವಾಯಿತು. ಆದರೆ ಜಾತಿ ವ್ಯವಸ್ಥೆಯು ಸ್ಥಳೀಯರು ಮತ್ತು ಇಸ್ಲಾಂ ಮತಾನುಯಾಯಿಗಳ ನಡುವಿನ ವ್ಯವಹಾರದ ಮೇಲೆ ಯಾವುದೇ ಪ್ರಭಾವವನ್ನು ಬೀರಲಿಲ್ಲ. ಸೈನ್ಯ ಮತ್ತು ಆಡಳಿತ ರಂಗದ ಪ್ರಮುಖ ಹುದ್ದೆಗಳಲ್ಲಿ ಹಿಂದೂಗಳಿದ್ದರು.

ಕೆಳಗೆ ನೀಡಿದ ಸೂಚಕಗಳ ಆಧಾರದಲ್ಲಿ ಪ್ರಾಚೀನ ಭಾರತದ ಸಾಮಾಜಿಕ ಜೀವನವನ್ನು ಸುಲ್ತಾನರ ಆಡಳಿತ ಕಾಲದ ಸಾಮಾಜಿಕ ಜೀವನದೊಂದಿಗೆ ಹೋಲಿಸಿರಿ.

| | ಪ್ರಾಚೀನ ಭಾರತ | ಸುಲ್ತಾನ್ ಆಡಳಿತ |
|---|---|---|
| ಆಡಳಿತ ವ್ಯವಸ್ಥೆ | ........................................ | ........................................ |
| ಸ್ತ್ರೀ ಸ್ಥಾನಮಾನ | ........................................ | ........................................ |



## ಸಾಂಸ್ಕೃತಿಕ ಜೀವನ

ನಿಮಗೆ ಪರಿಚಿತವಾಗಿರುವ ಕೆಲವೊಂದು ಸಂಗೀತ ಉಪಕರಣಗಳ ಚಿತ್ರಗಳನ್ನು ಕೆಳಗೆ ನೀಡಲಾಗಿದೆ. ಇವುಗಳನ್ನು ಹೆಸರಿಸಬಹುದೇ? ದೆಹಲಿ ಸುಲ್ತಾನರ ಕಾಲದಲ್ಲಿ ಈ ಸಂಗೀತ ಉಪಕರಣಗಳು ಭಾರತಕ್ಕೆ ಬಂದವು. ಈ ರೀತಿಯಲ್ಲಿ ಸುಲ್ತಾನರ ಆಡಳಿತವು ಭಾರತದ ಸಾಂಸ್ಕೃತಿಕ ಜೀವನದ ಮೇಲೆ ಗಾಢವಾದ ಪ್ರಭಾವವನ್ನು ಬೀರಿತ್ತು. ಭಾರತದ ವಿವಿಧ ಪ್ರದೇಶಗಳಲ್ಲಿಯೂ ಜನಜೀವನದ ವಿವಿಧ ವಲಯಗಳಲ್ಲಿಯೂ ವ್ಯತ್ಯಸ್ತ ರೀತಿಯಲ್ಲಿ ಸುಲ್ತಾನರ ಆಡಳಿತವು ಪ್ರಭಾವ ಬೀರಿತು. ಅಲ್ಲದೆ ಅದು ಒಮ್ಮೆಲೆ ಸಂಭವಿಸಿದ್ದಲ್ಲ. ದೀರ್ಘಕಾಲದ ಪರಸ್ಪರ ಸಂಬಂಧದಿಂದ ಎರಡು ಸಂಸ್ಕೃತಿಗಳ ಸಮನ್ವಯವು ರೂಪುಗೊಂಡಿತು. ಅದರಲ್ಲಿ ಕೆಲವೊಂದು ಏರುಪೇರುಗಳನ್ನು ಕಾಣಬಹುದು.

ಸಂಗೀತದ ಹೊರತಾಗಿ ವಾಸ್ತುವಿದ್ಯೆ, ಸಾಹಿತ್ಯ ಎಂಬೀ ರಂಗಗಳಲ್ಲಿಯೂ ಈ ಪ್ರಭಾವವನ್ನು ಕಾಣಲು ಸಾಧ್ಯವಿದೆ. ದೆಹಲಿಯಲ್ಲಿರುವ ಕುತುಬ್ ಮಿನಾರ್, ತುಗ್ಲಕಾಬಾದ್ ಕೋಟೆ, ಹೋಸ್ ಖಾಸ್ ಸಮುಚ್ಚಯ, ಲೋಧಿ ಗಾರ್ಡನ್ ಎಂಬಿವುಗಳು ವಾಸ್ತುವಿದ್ಯಾರಂಗದ ಕೊಡುಗೆಗಳಿಗೆ ಕೆಲವು ಉದಾಹರಣೆಗಳಾಗಿವೆ.


ಕುತುಬ್ ಮಿನಾರ್


ತುಗ್ಲಕಾಬಾದ್ ಕೋಟೆ


ಹೋಸ್ ಖಾಸ್ ಸಮುಚ್ಚಯ


ಲೋಧಿ ಗಾರ್ಡನ್

ಈ ಕಾಲದಲ್ಲಿ ಅರಬೀ ಭಾಷೆಯಲ್ಲಿ ಹಲವಾರು ಕೃತಿಗಳು ರಚಿಸಲ್ಪಡುವುದರೊಂದಿಗೆ ಭಾರತದ ಕೆಲವು ವಿಜ್ಞಾನ ಕೃತಿಗಳೂ ಜ್ಯೋತಿಶ್ಯಾಸ್ತ್ರ ಗ್ರಂಥಗಳೂ ಅರಬಿ ಭಾಷೆಗೆ ಭಾಷಾಂತರಗೊಂಡವು. ತುರ್ಕಿಗಳ ಆಗಮನದೊಂದಿಗೆ ಪರ್ಶಿಯನ್ ಭಾಷೆಯು ಭಾರತಕ್ಕೆ ಬಂತು. ಅಮೀರ್ ಖುಸ್ರು ಪರ್ಶಿಯನ್ ಭಾಷೆಯಲ್ಲಿ ಮನೋಹರವಾದ ಗ್ರಂಥಗಳನ್ನು ರಚಿಸಿದ ಸಾಹಿತ್ಯಗಾರನಾಗಿದ್ದನು. ಚರಿತ್ರೆ ರಚನೆಯು ಆ ಕಾಲದಲ್ಲಿ ಒಂದು ಪ್ರಮುಖ ಅಧ್ಯಯನ ಶಾಖೆಯಾಗಿ ಬೆಳೆದುಬಂತು. ಸಿಯಾವುದ್ದೀನ್ ಬರಾನಿ ಸುಲ್ತಾನರ ಆಡಳಿತ ಕಾಲದಲ್ಲಿ ಭಾರತದಲ್ಲಿ ಜೀವಿಸಿದ್ದ ಪ್ರಸಿದ್ಧ ಚರಿತ್ರೆಗಾರನಾಗಿದ್ದನು.

## ಉರ್ದು ಭಾಷೆ ಮತ್ತು ಅಮೀರ್ ಖುಸ್ರು

ದೆಹಲಿ ಮತ್ತು ಪರಿಸರ ಪ್ರದೇಶಗಳಲ್ಲಿನ ಜನರ ಆಡುಭಾಷೆಯಾಗಿದ್ದ ಹಿಂದಾವಿ ಮತ್ತು ವಿದೇಶೀ ಭಾಷೆಯಾದ ಪರ್ಶಿಯನಿನ ಸಂಯೋಜನೆಯಿಂದ ಉರ್ದು ಭಾಷೆಯು ರೂಪುಗೊಂಡಿತು. ಮಧ್ಯಕಾಲ ಭಾರತದಲ್ಲಿ ಜೀವಿಸಿದ್ದ ಪ್ರಸಿದ್ಧ ಕವಿಯಾದ ಅಮೀರ್ ಖುಸ್ರು ಉರ್ದು ಭಾಷೆಯ ವಿಕಾಸದಲ್ಲಿ ಪ್ರಧಾನ ಪಾತ್ರ ವಹಿಸಿದ್ದನು. ಭಾರತದ ಕುರಿತಾಗಿ ಅಮೀರ್ ಖುಸ್ರು ಒಮ್ಮೆ ಆಡಿದ ಮಾತುಗಳನ್ನು ಕೆಳಗೆ ನೀಡಲಾಗಿದೆ.

"ಭಾರತವನ್ನು ನಾನು ಎರಡು ಕಾರಣಗಳಿಗಾಗಿ ಪ್ರೀತಿಸುತ್ತೇನೆ. ಮೊದಲನೆಯದಾಗಿ ಭಾರತವು ನನ್ನ ಜನ್ಮಭೂಮಿಯಾಗಿದೆ. ಜನ್ಮದೇಶವನ್ನು ಪ್ರೀತಿಸುವುದು ಪ್ರತಿಯೋರ್ವನ ವಿಶ್ವಾಸದ ಭಾಗವಾಗಿದೆ. ಎರಡನೆಯದಾಗಿ ಭಾರತವು ಒಂದು ಸುಂದರ ಲೋಕವಾಗಿದೆ. ಇಲ್ಲಿನ ಹವಾಗುಣವು ಖುರಾಸನ್‌ಗಿಂತಲೂ ಸುಂದರವಾಗಿದೆ. ಇಲ್ಲಿನ ಭೂಪ್ರಕೃತಿಯು ವರ್ಷಪೂರ್ತಿ ಹೂಗಳಿಂದಲೂ ಹಚ್ಚ ಹಸಿರಿನಿಂದಲೂ ಕೂಡಿದೆ."

ಸುಲ್ತಾನರ ಆಡಳಿತ ಕಾಲದ ಸಾಂಸ್ಕೃತಿಕ ಕೊಡುಗೆಗಳು ಭಾರತದ ಸಂಸ್ಕೃತಿಯ ಮೇಲೆ ಈಗಲೂ ಯಾವ ಪ್ರಮಾಣದಲ್ಲಿ ಪ್ರತಿಫಲಿಸುತ್ತಿದೆ ಎಂಬ ವಿಷಯದಲ್ಲಿ ಒಂದು ಚರ್ಚೆಯನ್ನು ಆಯೋಜಿಸಿರಿ.

ಗುಪ್ತರ ಆಡಳಿತದ ಪತನದ ನಂತರ ಭಾರತದಲ್ಲಿ ಆಡಳಿತಾತ್ಮಕವಾಗಿ ಗಮನಾರ್ಹವಾದ ಹಸ್ತಕ್ಷೇಪವು ಉಂಟಾದುದು ದಖ್ಖಣ ಮತ್ತು ದಕ್ಷಿಣ ಭಾರತದಲ್ಲಾಗಿತ್ತು. ಈ ಪ್ರದೇಶಗಳಲ್ಲಿ ಸಣ್ಣ ರಾಜ್ಯಗಳ ಸ್ಥಾನದಲ್ಲಿ ದೊಡ್ಡ ಆಡಳಿತ ಒಕ್ಕೂಟಗಳು ಬೆಳೆದು ಬಂದವು. ಪ್ರಾದೇಶಿಕ ಸಂಸ್ಕೃತಿಗಳು ಬಲಗೊಂಡವು. ವ್ಯಕ್ತಿ ಕೇಂದ್ರೀಕೃತವಲ್ಲದ ರಾಜ್ಯಾಡಳಿತವು ಆವಿರ್ಭವಿಸಿತು. ಎಂಟನೆಯ ಶತಮಾನದಲ್ಲಿ ಅರಬಿಗಳು ಸಿಂಧನ್ನು ವಶಪಡಿಸಿದ ನಂತರ ಭಾರತಕ್ಕೆ ಲಗ್ಗೆಯಿಟ್ಟ ತುರ್ಕಿಗಳಿಂದಾಗಿ ಸುಮಾರು ಮುನ್ನೂರು ವರ್ಷಗಳ ವರೆಗೆ ಭಾರತವು ದೆಹಲಿಯ ಸುಲ್ತಾನರ ಆಡಳಿತಕ್ಕೊಳಪಟ್ಟಿತು. ಭಾರತವು ಈ ಕಾಲದಲ್ಲಿ ಏಕೀಕೃತ ಮತ್ತು ಸ್ಥಿರವಾದ ಒಂದು ಆಡಳಿತ ಕ್ರಮಕ್ಕೆ ಸಾಕ್ಷಿಯಾಯಿತು. ಇದು ಸಾಂಸ್ಕೃತಿಕ ವಿನಿಮಯ ಮತ್ತು ಸಮನ್ವಯದ ಕಾಲಘಟ್ಟವೂ ಆಗಿತ್ತು.

ಸುಲ್ತಾನರ ಆಡಳಿತವು ಭಾರತದ ಆಡಳಿತ ರೀತಿ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಬೀರಿದ ಪ್ರಭಾವದ ಕುರಿತಾಗಿ ತರಗತಿಯಲ್ಲಿ ಒಂದು ಸೆಮಿನಾರ್ ಆಯೋಜಿಸಿರಿ.

## ಮುಂದುವರಿದ ಚಟುವಟಿಕೆಗಳು

- ಭಾರತದಲ್ಲಿ ವಾಸ್ತುವಿದ್ಯಾರಂಗದಲ್ಲಿ ಉಂಟಾದ ಬದಲಾವಣೆಗಳು ಮತ್ತು ಪ್ರಭಾವವನ್ನು ಬಿಂಬಿಸುವ ಒಂದು ಡಿಜಿಟಲ್ ಸಂಚಿಕೆಯನ್ನು ತಯಾರಿಸಿರಿ.
- ದಕ್ಷಿಣ ಭಾರತದ ಪ್ರಧಾನ ರಾಜವಂಶಗಳ ಮತ್ತು ದೆಹಲಿಯ ಸುಲ್ತಾನರ ಕಾಲದ ಭೂಪಟಗಳನ್ನು ಸೇರಿಸಿ ಡಿಜಿಟಲ್ ಅಟ್ಲಾಸ್ ತಯಾರಿಸಿರಿ.
- ಸುಲ್ತಾನರ ಆಡಳಿತ ಕಾಲದಲ್ಲಿ ಭಾರತದ ಸಾಂಸ್ಕೃತಿಕರಂಗದಲ್ಲಿ ಉಂಟಾದ ಬದಲಾವಣೆಗಳನ್ನು ವಿಶದೀಕರಿಸುವ ಡಿಜಿಟಲ್ ಪ್ರೆಸೆಂಟೇಶನ್ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.



# 7 ಸಂಸ್ಥೆಗಳ ಮೂಲಕ ಪ್ರಜಾಪ್ರಭುತ್ವದ ವ್ಯಾಪಿಸುವಿಕೆ



THE CONSTITUTION OF INDIA

PREAMBLE

WE, THE PEOPLE OF INDIA,
having solemnly resolved to constitute India into a
SOVEREIGN SOCIALIST
SECULAR DEMOCRATIC REPUBLIC
and to secure to all its citizens:
JUSTICE, social, economic and political;
LIBERTY of thought, expression,
belief, faith and worship;
EQUALITY of status and of opportunity;
and to promote among them all
FRATERNITY assuring the dignity of the
individual and the unity and
integrity of the Nation;
IN OUR CONSTITUENT ASSEMBLY
this twenty-sixth day of November, 1949, do
HEREBY ADOPT, ENACT AND GIVE TO
OURSELVES THIS CONSTITUTION.



ಪ್ರಜಾಪ್ರಭುತ್ವವು ಒಂದು ಆಡಳಿತ ವಿಧಾನವೆಂಬುದಕ್ಕಿಂತ ಮಿಗಿಲಾಗಿ ಪೌರನ ವೈವಿಧ್ಯಮಯವಾದ ಆವಶ್ಯಕತೆಗಳು ಹಾಗೂ ಆಸಕ್ತಿಗಳನ್ನು ಈಡೇರಿಸುವ ಮತ್ತು ತನ್ಮೂಲಕ ಘನತೆಯಿಂದ ಕೂಡಿದ ಜೀವನವನ್ನು ಖಾತರಿಪಡಿಸುವ ವ್ಯವಸ್ಥೆಯೂ ಆಗಿದೆ. ಭಾರತದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆ ಮತ್ತು ಅದರ ಸಾರ್ವತ್ರಿಕ ವ್ಯಾಪಿಸುವಿಕೆಗಾಗಿ ಸಂವಿಧಾನಾತ್ಮಕವಾಗಿ ಅಸ್ತಿತ್ವಕ್ಕೆ ಬಂದ ಹಲವು ಸಂಸ್ಥೆಗಳು ಕಾರ್ಯವೆಸಗುತ್ತಿವೆ.

### ಶಿಕ್ಷಣದ ಹಕ್ಕನ್ನು ಖಾತರಿಪಡಿಸಲಾಗುವುದು : ರಾಷ್ಟ್ರೀಯ ಹಿಂದುಳಿದ ಆಯೋಗ

ಮಧ್ಯಪ್ರದೇಶ: ಹಿಂದುಳಿದ ವರ್ಗದವರಿಗಾಗಿ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಲು ಶಿಫಾರಸು ಮಾಡುವುದಾಗಿ ರಾಷ್ಟ್ರೀಯ ಹಿಂದುಳಿದ ಆಯೋಗವು ಪತ್ರಿಕಾಗೋಷ್ಠಿಯೊಂದರಲ್ಲಿ ತಿಳಿಸಿತು. ಈ ವಿಭಾಗಗಳ ಆರ್ಥಿಕ ಹಿಂದುಳಿಯುವಿಕೆಯನ್ನು ಪರಿಹರಿಸಲಿರುವ ಕ್ರಮಗಳೂ ಇದರಲ್ಲಿರಬಹುದೆಂದು ಆಯೋಗವು ಹೇಳಿದೆ.

### ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗದವರ ಆರ್ಥಿಕ – ಸಾಮಾಜಿಕ ಏಳಿಗೆಗಾಗಿ ಕ್ರಮ

ನವದೆಹಲಿ : ದೇಶದ ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗ ವಿಭಾಗದವರ ಪ್ರಗತಿಗಾಗಿ ಕ್ರಮಗಳನ್ನು ಕೈಗೊಳ್ಳುವುದೆಂದು ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ ಮತ್ತು ರಾಷ್ಟ್ರೀಯ ಪರಿಶಿಷ್ಟ ವರ್ಗ ಆಯೋಗಗಳು ತಿಳಿಸಿದವು. ಈ ವಿಭಾಗದವರನ್ನು ಸಮಾಜದ ಮುಖ್ಯವಾಹಿನಿಗೆ ತಲುಪಿಸುವುದಕ್ಕಾಗಿ ವಸತಿ ಸೌಕರ್ಯವೂ ಒಳಗೊಂಡಂತೆ ಮೂಲಭೂತ ಸೌಕರ್ಯಗಳನ್ನು ಶಿಕ್ಷಣ ಸೌಕರ್ಯಗಳನ್ನೂ ಆಯಾ ಸಮಯಗಳಲ್ಲಿ ಒದಗಿಸುವುದಕ್ಕಿರುವ ಶಿಫಾರಸ್ಸುಗಳನ್ನು ನೀಡಲಾಗುವುದೆಂದೂ ಆಯೋಗವು ತಿಳಿಸಿತು.

### ಮಾನವ ಹಕ್ಕುಗಳ ಉಲ್ಲಂಘನೆ : ಆಯೋಗದಿಂದ ದಾವೆ ಸ್ವೀಕಾರ

ನವದೆಹಲಿ : ಉದ್ಯೋಗ ಕ್ಷೇತ್ರದಲ್ಲಿ ನಡೆಯುವ ಮಾನವ ಹಕ್ಕುಗಳ ಉಲ್ಲಂಘನೆಗೆದುರಾಗಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸ್ವಯಂಪ್ರೇರಿತವಾಗಿ ದಾವೆಯನ್ನು ಸ್ವೀಕರಿಸಿತು. ವಿವಿಧ ಮಾಧ್ಯಮಗಳಲ್ಲಿ ಇದಕ್ಕೆ ಸಂಬಂಧಿಸಿ ಬಂದ ವಾರ್ತೆಗಳ ಆಧಾರದಲ್ಲಿ ಆಯೋಗವು ಈ ಕ್ರಮ ತೆಗೆದುಕೊಂಡಿದೆ.

### ಸ್ತ್ರೀ ಸುರಕ್ಷಾ ಕ್ರಮಗಳು ಅನಿವಾರ್ಯ

ನವದೆಹಲಿ : ಸ್ತ್ರೀಯರಿಗೆದುರಾಗಿ ಹೆಚ್ಚುತ್ತಿರುವ ಅತಿಕ್ರಮಣಗಳನ್ನು ತಡೆಯುವುದಕ್ಕಾಗಿ ಕ್ರಮಗಳನ್ನು ಕೈಗೊಳ್ಳುವಂತೆಯೂ ಸ್ತ್ರೀ ಸುರಕ್ಷಾ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದಕ್ಕೂ ಸರಕಾರಗಳಿಗೆ ನಿರ್ದೇಶಿಸುವುದಾಗಿ ರಾಷ್ಟ್ರೀಯ ವನಿತಾ ಆಯೋಗವು ತಿಳಿಸಿತು.

### ಲೋಕಸಭೆ ಚುನಾವಣೆ ಅಧಿಸೂಚನೆ

ನವದೆಹಲಿ : ಹದಿನೆಂಟನೇ ಲೋಕಸಭೆ ಚುನಾವಣೆಗಿರುವ ಅಧಿಸೂಚನೆಯನ್ನು ಹೊರಡಿಸಲಾಯಿತು. ದೇಶದಲ್ಲಿ ಏಳು ಹಂತಗಳಲ್ಲಾಗಿ ಚುನಾವಣೆ ನಡೆಸಲು ತೀರ್ಮಾನಿಸಿರುವುದಾಗಿ ಆಯೋಗವು ತಿಳಿಸಿತು. ಇದರ ಪೂರ್ವ ತಯಾರಿಯಾಗಿ ಮತದಾರರ ಪಟ್ಟಿಯ ನವೀಕರಣವೂ ಒಳಗೊಂಡಂತೆ ವಿವಿಧ ಕ್ರಮಗಳನ್ನು ಆಯೋಗವು ಪ್ರಾರಂಭಿಸಿತು.

### ಅಲ್ಪಸಂಖ್ಯಾತ ಹಕ್ಕುಗಳ ರಕ್ಷಣೆ : ಆಯೋಗದ ಮಧ್ಯಪ್ರವೇಶ

ನವದೆಹಲಿ : ಅಲ್ಪಸಂಖ್ಯಾತರಿಗೆದುರಾದ ಅತಿಕ್ರಮಣಗಳಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗವು ಅಸಮಾಧಾನವನ್ನು ವ್ಯಕ್ತಪಡಿಸಿತು. ಮತ – ಭಾಷೆ – ಸಾಂಸ್ಕೃತಿಕ ಅಲ್ಪಸಂಖ್ಯಾತರ ಹಕ್ಕುಗಳನ್ನು ಕಾಪಾಡುವುದಕ್ಕಿರುವ ನಿರ್ದೇಶಗಳನ್ನು ಆಯೋಗವು ಮುಂದಿರಿಸಿತು.

ಮೇಲೆ ನೀಡಿರುವ ವಾರ್ತೆಗಳಲ್ಲಿ ಪ್ರಜಾಪ್ರಭುತ್ವದ ಅನುಷ್ಠಾನಕ್ಕಾಗಿ ರೂಪಿಸಲಾದ ವಿವಿಧ ವ್ಯವಸ್ಥೆಗಳನ್ನು ಸೂಚಿಸಲಾಗಿದೆ. ಅವು ಯಾವುವು ಎಂಬುದನ್ನು ಕಂಡುಹಿಡಿಯಬಹುದೇ?

- ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗ
- 
- 
- 
- 
- 

ಈ ಸಂಸ್ಥೆಗಳನ್ನು ಸಾಂವಿಧಾನಿಕ ಸಂಸ್ಥೆಗಳೆಂದೂ ಸಾಂವಿಧಾನೇತರ ಸಂಸ್ಥೆಗಳೆಂದೂ ಎರಡಾಗಿ ವರ್ಗೀಕರಿಸಬಹುದು. ಸಂವಿಧಾನವು ಅಸ್ತಿತ್ವಕ್ಕೆ ಬಂದಾಗಲೇ ರೂಪುಗೊಂಡ ಸ್ವ-ಆಡಳಿತ ಸಂಸ್ಥೆಗಳನ್ನು ಸಾಂವಿಧಾನಿಕ ಸಂಸ್ಥೆಗಳೆಂದು ಕರೆಯುತ್ತಾರೆ. ಈ ಸಂಸ್ಥೆಗಳ ಅಧಿಕಾರದ ಮೂಲವು ಸಂವಿಧಾನವಾಗಿದೆ. ಈ ಸಂಸ್ಥೆಗಳ ಅಧಿಕಾರ, ರಚನೆ ಎಂಬಿವುಗಳಲ್ಲಿ ಬದಲಾವಣೆ ಮಾಡಬೇಕಿದ್ದರೆ ಸಂವಿಧಾನದ ತಿದ್ದುಪಡಿಯು ಅನಿವಾರ್ಯವಾಗಿದೆ. ಆದರೆ ಸಾಂವಿಧಾನೇತರ ಸಂಸ್ಥೆಗಳು ಸಂಸತ್ತಿನಲ್ಲಿ ಅಂಗೀಕಾರಗೊಳ್ಳುವ

ನಿಯಮಗಳಿಗನುಸಾರವಾಗಿ ರೂಪುಗೊಳ್ಳುವ ಸಂಸ್ಥೆಗಳಾಗಿವೆ. ಇವುಗಳಿಗೆ ಅನಂತರ ಆವಶ್ಯಕತೆಗನುಸಾರವಾಗಿ ಸಾಂವಿಧಾನಿಕ ಪದವಿ ಲಭಿಸುವುದಿದೆ.

ಸಂವಿಧಾನದ ಮೂಲಭೂತ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ, ಸಾಮಾಜಿಕ ನೀತಿ, ಜಾತ್ಯತೀತತೆ ಮೊದಲಾದ ಆಶಯಗಳನ್ನು ನಮ್ಮ ದೇಶದಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸುವಲ್ಲಿ ಈ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತವೆ. ದೇಶದ ಎಲ್ಲ ವಿಭಾಗದ ಜನರನ್ನೂ ಒಳಪಡಿಸಿಕೊಂಡು ಈ ಸಂಸ್ಥೆಗಳು ಪ್ರಜಾಪ್ರಭುತ್ವದ ಮೂಲಭೂತ ಉದ್ದೇಶಗಳನ್ನು ಸಾಧಿಸುತ್ತವೆ. ಕಡೆಗಣಿಸಲ್ಪಟ್ಟವರು ಮತ್ತು ದುರ್ಬಲರಾದ ಜನ ವಿಭಾಗಗಳ ಪಾಲ್ಗೊಳ್ಳುವಿಕೆಯಿಂದ ಮಾತ್ರವೇ ಪ್ರಜಾಪ್ರಭುತ್ವವು ಯಶಸ್ವಿಯಾಗಬಹುದು. ಅದಕ್ಕಾಗಿ ಇಂತಹ ಜನವಿಭಾಗಗಳ ಬಯಕೆ ಮತ್ತು ಆಸಕ್ತಿಗಳನ್ನು ನ್ಯಾಯಯುತವಾಗಿ ಪರಿಗಣಿಸಬೇಕಾಗಿದೆ. ಭಾರತದಲ್ಲಿ ಈ ಧರ್ಮವನ್ನು ನಿರ್ವಹಿಸುವುದರಲ್ಲಿ ಸಾಂವಿಧಾನಿಕ ಮತ್ತು ಸಾಂವಿಧಾನೇತರ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಮೇಲೆ ಹೇಳಲಾದ ಸಂಸ್ಥೆಗಳು ಪ್ರಜಾಪ್ರಭುತ್ವದ ವ್ಯಾಪಿಸುವಿಕೆ ಹೇಗೆ ಸಹಾಯಮಾಡುತ್ತವೆ ಎಂದು ಪರಿಶೀಲಿಸೋಣ.

## ಚುನಾವಣಾ ಆಯೋಗ










ಮೇಲೆ ನೀಡಿರುವವುಗಳು ಚುನಾವಣೆಗೆ ಸಂಬಂಧಿಸಿದ ಕೆಲವು ಚಿತ್ರಗಳಾಗಿವೆ. ಈ ಚಿತ್ರಗಳು ಯಾವ ಯಾವ ಪ್ರಕ್ರಿಯೆಗಳನ್ನು ಸೂಚಿಸುತ್ತವೆ?

- ಮತದಾನ ಮಾಡಲು ಸರತಿ ಸಾಲಿನಲ್ಲಿ ನಿಲ್ಲುತ್ತಾರೆ.
- 
- 




ಚುನಾವಣಾ ಆಯೋಗದ ಕೇಂದ್ರ ಕಛೇರಿ – ನವದೆಹಲಿ

ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ಚುನಾವಣೆಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ ಎಂಬುದು ನಿಮಗೆ ತಿಳಿದಿದೆಯಲ್ಲವೆ? ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳು ಮತ್ತು ಆಡಳಿತಾಧಿಕಾರಿಗಳು ಚುನಾವಣೆಯ ಮೂಲಕ ಅಧಿಕಾರಕ್ಕೆ ಬರುತ್ತಾರೆ. ಆದುದರಿಂದ ನ್ಯಾಯಸಮ್ಮತವೂ ನಿಷ್ಪಕ್ಷಪಾತವೂ ಆದ ಚುನಾವಣೆಯನ್ನು ಖಾತರಿಪಡಿಸುವುದಕ್ಕಾಗಿ ಸ್ವತಂತ್ರ ಹಾಗೂ ಅಧಿಕೃತವಾದ ವ್ಯವಸ್ಥೆಯೊಂದು ಅನಿವಾರ್ಯವಾಗಿದೆ. ಭಾರತದಲ್ಲಿ ಚುನಾವಣಾ ಆಯೋಗವು (Election Commission of India) ಈ ಜವಾಬ್ದಾರಿಯನ್ನು ನಿರ್ವಹಿಸುವ ಸಾಂವಿಧಾನಿಕ ಸಂಸ್ಥೆಯಾಗಿದೆ.

ಸಂವಿಧಾನದ ಅನುಚ್ಛೇದ 324 ರ ಪ್ರಕಾರ 1950 ಜನವರಿ 25 ರಂದು ಭಾರತೀಯ ಚುನಾವಣಾ ಆಯೋಗವು ಅಸ್ತಿತ್ವಕ್ಕೆ ಬಂತು. ಈಗಿನ ಚುನಾವಣಾ ಆಯೋಗದಲ್ಲಿ ಓರ್ವ ಮುಖ್ಯ ಚುನಾವಣಾ ಆಯುಕ್ತರು ಮತ್ತು ಇಬ್ಬರು ಆಯುಕ್ತರಿದ್ದಾರೆ. ರಾಷ್ಟ್ರಪತಿಗಳು ಇವರನ್ನು ನೇಮಿಸುತ್ತಾರೆ. ಆಯೋಗದ ಸದಸ್ಯರ ಅಧಿಕಾರಾವಧಿ ಆರು ವರ್ಷ ಅಥವಾ 65 ವರ್ಷ ಪ್ರಾಯವಾಗಿದೆ. ಮಹಾಭಿಯೋಗದ ಮೂಲಕ ಮಾತ್ರ ಮುಖ್ಯ ಚುನಾವಣಾ ಆಯುಕ್ತರನ್ನು ಆ ಸ್ಥಾನದಿಂದ ಪದಚ್ಯುತಿಗೊಳಿಸಲು ಸಾಧ್ಯ. ಮುಖ್ಯ ಚುನಾವಣಾ ಅಧಿಕಾರಿಯು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತ್ತು ರಾಜ್ಯಗಳಲ್ಲಿ ಚುನಾವಣಾ ಆಯೋಗದ ಕಾರ್ಯ ಚಟುವಟಿಕೆಗಳ ಸಮನ್ವಯವನ್ನು ಮಾಡುತ್ತಾರೆ.

### ಇಲೆಕ್ಟ್ರೋನಿಕ್ ವೋಟಿಂಗ್ ಮೆಷಿನ್ (EVM)

ಭಾರತದ ಚುನಾವಣೆಯು ಜಗತ್ತಿನಲ್ಲೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಪ್ರಕ್ರಿಯೆಯಾಗಿದೆ. ಚುನಾವಣಾ ಪ್ರಕ್ರಿಯೆಯನ್ನು ಹೆಚ್ಚು ಪಾರದರ್ಶಕವಾಗಿಸಲು ಹಾಗೂ ಚುನಾವಣಾ ಅಪರಾಧಗಳನ್ನು ತಡೆಯುವುದಕ್ಕಾಗಿ ಚುನಾವಣಾ ಆಯೋಗವು ಇಲೆಕ್ಟ್ರೋನಿಕ್ ವೋಟಿಂಗ್ ಮೆಷಿನ್ (EVM). ವ್ಯವಸ್ಥೆಯನ್ನು ಜಾರಿಗೊಳಿಸಿತು. 1982 ರಲ್ಲಿ ಕೇರಳದ ಪರವೂರ್ ವಿಧಾನಸಭಾ ಮಂಡಲದಲ್ಲಿ ನಡೆದ ಉಪಚುನಾವಣೆಯಲ್ಲಿ ಮೊತ್ತ ಮೊದಲ ಬಾರಿಗೆ ಇಲೆಕ್ಟ್ರೋನಿಕ್ ವೋಟಿಂಗ್ ಮೆಷಿನನ್ನು ಪರೀಕ್ಷಿಸಲಾಯಿತು. 2004 ರ ಪಾರ್ಲಿಮೆಂಟು ಚುನಾವಣೆಯಲ್ಲಿ 543 ಕ್ಷೇತ್ರಗಳಲ್ಲೂ ಇ.ವಿ.ಎಂನ್ನು ಬಳಸಲಾಯಿತು. ಇಲೆಕ್ಟ್ರೋನಿಕ್ ವೋಟಿಂಗ್ ಮೆಷಿನ್‌ನಲ್ಲಿ ಕಂಟ್ರೋಲ್ ಯೂನಿಟ್, ಬ್ಯಾಲೆಟ್ ಯೂನಿಟ್ ಎಂಬೀ ಎರಡು ಯೂನಿಟ್‌ಗಳಿವೆ. ಪಾರದರ್ಶಕತೆಯನ್ನು ಖಾತರಿಪಡಿಸುವುದಕ್ಕಾಗಿ ವೋಟರ್ ವೆರಿಫೈಡ್ ಪೇಪರ್ ಆಡಿಟ್ ಟ್ರಯಲ್ (VVPAT) ಎಂಬ ವ್ಯವಸ್ಥೆಯಿದೆ. ಚುನಾವಣಾ ಪ್ರಕ್ರಿಯೆಯ ವೇಗವನ್ನು ಹೆಚ್ಚಿಸಲು, ಫಲಿತಾಂಶ ಘೋಷಣೆಯನ್ನು ವೇಗವಾಗಿ ನಡೆಸಲು ಮತ್ತು ಚುನಾವಣಾ ವೆಚ್ಚವನ್ನು ಕಡಿಮೆ ಮಾಡಲು ಇಲೆಕ್ಟ್ರೋನಿಕ್ ವೋಟಿಂಗ್ ಮೆಷಿನ್ ಸಹಾಯ ಮಾಡುತ್ತದೆ.

ಪ್ರಜಾಪ್ರಭುತ್ವವನ್ನು ನೆಲೆನಿಲ್ಲಿಸುವುದಕ್ಕಾಗಿ ರೂಪುಗೊಂಡ ಸಾಂವಿಧಾನಿಕ ಸಂಸ್ಥೆ ಎಂಬ ದೃಷ್ಟಿಯಲ್ಲಿ ಚುನಾವಣಾ ಆಯೋಗವು ಬಹಳ ಪ್ರಮುಖವಾದ ಜವಾಬ್ದಾರಿಗಳನ್ನು ನಿರ್ವಹಿಸುತ್ತದೆ. ಕೆಳಗೆ ನೀಡಿರುವ ಸಂಭಾಷಣೆಯನ್ನು ಗಮನಿಸಿರಿ.




### ಮಹಾಭಿಯೋಗ (Impeachment)

ಸಾಂವಿಧಾನಿಕ ಪದವಿಗಳಲ್ಲಿರುವ ವ್ಯಕ್ತಿಗಳನ್ನು ಸಂಸತ್ತಿನ ಕಾರ್ಯವಿಧಾನಗಳ ಮೂಲಕ ಆ ಸ್ಥಾನದಿಂದ ವಜಾಗೊಳಿಸುವ ಪ್ರಕ್ರಿಯೆಯೇ ಮಹಾಭಿಯೋಗವಾಗಿದೆ.

ನಮ್ಮ ದೇಶದಲ್ಲಿ ಮತದಾರರ ಪಟ್ಟಿಯನ್ನು ತಯಾರಿಸುವುದು ಮತ್ತು ಮತದಾರರಿಗೆ ಗುರುತು ಚೀಟಿಯನ್ನು ನೀಡುವುದು ಚುನಾವಣಾ ಆಯೋಗವೆಂಬುದು ಸಂಭಾಷಣೆಯಿಂದ ತಿಳಿಯಿತಲ್ಲವೇ? ಚುನಾವಣಾ ಆಯೋಗವು ಇತರ ಯಾವ ಯಾವ ಜವಾಬ್ದಾರಿಗಳನ್ನು ನಿರ್ವಹಿಸುತ್ತದೆ ಎಂಬುದನ್ನು ಪರಿಶೀಲಿಸೋಣ.

## ಚುನಾವಣಾ ಆಯೋಗ - ಜವಾಬ್ದಾರಿಗಳು

- ಮತದಾರರ ಪಟ್ಟಿ ತಯಾರಿಸುವುದು, ಗುರುತಿನ ಚೀಟಿ ನೀಡುವುದು
- ರಾಷ್ಟ್ರಪತಿ, ಉಪರಾಷ್ಟ್ರಪತಿ, ಲೋಕಸಭೆ – ರಾಜ್ಯಸಭೆ – ರಾಜ್ಯ ಶಾಸನ ಸಭೆಯ ಸದಸ್ಯರು ಎಂಬಿವರ ಚುನಾವಣೆಗಳ ಮೇಲ್ನೋಟ ವಹಿಸುವುದು, ನಡೆಸುವುದು ಮತ್ತು ನಿಯಂತ್ರಿಸುವುದು
- ನೀತಿ ಸಂಹಿತೆಯ ಘೋಷಣೆ ಮತ್ತು ಜಾರಿಗೊಳಿಸುವಿಕೆ
- ರಾಜಕೀಯ ಪಕ್ಷಗಳಿಗೆ ಅಂಗೀಕಾರ ನೀಡುವುದು ಮತ್ತು ಚಿಹ್ನೆಯನ್ನು ಮಂಜೂರು ಮಾಡುವುದು.
- ಚುನಾವಣಾ ಘೋಷಣೆಯನ್ನು ಹೊರಡಿಸುವುದು, ನಾಮಪತ್ರದ ಸ್ವೀಕಾರ, ಸೂಕ್ಷ್ಮ ಪರಿಶೋಧನೆ, ನಾಮಪತ್ರವನ್ನು ಅಂಗೀಕರಿಸುವುದು, ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವುದು
- ಮತದಾನ, ಮತ ಎಣಿಕೆಯ ದಿನಾಂಕಗಳನ್ನು ನಿಶ್ಚಯಿಸುವುದು, ಫಲಿತಾಂಶದ ಘೋಷಣೆ ಹಾಗೂ ವಿವಾದಗಳನ್ನು ಪರಿಹರಿಸುವುದು
- ಚುನಾವಣೆಯ ಖರ್ಚುಗಳನ್ನು ಪರಿಶೀಲಿಸುವುದು ಹಾಗೂ ಕ್ರಮಗಳನ್ನು ಕೈಗೊಳ್ಳುವುದು

ಚುನಾವಣಾ ಆಯೋಗದ ಜವಾಬ್ದಾರಿಗಳು, ಕರ್ತವ್ಯಗಳು ಇತ್ಯಾದಿಗಳನ್ನು ನಿರ್ವಹಿಸುವುದಕ್ಕೂ ವಿಶಾಲ ಮತ್ತು ಸಂಕೀರ್ಣವಾದ ಚುನಾವಣಾ ವ್ಯವಸ್ಥೆಯನ್ನು ಕಾರ್ಯದಕ್ಷತೆ ಹಾಗೂ ಜನಸಾಮಾನ್ಯರ ಭಾಗವಹಿಸುವಿಕೆಯಿರುವಂತೆ ಪರಿವರ್ತಿಸಲು ವ್ಯವಸ್ಥಿತವಾದ ಕಾನೂನುಗಳು ನಮ್ಮ ದೇಶದಲ್ಲಿವೆ. 1950 ಮತ್ತು 1951ರ ಜನಪ್ರತಿನಿಧಿ ಕಾಯ್ದೆಗಳು ಈ ಕಾರ್ಯಗಳನ್ನು ನಿರ್ವಹಿಸುತ್ತವೆ. ಭಾರತೀಯ ಸಂವಿಧಾನದ 327ನೇ ವಿಧಿಗನುಸಾರವಾಗಿ ಈ ಕಾನೂನುಗಳನ್ನು ಸಂಸತ್ತು ಅಂಗೀಕರಿಸಿದೆ. ಚುನಾವಣಾ ಪ್ರಕ್ರಿಯೆಗಳನ್ನು ವಿವರವಾಗಿ ಈ ಕಾನೂನುಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ನಾಮಪತ್ರ ಸ್ವೀಕಾರದಿಂದಾರಂಭಿಸಿ ಫಲಿತಾಂಶ ಘೋಷಣೆಯವರೆಗಿನ ಎಲ್ಲ ಹಂತಗಳನ್ನೂ ಇಲ್ಲಿ ಹೇಳಲಾಗಿದೆ. ಈ ಕಾನೂನುಗಳನ್ನು ಪರಿಚಯಿಸಿಕೊಳ್ಳೋಣ.

## ಜನತಾ ಪ್ರಾತಿನಿಧ್ಯಕಾಯ್ದೆ - 1950 (Representation of People Act - 1950)

### ರಾಷ್ಟ್ರೀಯ ಮತದಾರರ ದಿನ (National Voters Day)

ಜನವರಿ 25 ನ್ನು ರಾಷ್ಟ್ರೀಯ ಮತದಾರರ ದಿನವನ್ನಾಗಿ ಆಚರಿಸುತ್ತಾರೆ. 2011 ರಿಂದ ಈ ದಿನಾಚರಣೆಯನ್ನು ಆಚರಿಸಲು ಆರಂಭಿಸಲಾಯಿತು. 1950 ಜನವರಿ 25 ರಂದು ಚುನಾವಣಾ ಆಯೋಗವು ಅಸ್ತಿತ್ವಕ್ಕೆ ಬಂತು. ಚುನಾವಣಾ ಆಯೋಗ ಸ್ಥಾಪನೆಯಾದ ದಿನವಾದುದರಿಂದ ಜನವರಿ 25 ನ್ನು ರಾಷ್ಟ್ರೀಯ ಮತದಾರರ ದಿನವನ್ನಾಗಿ ಆಚರಿಸಲು ತೀರ್ಮಾನಿಸಲಾಯಿತು. ದೇಶದ ಎಲ್ಲ ಮತದಾರರನ್ನು ಮತದಾನ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಮತ್ತು ಮತದಾನದ ಹಕ್ಕನ್ನು ಬಳಸುವಂತೆ ಪ್ರೋತ್ಸಾಹಿಸುವುದಕ್ಕೆ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸುತ್ತಾರೆ.

ಸಂಸತ್ತಿನ ಮತ್ತು ರಾಜ್ಯ ಶಾಸನ ಸಭೆಗಳ ಚುನಾವಣೆಗಳಿಗಿರುವ ಮತದಾರಕ್ಷೇತ್ರಗಳನ್ನು ನಿಶ್ಚಯಿಸುವುದು, ಅವುಗಳ ಮೇರೆಯನ್ನು ಪುನರ್‌ನಿರ್ಣಯಿಸುವುದು, ಮತದಾರರ ಪಟ್ಟಿ ತಯಾರಿ ಮೊದಲಾದ ವುಗಳಿಗಿರುವ ವ್ಯವಸ್ಥೆಗಳನ್ನು ಕ್ರೋಡೀಕರಿಸಿರುವ ಕಾನೂನು 1950ರ ಜನತಾ ಪ್ರಾತಿನಿಧ್ಯಕಾಯ್ದೆಯಾಗಿದೆ. ಸಂಸತ್ತಿನ ಎಲ್ಲ ಮತದಾರ ಕ್ಷೇತ್ರಗಳೂ ಏಕಾಂಗ ಕ್ಷೇತ್ರಗಳಾಗಿವೆಯೆಂದು ಈ ಕಾನೂನು ನಿರ್ದೇಶಿಸುತ್ತದೆ. ಮತದಾರಕ್ಷೇತ್ರಗಳ ವಿಭಜನೆ, ಪುನರ್‌ನಿರ್ಣಯ, ಮುಖ್ಯ ಚುನಾವಣಾಧಿಕಾರಿ, ಜಿಲ್ಲಾ ಚುನಾವಣಾಧಿಕಾರಿಗಳು, ಮತದಾರ ಪಟ್ಟಿಯನ್ನು ತಯಾರಿಸುವುದಕ್ಕೆ ಚುನಾವಣಾ ನೋಂದಾವಣೆ ಅಧಿಕಾರಿ ಗಳು ಎಂಬಿವರ ನೇಮಕ, ಮತದಾರರ ಪಟ್ಟಿಯನ್ನು ತಯಾರಿಸುವುದು ಮೊದಲಾದ ಕಾರ್ಯಗಳನ್ನು ಮಾಡಲು ಈ ಕಾನೂನಿನಲ್ಲಿ ವ್ಯವಸ್ಥೆ ಮಾಡಲಾಗಿದೆ.

## ಜನತಾ ಪ್ರಾತಿನಿಧ್ಯಕಾಯ್ದೆ - 1951 (Representation of People Act - 1951)

1951 ರ ಜನತಾ ಪ್ರಾತಿನಿಧ್ಯಕಾಯ್ದೆಯು ಭಾರತೀಯ ಸಂಸತ್ತು ಹಾಗೂ ರಾಜ್ಯ ಶಾಸನ ಸಭೆಗಳಿಗಿರುವ ಚುನಾವಣೆ ನಡೆಸುವುದಕ್ಕೂ ಆರಿಸಲ್ಪಟ್ಟವರ ಯೋಗ್ಯತೆ ಹಾಗೂ ಅಯೋಗ್ಯತೆಯನ್ನು ನಿರ್ಣಯಿ ಸುವುದಕ್ಕೂ ಚುನಾವಣೆಗೆ ಸಂಬಂಧಿಸಿದ ವಿವಾದಗಳನ್ನು ಪರಿಹರಿಸು ವುದಕ್ಕೂ ಇರುವ ವ್ಯವಸ್ಥೆಗಳನ್ನು ಹೊಂದಿದೆ. ಈ ಕಾನೂನಿನಲ್ಲಿ ಚುನಾವಣೆಗೆ ಸಂಬಂಧಿಸಿದ ಅಪರಾಧಗಳು, ಸಂಸತ್ತಿನ ಸದಸ್ಯರ ಯೋಗ್ಯತೆಗಳು, ಅಯೋಗ್ಯತೆಗಳು ಎಂಬಿವುಗಳ ಬಗ್ಗೆ ಪ್ರತಿಪಾದಿಸಲಾಗಿದೆ. ಸಂಸತ್ತು ಹಾಗೂ ರಾಜ್ಯಶಾಸನ ಸಭೆಗಳ ಸದಸ್ಯರನ್ನು ಅಯೋಗ್ಯರನ್ನಾಗಿಸುವುದರ ಕುರಿತು, ಚುನಾವಣಾ ಪ್ರಕ್ರಿಯೆಯ ಕುರಿತು, ಮುಖ್ಯ ಚುನಾವಣಾ ಆಯುಕ್ತರು, ಜಿಲ್ಲಾ ಚುನಾವಣಾಧಿಕಾರಿ, ಚುನಾವಣಾ ನಿರೀಕ್ಷಕರು, ರಿಟರ್ನಿಂಗ್ ಆಫೀಸರರು ಎಂಬಿವರ ಜವಾಬ್ದಾರಿಗಳು ಮತ್ತು ಯೋಗ್ಯತೆಗಳ ಕುರಿತು ಈ ಕಾನೂನಿನಲ್ಲಿ ನಿರ್ವಚಿಸಲಾಗಿದೆ. ರಾಜಕೀಯ ಪಕ್ಷಗಳ ನೋಂದಾವಣೆಯ ಬಗ್ಗೆಯೂ ಈ ಕಾನೂನಿನಲ್ಲಿ ಹೇಳಿದ್ದಾರೆ. ಈ ಕಾನೂನಿನ ಪ್ರಕಾರ ಯಾವುದೇ ಸಂಘಟನೆಯೂ ರಾಜಕೀಯ ಪಕ್ಷವಾಗಿ ಬದಲಾಗಬೇಕಾದರೆ ಚುನಾವಣಾ ಆಯೋಗದಲ್ಲಿ ನೋಂದಾಯಿಸಬೇಕು. ರಾಷ್ಟ್ರೀಯ ಪಕ್ಷ, ಪ್ರಾದೇಶಿಕ ಪಕ್ಷ ಎಂಬೀ ಪದವಿಗಳಿಗಿರುವ ಮಾನದಂಡಗಳನ್ನು ಮತ್ತು ಚುನಾವಣಾ ಚಿಹ್ನೆಗಳು ಲಭಿಸಲಿರುವ ಮಾನದಂಡಗಳನ್ನು ಈ ಕಾನೂನಿನಲ್ಲಿ ವ್ಯವಸ್ಥೆಗೊಳಿಸಲಾಗಿದೆ.

- ಭಾರತದ ಚುನಾವಣಾ ಆಯುಕ್ತರ ಹೆಸರು ಮತ್ತು ಅಧಿಕಾರಾವಧಿಗಳನ್ನೊಳಗೊಂಡ ಡಿಜಿಟಲ್ ಆಲ್ಬಂ ತಯಾರಿಸಿರಿ.
- ಚುನಾವಣಾ ಆಯೋಗದ ಕಾರ್ಯನಿರ್ವಹಣೆಯ ಕುರಿತು ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿರಿ.
- ಪೌರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಮತಗಟ್ಟೆಗಳಿಗೆ ಬಂದು ಮತದಾನ ಮಾಡಿದರೆ ಮಾತ್ರವೇ ಸಾಧ್ಯವಾಗುವುದೆ? ಇತರ ಯಾವುದಾದರೂ ವ್ಯವಸ್ಥೆಯನ್ನು ಚುನಾವಣಾ ಆಯೋಗವು ಜಾರಿಗೊಳಿಸಿದೆಯೆ? ತರಗತಿಯಲ್ಲಿ ಚರ್ಚೆಯೊಂದನ್ನು ಏರ್ಪಡಿಸಿರಿ.

### ರಾಜ್ಯ ಚುನಾವಣಾ ಆಯೋಗ

ಕೇಂದ್ರ ಚುನಾವಣಾ ಆಯೋಗದ ಹೊರತಾಗಿ ಪ್ರತಿಯೊಂದು ರಾಜ್ಯದಲ್ಲಿಯೂ ರಾಜ್ಯಮಟ್ಟದ ಚುನಾವಣಾ ಆಯೋಗಗಳಿವೆ. ಸಂವಿಧಾನದ 73, 74 ನೇ ತಿದ್ದುಪಡಿಗಳಿಗನುಸಾರವಾಗಿ ರಾಜ್ಯಗಳಲ್ಲಿ ಚುನಾವಣಾ ಆಯೋಗಗಳು ಅಸ್ತಿತ್ವಕ್ಕೆ ಬಂದವು. ಸಂವಿಧಾನದ 243 (K) / 243 (ZA), ಎಂಬೀ ಅನುಚ್ಛೇದಗಳಿಗನುಸಾರವಾಗಿ ಇವು ರೂಪುಗೊಂಡಿವೆ. ಸ್ಥಳೀಯ ಆಡಳಿತ ಸಂಸ್ಥೆಗಳಿಗಿರುವ ಮತದಾರರ ಪಟ್ಟಿಯ ತಯಾರಿ, ಚುನಾವಣೆಯ ಮೇಲ್ನೋಟ ವಹಿಸುವುದು, ನಿಯಂತ್ರಣ ಮೊದಲಾದ ಜವಾಬ್ದಾರಿಗಳನ್ನು ರಾಜ್ಯ ಚುನಾವಣಾ ಆಯೋಗಗಳು ನಿರ್ವಹಿಸುತ್ತವೆ. ಸ್ಥಳೀಯ ಆಡಳಿತ ಸಂಸ್ಥೆಯ ಸದಸ್ಯರ ಮೀಸಲಾತಿ ಕ್ಷೇತ್ರಗಳನ್ನು ತೀರ್ಮಾನಿಸುವುದು ಈ ಆಯೋಗವಾಗಿದೆ. 1993 ಡಿಸೆಂಬರ್ 3 ರಂದು ಕೇರಳ ರಾಜ್ಯ ಚುನಾವಣಾ ಆಯೋಗವು ಅಸ್ತಿತ್ವಕ್ಕೆ ಬಂತು.

ಭಾರತದಂತಹ ವೈವಿಧ್ಯಗಳಿಂದ ಸಂಪನ್ನವಾದ ಹಾಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ದೇಶದಲ್ಲಿ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಚುನಾವಣಾ ಆಯೋಗವು ಪ್ರಧಾನ ಪಾತ್ರವನ್ನು ವಹಿಸುತ್ತದೆ. ಸಾಮಾಜಿಕ, ಆರ್ಥಿಕ, ಲಿಂಗ ಮೊದಲಾದ ಅಸಮಾನತೆಗಳಿಂದಾಗಿ ಸಮಾಜದ ಮುಖ್ಯವಾಹಿನಿಯಿಂದ ದೂರವಿರಿಸಲ್ಪಟ್ಟ ಅನೇಕ ಜನವಿಭಾಗಗಳು ನಮ್ಮ ಸಮಾಜದಲ್ಲಿದ್ದವು. ಇಂತಹ ಜನವಿಭಾಗಗಳನ್ನು ಚುನಾವಣೆ ಎಂಬ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುವುದರ ಮೂಲಕ ಭಾರತೀಯ ಪ್ರಜಾಪ್ರಭುತ್ವದ ರಾಜಕೀಯ ಅಡಿಪಾಯವನ್ನು ಭದ್ರಪಡಿಸುವ ಕರ್ತವ್ಯವನ್ನು ಚುನಾವಣಾ ಆಯೋಗವು ನಿರ್ವಹಿಸಿದೆ. ದೇಶದ ವಿವಿಧ ಹಂತಗಳಲ್ಲಿ ನಡೆಯುವ ಚುನಾವಣೆಗಳನ್ನು ಪಾರದರ್ಶಕವೂ ನೀತಿಯುಕ್ತವೂ ಆದ ರೀತಿಯಲ್ಲಿ ನಿರ್ವಹಿಸುವ ಮೂಲಕ ಈ ಸಾಂವಿಧಾನಿಕ ಸಂಸ್ಥೆಯು ಪ್ರಜಾಪ್ರಭುತ್ವ ಪರವಾಗಿ ಹೆಚ್ಚು ಬಲವುಳ್ಳದ್ದೂ ಅರ್ಥಪೂರ್ಣವುಳ್ಳದ್ದೂ ಆಗುತ್ತದೆ.



ಸುಕುಮಾರ್ ಸೇನ್ ಇವರು ಭಾರತದ ಮೊದಲ ಮುಖ್ಯ ಚುನಾವಣಾ ಆಯುಕ್ತರಾಗಿದ್ದರು.

## ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ




ನೀಡಿರುವ ಕ್ಯಾಲೆಂಡರಿನ ತಾರೀಕನ್ನು ಗಮನಿಸಿದಿರಲ್ಲವೆ?
ಈ ದಿನದ ವಿಶೇಷತೆ ಏನೆಂಬುದನ್ನು ಕಂಡುಹಿಡಿಯಬಹುದೇ?

ಸಮಾಜ ವಿಜ್ಞಾನ ಕ್ಲಬ್‌ನ ನೇತೃತ್ವದಲ್ಲಿ ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ದಿನವನ್ನು ಶಾಲೆಯಲ್ಲಿ ಆಚರಿಸುವುದಕ್ಕಿರುವ ತಯಾರಿಗಳನ್ನು ನಡೆಸುವಿರಲ್ಲವೇ? ಇದಕ್ಕೆ ಸಂಬಂಧಿಸಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು?

- ಪೋಸ್ಟರ್ ಪ್ರದರ್ಶನ
- ವಿಚಾರಗೋಷ್ಠಿ
- 
- 
- 

ಯುದ್ಧಗಳು, ಆಂತರಿಕ ಗಲಭೆಗಳು, ಭಯೋತ್ಪಾದಕ ಆಕ್ರಮಣಗಳು ಮೊದಲಾದ ಸಂದರ್ಭಗಳಲ್ಲಿ ಘನತೆಯಿಂದೊಡಗೂಡಿದ ಮಾನವ ಜೀವನವನ್ನು ದುರಿತಕ್ಕೀಡುಮಾಡುವ ಅನೇಕ ವಾರ್ತೆಗಳನ್ನು ಜಗತ್ತಿನ ವಿವಿಧ ಭಾಗಗಳಿಂದ ಮಾಧ್ಯಮಗಳ ಮೂಲಕ ನಾವು ತಿಳಿಯುತ್ತಿದ್ದೇವಲ್ಲವೇ. ನಮ್ಮ ಸುತ್ತುಮುತ್ತಲೂ ಇಂತಹ ಮಾನವ ಹಕ್ಕುಗಳ ಉಲ್ಲಂಘನೆಯು ನಡೆಯುವುದು ನಿಮಗೆ ತಿಳಿದಿದೆಯೇ? ಇಂತಹ ಘಟನೆಗಳು ನಿಮ್ಮ ಗಮನಕ್ಕೆ ಬಂದಿದೆಯೆ? ಇದ್ದರೆ ಪಟ್ಟಿ ಮಾಡಿರಿ.

- ಮಕ್ಕಳಿಗೆದುರಾದ ಅಸಮಾನತೆ
- ಸ್ತ್ರೀಯರಿಗೆದುರಾದ ಅಸಮಾನತೆ
- 
- 
- 

ಮಾನವ ಹಕ್ಕುಗಳ ಉಲ್ಲಂಘನೆಯು ನಮ್ಮ ಸಂವಿಧಾನವು ಖಾತರಿಪಡಿಸುವ ಪೌರರ ಹಕ್ಕುಗಳ ಹಾಗೂ ಮೌಲ್ಯಗಳ ನಿಷೇಧವಾಗಿದೆ. ನಮ್ಮ ದೇಶದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯನ್ನು ಇಲ್ಲದಂತೆ ಮಾಡಿ ಪೌರರ ಹಕ್ಕುಗಳ ಸಂರಕ್ಷಣೆಯನ್ನು ಖಾತರಿಪಡಿಸುವ ಉದ್ದೇಶದಿಂದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವನ್ನು ರೂಪಿಸಲಾಯಿತು. 1993 ಅಕ್ಟೋಬರ್ 12 ರಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಅಸ್ತಿತ್ವಕ್ಕೆ ಬಂತು. ಆಯೋಗದ ಕೇಂದ್ರ ಕಛೇರಿಯು ನವದೆಹಲಿಯಲ್ಲಿದೆ. ಆಯೋಗದಲ್ಲಿ ಅಧ್ಯಕ್ಷರ ಸಹಿತ ಆರು ಮಂದಿ ಸದಸ್ಯರಿದ್ದಾರೆ. ಸರ್ವೋಚ್ಚ ನ್ಯಾಯಾಲಯದಿಂದ ನಿವೃತ್ತಿ ಹೊಂದಿದ ಮುಖ್ಯನ್ಯಾಯಾಧೀಶರು, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಇದರ ಅಧ್ಯಕ್ಷರಾಗಿರುತ್ತಾರೆ. ರಾಷ್ಟ್ರಪತಿಯವರು ಆಯೋಗದ ಸದಸ್ಯರನ್ನು ನೇಮಿಸುತ್ತಾರೆ. ಮೂರು ವರ್ಷ ಅಥವಾ ಎಪ್ಪತ್ತು ವರ್ಷ ಪ್ರಾಯವು ಆಯೋಗದ ಸದಸ್ಯರ ಅಧಿಕಾರಾವಧಿಯಾಗಿರುತ್ತದೆ.

## ಮಾನವ ಹಕ್ಕುಗಳ ಸಂರಕ್ಷಣಾ ಕಾನೂನು- 1993

ಮಾನವ ಹಕ್ಕುಗಳ ಸಂರಕ್ಷಣಾ ಕಾನೂನು ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಅದಕ್ಕೆ ಸಂಬಂಧಿಸಿದ ಕಾರ್ಯಗಳಿಗಾಗಿ ರಾಷ್ಟ್ರೀಯ – ರಾಜ್ಯಮಟ್ಟಗಳಲ್ಲಿ ಮಾನವ ಹಕ್ಕುಗಳ ಆಯೋಗಗಳು ಮತ್ತು ನ್ಯಾಯಾಲಯಗಳನ್ನು ಸ್ಥಾಪಿಸಲು ನಿರ್ದೇಶಿಸುತ್ತದೆ. 1993 ಸೆಪ್ಟಂಬರ್ 28 ರಂದು ಈ ಕಾನೂನು ಜಾರಿಗೆ ಬಂತು. ಇದಕ್ಕೆ ಅನುಸಾರವಾಗಿ ರಾಷ್ಟ್ರೀಯ ಮತ್ತು ರಾಜ್ಯಮಟ್ಟಗಳಲ್ಲಿ ಮಾನವ ಹಕ್ಕುಗಳ ಆಯೋಗವು ಕಾರ್ಯವೆಸಗುತ್ತಿದೆ. ಈ ಕಾನೂನಿನಲ್ಲಿ ಮಾನವ ಹಕ್ಕುಗಳ ನ್ಯಾಯಾಲಯ, ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗ, ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ, ರಾಷ್ಟ್ರೀಯ ವನಿತಾ ಆಯೋಗ, ರಾಜ್ಯ ಮಾನವ ಹಕ್ಕುಗಳ ಆಯೋಗ ಎಂಬಿವುಗಳ ಕುರಿತು ಹೇಳಲಾಗಿದೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ರೂಪೀಕರಣ, ಅಧ್ಯಕ್ಷರನ್ನು ಒಳಗೊಂಡಂತೆ ಸದಸ್ಯರ ನೇಮಕ, ಸದಸ್ಯತ್ವದ ರದ್ದು, ಕಾಲಾವಧಿ, ಆಯೋಗದ ಕಾರ್ಯನಿರ್ವಹಣೆ, ಅಧಿಕಾರಿಗಳು ಮೊದಲಾದವುಗಳನ್ನು ಈ ಕಾನೂನಿನಲ್ಲಿ ಹೇಳಲಾಗಿದೆ.

ಆಯೋಗದ ತನಿಖೆಯ ಕಾರ್ಯವಿಧಾನ, ವರದಿಯನ್ನು ನೀಡುವುದು, ರಾಜ್ಯ ಮಾನವ ಹಕ್ಕುಗಳ ಆಯೋಗದ ರೂಪೀಕರಣ, ಕಾರ್ಯನಿರ್ವಹಣೆ, ತನಿಖೆ ಮತ್ತು ಕಾರ್ಯವಿಧಾನ ಎಂಬಿವುಗಳ ಬಗ್ಗೆಯೂ ಈ ಕಾನೂನಿನಲ್ಲಿ ಹೇಳಲಾಗಿದೆ. ಜೀವ ಮತ್ತು ಸ್ವಾತಂತ್ರ್ಯಕ್ಕೆ ಸಮಾನ ಪರಿಗಣನೆಗೆ ಹಾಗೂ ಘನತೆಗೆ ಬೇಕಾಗಿ ಸಂವಿಧಾನವು ಖಾತರಿಪಡಿಸುವ ಹಾಗೂ ಭಾರತವು ಅಂಗೀಕರಿಸಿರುವ ಅಂತಾರಾಷ್ಟ್ರೀಯ ಒಪ್ಪಂದಗಳ ಪ್ರಕಾರ ಜಾರಿಗೊಳಿಸಬಹುದಾದ ಹಕ್ಕುಗಳೇ ಮಾನವ ಹಕ್ಕುಗಳಾಗಿವೆ.




ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಕೇಂದ್ರ ಕಛೇರಿ – ನವದೆಹಲಿ

## ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಜವಾಬ್ದಾರಿಗಳು

- ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ದೂರುಗಳ ಬಗ್ಗೆ ತನಿಖೆ ನಡೆಸುವುದು.
- ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ನ್ಯಾಯಾಲಯದ ಕ್ರಮಗಳಲ್ಲಿ ಭಾಗಿಯಾಗುವುದು.
- ಸೆರೆಮನೆ, ಪುನರ್ವಸತಿ ಕೇಂದ್ರಗಳು ಇತ್ಯಾದಿಗಳನ್ನು ಸಂದರ್ಶಿಸಿ ಸುಧಾರಣೆಗಳಿಗೆ ಸಂಬಂಧಿಸಿದ ನಿರ್ದೇಶಗಳನ್ನು ನೀಡುವುದು.
- ಮಾನವ ಹಕ್ಕುಗಳ ಸಂರಕ್ಷಣಾ ವ್ಯವಸ್ಥೆಗಳ ನಿರ್ವಹಣೆ ಹಾಗೂ ಪರಿಣಾಮಗಳನ್ನು ಅವಲೋಕಿಸಿ ನಿರ್ದೇಶಗಳನ್ನು ನೀಡುವುದು.
- ಮಾನವ ಹಕ್ಕುಗಳಿಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ಒಪ್ಪಂದಗಳು, ಘೋಷಣೆಗಳು ಮೊದಲಾದವುಗಳನ್ನು ವಿಶ್ಲೇಷಿಸಿ ಕ್ರಮಕೈಗೊಳ್ಳುವುದು.
- ಕಾನೂನು ಪಾಲಕರನ್ನೂ ಒಳಗೊಂಡಂತೆ ಸಾರ್ವಜನಿಕ ಸೇವಕರ ಭಾಗದಿಂದ ಉಂಟಾಗುವ ಮಾನವ ಹಕ್ಕುಗಳ ಉಲ್ಲಂಘನೆಗಳು ಹಾಗೂ ಇವುಗಳನ್ನು ತಡೆಯುವುದರಲ್ಲಿ ಉಂಟಾಗುವ ವೈಫಲ್ಯಗಳನ್ನು ಪರಿಶೀಲಿಸಿ ಕ್ರಮಗಳನ್ನು ಕೈಗೊಳ್ಳುವುದು.

- ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಪ್ರಮುಖ ಜವಾಬ್ದಾರಿಗಳಲ್ಲಿ ಕೆಲವನ್ನು ಮೇಲೆ ನೀಡಲಾಗಿದೆ. ಆಯೋಗದ ಜವಾಬ್ದಾರಿಗಳ ನಿರ್ವಹಣೆಗೆ ಸಂಬಂಧಿಸಿದ ಪತ್ರಿಕಾ ವರದಿಗಳನ್ನು ಸಂಗ್ರಹಿಸಿರಿ.
- ಸಂಗ್ರಹಿಸಿದ ವಾರ್ತೆಗಳನ್ನು ಸೇರಿಸಿ ಡಿಜಿಟಲ್ ಆಲ್ಬಂನ್ನು ತಯಾರಿಸಿರಿ.

## ರಾಜ್ಯ ಮಾನವ ಹಕ್ಕುಗಳ ಆಯೋಗ

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಸಮಾನವಾಗಿ ರಾಜ್ಯಗಳಲ್ಲಿಯೂ ಮಾನವ ಹಕ್ಕುಗಳ ಆಯೋಗಗಳಿವೆ. 1998 ಡಿಸೆಂಬರ್ 11 ರಂದು ಕೇರಳ ರಾಜ್ಯ ಮಾನವ ಹಕ್ಕುಗಳ ಆಯೋಗವು ಅಸ್ತಿತ್ವಕ್ಕೆ ಬಂತು. ಅಧ್ಯಕ್ಷರ ಸಹಿತ ಮೂವರು ಸದಸ್ಯರು ಆಯೋಗದಲ್ಲಿದ್ದಾರೆ. ಉಚ್ಚ ಮುಖ್ಯ ನ್ಯಾಯಾಧೀಶರು / ಉಚ್ಚ ನ್ಯಾಯಾಲಯದ ನಿವೃತ್ತಿ ಹೊಂದಿದ ನ್ಯಾಯಾಧೀಶರು ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿರುತ್ತಾರೆ. ರಾಜ್ಯಪಾಲರು ಆಯೋಗದ ಸದಸ್ಯರನ್ನು ನೇಮಿಸುತ್ತಾರೆ.

- ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಇತ್ತೀಚೆಗೆ ಮಧ್ಯಸ್ಥಿಕೆ ವಹಿಸಿದ ಸಮಸ್ಯೆಗಳನ್ನು ಕಂಡುಹಿಡಿಯಿರಿ.
- ಆಮ್ನೆಸ್ಟಿ ಇಂಟರ್ ನ್ಯಾಶನಲ್ ಎಂಬುದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಗೆ ಎದುರಾಗಿ ಕಾರ್ಯವೆಸಗುವ ಸ್ವಯಂ ಸೇವಾ ಸಂಘಟನೆಯಾಗಿದೆ. ನಮ್ಮ ದೇಶದಲ್ಲಿ ಇಂತಹ ಯಾವುದಾದರೂ ಸ್ವಯಂಸೇವಾ ಸಂಘಟನೆಗಳು ಕಾರ್ಯ ವೆಸಗುತ್ತಿವೆಯೆ? ಕಂಡುಹಿಡಿಯಿರಿ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾನವ ಹಕ್ಕುಗಳಿಗೆ ಅತ್ಯುನ್ನತ ಸ್ಥಾನವಿದೆ. ಮಾನವನೆಂಬ ದೃಷ್ಟಿಯಲ್ಲಿ ಘನತೆಯಿಂದಲೂ ಅಭಿಮಾನದಿಂದಲೂ ಸ್ವಂತ ಹಕ್ಕುಗಳನ್ನು ಬಳಸಲು ಸಾಧ್ಯವಾಗುವಾಗ ಪ್ರಜಾಪ್ರಭುತ್ವ ವ್ಯವಸ್ಥೆಯು ಸಂಪೂರ್ಣವಾಗಿ ಅರ್ಥವತ್ತಾಗುತ್ತದೆ. ಪೌರರ ಮಾನವ ಹಕ್ಕುಗಳನ್ನು ಸಂರಕ್ಷಿಸಿ ತನ್ಮೂಲಕ ಪ್ರಜಾಪ್ರಭುತ್ವದ ವ್ಯಾಪಿಸುವಿಕೆಯನ್ನು ಖಾತರಿಪಡಿಸುವುದರಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಪ್ರಮುಖ ಪಾತ್ರ ವಹಿಸುತ್ತದೆ.



ಮೇಲೆ ಕೊಟ್ಟಿರುವ ಚಿತ್ರವನ್ನು ಗಮನಿಸಿದಿರಲ್ಲವೆ? ಮಹಿಳಾ ಪ್ರತಿಭಟನೆಗಾರರು ಯಾವ ಯಾವ ಸಮಸ್ಯೆಗಳನ್ನು ಪ್ರಸ್ತಾಪಿಸಿದ್ದಾರೆ? ಸ್ತ್ರೀಯರು ಅನುಭವಿಸುವ ಇತರ ಸಮಸ್ಯೆಗಳು ನಿಮ್ಮ ಗಮನಕ್ಕೆ ಬಂದಿವೆಯೆ? ಅವು ಯಾವುವು ಎಂಬುದನ್ನು ಚರ್ಚಿಸಿರಿ.

- ಉದ್ಯೋಗ ಸ್ಥಳಗಳಲ್ಲಿನ ತಾರತಮ್ಯ
- 
- 
- 
- 

## ರಾಷ್ಟ್ರೀಯ ಮಹಿಳಾ ಆಯೋಗ

ಸಮಾಜದಲ್ಲಿ ಸ್ತ್ರೀಯರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳಲ್ಲಿ ಮಧ್ಯಸ್ಥಿಕೆ ವಹಿಸಿ ಕಾನೂನುಬದ್ಧವಾದ ಪರಿಹಾರಗಳನ್ನು ಸೂಚಿಸುವುದು ಮತ್ತು ಕೈಗೊಳ್ಳಬೇಕಾದ ಕ್ರಮಗಳನ್ನು ಶಿಫಾರಸ್ಸು ಮಾಡುವುದು ರಾಷ್ಟ್ರೀಯ ಮಹಿಳಾ ಆಯೋಗದ ಪ್ರಮುಖ ಜವಾಬ್ದಾರಿಯಾಗಿದೆ. 1992 ಜನವರಿ 31 ರಂದು ರಾಷ್ಟ್ರೀಯ ಮಹಿಳಾ ಆಯೋಗವು ಸ್ಥಾಪಿಸಲ್ಪಟ್ಟಿತು. ಆಯೋಗವು ಅಧ್ಯಕ್ಷೆಯನ್ನೂ ಐವರು ಸದಸ್ಯರನ್ನೂ ಮತ್ತು ಓರ್ವ ಮೆಂಬರ್ ಸೆಕ್ರಟರಿಯನ್ನೂ ಒಳಗೊಂಡಿದೆ. ಕೇಂದ್ರ ಸರಕಾರವು ಈ ಸದಸ್ಯರನ್ನು ನೇಮಿಸುತ್ತದೆ. ಸದಸ್ಯರ ಔದ್ಯೋಗಿಕ ಕಾಲಾವಧಿ ಮೂರು ವರ್ಷ. ಸ್ತ್ರೀಯರ ರಕ್ಷಣೆ, ಸಮಾನತೆ ಹಾಗೂ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಹೇರಳವಾದ ಅಧಿಕಾರಗಳೂ ಜವಾಬ್ದಾರಿಗಳೂ ರಾಷ್ಟ್ರೀಯ ಮಹಿಳಾ ಆಯೋಗಕ್ಕಿದೆ.



ರಾಷ್ಟ್ರೀಯ ಮಹಿಳಾ ಆಯೋಗದ ಕೇಂದ್ರ ಕಛೇರಿ – ನವದೆಹಲಿ

### ಅಂತಾರಾಷ್ಟ್ರೀಯ ಮಹಿಳಾ ದಿನ
**(Inter National Women's Day)**

ಸ್ತ್ರೀಯರ ಹಕ್ಕುಗಳನ್ನು ಕಾಪಾಡುವುದು, ಸ್ತ್ರೀಯರಿಗೆದುರಾದ ಅತಿಕ್ರಮಣಗಳನ್ನು ಮತ್ತು ತಾರತಮ್ಯವನ್ನು ತಡೆಯುವುದು, ಸಾಮಾಜಿಕ ಮುನ್ನಡೆಯಲ್ಲಿ ಸ್ತ್ರೀಯರ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸುವುದು ಮೊದಲಾದ ಉದ್ದೇಶಗಳಿಂದ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸುತ್ತಾರೆ. ಮಾರ್ಚ್ 8 ಅಂತಾರಾಷ್ಟ್ರೀಯ ಮಹಿಳಾ ದಿನವಾಗಿದೆ. ಸ್ತ್ರೀಯರಿಗೆದುರಾದ ಅತಿಕ್ರಮಣಗಳನ್ನು ತಡೆಯುವುದು, ರಾಜಕೀಯ–ಸಾಮಾಜಿಕ – ಆರ್ಥಿಕ ಕ್ಷೇತ್ರಗಳಲ್ಲಿನ ಎಲ್ಲ ವಿಧದ ತಾರತಮ್ಯಗಳನ್ನು ಮೀರಿ ಸ್ತ್ರೀಯರ ಸಬಲೀಕರಣವನ್ನು ಖಾತರಿಪಡಿಸುವುದು ಮೊದಲಾದವುಗಳನ್ನು ಈ ದಿನಾಚರಣೆಯ ಮೂಲಕ ವಿಶ್ವಸಂಸ್ಥೆಯು ಉದ್ದೇಶಿಸಿದೆ.

## ಜವಾಬ್ದಾರಿಗಳು




- ರಾಷ್ಟ್ರೀಯ ಮಹಿಳಾ ಆಯೋಗದ ಚಟುವಟಿಕೆಗಳಿಗೆ ಸಂಬಂಧಿಸಿದ ವಾರ್ತೆಗಳು ಮತ್ತು ಚಿತ್ರಗಳನ್ನು ಸಂಗ್ರಹಿಸಿರಿ.
- ಸಂಗ್ರಹಿಸಿದ ಮಾಹಿತಿಗಳನ್ನು ಸಮಾಜ ವಿಜ್ಞಾನ ಆಲ್ಬಂನಲ್ಲಿ ಸೇರಿಸಿರಿ.
- ಸ್ತ್ರೀಯರ ಹಕ್ಕುಗಳನ್ನು ಕಾಪಾಡುವುದಕ್ಕೆ ಸಂಬಂಧಿಸಿ ರಾಷ್ಟ್ರೀಯ ಮಹಿಳಾ ಆಯೋಗವು ಮಧ್ಯಸ್ಥಿಕೆ ವಹಿಸಿದ ದಾವೆಗಳು/ಘಟನೆಗಳನ್ನು ಅಧ್ಯಾಪಕರ ಸಹಾಯದಿಂದ ಕಂಡುಹಿಡಿಯಿರಿ.

ಸ್ತ್ರೀಯರ ಹಕ್ಕುಗಳು ಮತ್ತು ರಕ್ಷಣೆಯನ್ನು ಖಾತರಿಪಡಿಸುವುದಕ್ಕೆ ಹಲವಾರು ಕಾನೂನುಗಳು ದೇಶದಲ್ಲಿ ಅಸ್ತಿತ್ವದಲ್ಲಿವೆ. ಅವುಗಳಲ್ಲಿ ಕೆಲವನ್ನು ಪರಿಚಯಿಸೋಣ.

### ವರದಕ್ಷಿಣೆ ನಿಷೇಧ ಕಾಯ್ದೆ - 1961

ವರದಕ್ಷಿಣೆ ಎಂಬ ಪಿಡುಗನ್ನು ಸಮಾಜದಿಂದ ಕಿತ್ತೊಗೆಯಲು ಮತ್ತು ವರದಕ್ಷಿಣೆಯ ಹೆಸರಿನಲ್ಲಿ ನಡೆಯುವ ಆಕ್ರಮಣಗಳನ್ನು ತಡೆಯುವುದಕ್ಕಾಗಿ 1961 ರಲ್ಲಿ ಸಂಸತ್ತು ವರದಕ್ಷಿಣೆ ನಿಷೇಧ ಕಾಯ್ದೆಯನ್ನು ಅಂಗೀಕರಿಸಿತು. ವಿವಾಹಕ್ಕೆ ಸಂಬಂಧಿಸಿ ನಿರ್ಬಂಧಿತ ಅಥವಾ ಮೊದಲು ತೀರ್ಮಾನಿಸಿದಂತೆ ನೀಡುವ ಸಂಪತ್ತೇ ವರದಕ್ಷಿಣೆಯಾಗಿದೆ. ಒಂದು ನಿಶ್ಚಿತ ಮೊತ್ತ, ಆಭರಣಗಳು ಅಥವಾ ಸೊತ್ತನ್ನು ನೀಡಬಹುದೆಂಬ ಮಾತಿನ ಮೂಲಕ ಓರ್ವ ವ್ಯಕ್ತಿಯು ವಿವಾಹಕ್ಕೆ ಒಪ್ಪುವುದಿದ್ದರೆ ಅದು ಕೂಡಾ ವರದಕ್ಷಿಣೆಯಾಗಿದೆ. ಈ ಕಾನೂನಿನ ಪ್ರಕಾರ ವರದಕ್ಷಿಣೆಯನ್ನು ಸ್ವೀಕರಿಸುವುದು ಹಾಗೂ ನೀಡುವುದು ಅಪರಾಧವಾಗಿದೆ.

### ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ - 2005

2006 ಅಕ್ಟೋಬರ್ 26 ರಂದು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯು ನಮ್ಮ ದೇಶದಲ್ಲಿ ಅಸ್ತಿತ್ವಕ್ಕೆ ಬಂತು. ಜೀವನ ಸಂಗಾತಿಯಿಂದಲೋ ಬಂಧುಗಳಿಂದಲೋ ಸ್ತ್ರೀಯರು ಎದುರಿಸಬೇಕಾಗಿ ಬರುವ ಪೀಡನೆಗಳಿಂದ ರಕ್ಷಣೆಯನ್ನು ಈ ಕಾಯ್ದೆಯು ನೀಡುತ್ತದೆ. ಸ್ತ್ರೀತ್ವವನ್ನು ಅಪಮಾನಿಸುವುದು, ಅಪಾಯವನ್ನುಂಟುಮಾಡುವುದು ಮೊದಲಾದ ಎಲ್ಲ ವಿಧದ ಆಕ್ರಮಣಗಳೂ ಗೃಹಹಿಂಸೆ

ಎಂಬ ವಿಶಾಲವಾದ ನಿರ್ವಚನೆಯಲ್ಲಿ ಒಳಪಡುತ್ತದೆ. ಗೃಹಹಿಂಸೆಗೆ ಬಲಿಯಾಗುವ ಸ್ತ್ರೀಯರಿಗೆ ರಕ್ಷಣೆ, ವಸತಿ ಹಾಗೂ ಆರ್ಥಿಕ ಬೆಂಬಲಕ್ಕಿರುವ ಕ್ರಮಗಳನ್ನು ಈ ಕಾಯ್ದೆಯು

- ಶಾಲೆಯಲ್ಲಿ ರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲು ಬೇಕಾದ ಪೂರ್ವ ತಯಾರಿಯನ್ನು ಮಾಡಿರಿ.
- ಇದಕ್ಕೆ ಸಂಬಂಧಿಸಿದ ಆಮಂತ್ರಣ ಪತ್ರಿಕೆಯೊಂದನ್ನು ತಯಾರಿಸಿರಿ.
- ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಮಹಿಳಾ ಆಯೋಗದ ಹಸ್ತಕ್ಷೇಪಗಳ ಕುರಿತಾದ ಪತ್ರಿಕಾ ವಾರ್ತೆಗಳನ್ನು ಸಂಗ್ರಹಿಸಿ ವಾರ್ತಾ ಆಲ್ಬಂನ್ನು ತಯಾರಿಸಿರಿ.

### ರಾಜ್ಯ ಮಹಿಳಾ ಆಯೋಗ



1996 ಮಾರ್ಚ್ 14 ರಂದು ಕೇರಳ ಮಹಿಳಾ ಆಯೋಗವು ಅಸ್ತಿತ್ವಕ್ಕೆ ಬಂತು. ತಿರುವನಂತಪುರದಲ್ಲಿ ಇದರ ಕೇಂದ್ರ ಕಛೇರಿ ಇದೆ. ಕವಯತ್ರಿ ಸುಗದಕುಮಾರಿಯವರು ಆಯೋಗದ ಪ್ರಥಮ ಅಧ್ಯಕ್ಷರಾಗಿದ್ದರು. ಅಧ್ಯಕ್ಷರಲ್ಲದೆ ನಾಲ್ವರು ಸದಸ್ಯರು ರಾಜ್ಯ ಮಹಿಳಾ ಆಯೋಗದಲ್ಲಿದ್ದಾರೆ. ಸದಸ್ಯರ ಅಧಿಕಾರಾವಧಿ ಐದು ವರ್ಷ. ಸ್ತ್ರೀಯರು ಎದುರಿಸುತ್ತಿರುವ ಅನ್ಯಾಯಗಳನ್ನೂ ಒಳಗೊಂಡಂತೆ ವಿವಿಧ ಸಮಸ್ಯೆಗಳಲ್ಲಿ ಮಧ್ಯಸ್ಥಿಕೆ ವಹಿಸಿ ಸೂಕ್ತವಾದ ತೀರ್ಮಾನಗಳನ್ನು ನಿರ್ದೇಶಿಸುವುದು, ಅದಕ್ಕೆ ಸಂಬಂಧಿಸಿದ ಕ್ರಮಗಳಲ್ಲಿ ಸರಕಾರಕ್ಕೆ ವರದಿ ನೀಡುವುದು ಮೊದಲಾದವು ಆಯೋಗದ ಜವಾಬ್ದಾರಿಗಳಲ್ಲಿ ಒಳಪಡುತ್ತವೆ.

ಖಾತರಿಪಡಿಸುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲ ಪೌರರ ಹಕ್ಕುಗಳನ್ನು ರಕ್ಷಿಸಬೇಕಾಗಿದೆ. ಲಿಂಗನೀತಿಯು ಅದರಲ್ಲಿ ಪ್ರಮುಖವಾದುದಾಗಿದೆ. ಸ್ತ್ರೀಯರ ಹಕ್ಕುಗಳು ಹಾಗೂ ಘನತೆಯನ್ನು ರಕ್ಷಿಸುವ ಮೂಲಕ ಮಾತ್ರವೇ ಅದು ಪೂರ್ಣವಾಗಬಹುದಷ್ಟೆ. ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಸ್ತ್ರೀಯರಿಗೆದುರಾದ ನಿಲುವುಗಳನ್ನು ಕಾನೂನುಬದ್ಧವಾಗಿ ಮೀರಿನಿಲ್ಲಲು ಬೇಕಾದ ಕ್ರಮಗಳನ್ನು ಮಹಿಳಾ ಆಯೋಗವು ಕಾಲಕಾಲಕ್ಕೆ ಸ್ವೀಕರಿಸುತ್ತಾ ಬಂದಿದೆ.

ಲಿಂಗನೀತಿಯನ್ನು ಖಾತರಿಪಡಿಸುವ ಇಂತಹ ಮಧ್ಯಸ್ಥಿಕೆಯ ಮೂಲಕ ಸ್ತ್ರೀಯರಿಗೆ ಸಮಾನ ಹಕ್ಕುಗಳನ್ನು ಹಾಗೂ ಸಂದರ್ಭಗಳನ್ನು ಒದಗಿಸುವ ಮೂಲಕ ಪ್ರಜಾಪ್ರಭುತ್ವವನ್ನು ಬಲಗೊಳಿಸುವುದರಲ್ಲಿ ಮಹಿಳಾ ಆಯೋಗವು ಪ್ರಮುಖ ಪಾತ್ರ ವಹಿಸುತ್ತದೆ.

## ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗ






ಮೇಲೆ ಕೊಟ್ಟಿರುವ ದೂರದರ್ಶನದ ವಾರ್ತೆಗಳನ್ನು ಗಮನಿಸಿರಿ. ಅಲ್ಪಸಂಖ್ಯಾತರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತು ಅಲ್ಪಸಂಖ್ಯಾತರ ಸಂಘಟನೆಗಳು ಮುಂದಿಟ್ಟ ಆವಶ್ಯಕತೆಗಳನ್ನು ವಾರ್ತೆಗಳು ತಿಳಿಸುತ್ತವೆ. ಇಲ್ಲಿ ಯಾವೆಲ್ಲ ಸಮಸ್ಯೆಗಳನ್ನು ಮುಂದಿಡಲಾಗಿದೆ?

- ಆರ್ಥಿಕ ಹಿಂದುಳಿಯುವಿಕೆ
- 
- 
- 
- 
- 

ದೇಶದ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಕಾಪಾಡಿ ಅವರ ಕ್ಷೇಮಕ್ಕಿರುವ ಕಾಯ್ದೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತದೆ ಎಂಬುದನ್ನು ಖಾತರಿಪಡಿಸುವುದಕ್ಕಾಗಿ ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗವನ್ನು ರೂಪಿಸಲಾಯಿತು. ಮತ – ಭಾಷೆ – ಸಾಂಸ್ಕೃತಿಕ ಅಲ್ಪಸಂಖ್ಯಾತರ ಹಕ್ಕುಗಳನ್ನು ಕಾಪಾಡಿ ಆ ವಿಭಾಗದವರ ಕ್ಷೇಮವನ್ನು ಖಾತರಿಪಡಿಸುವುದು ಆಯೋಗದ ಪ್ರಮುಖ ಜವಾಬ್ದಾರಿಯಾಗಿದೆ. 1993 ಮೇ 17 ರಂದು ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗವು ಅಸ್ತಿತ್ವಕ್ಕೆ ಬಂತು. ಆಯೋಗದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಐದು ಮಂದಿ ಸದಸ್ಯರಿದ್ದಾರೆ. ಕೇಂದ್ರ ಸರಕಾರವು ಇವರ ನಾಮನಿರ್ದೇಶನ ಮಾಡುತ್ತದೆ. ರಾಷ್ಟ್ರಪತಿಯವರು ಸದಸ್ಯರನ್ನು ನೇಮಿಸುತ್ತಾರೆ. ಸದಸ್ಯರ ಅಧಿಕಾರಾವಧಿ ಮೂರು ವರ್ಷ. ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗವು ಹೇರಳವಾದ ಅಧಿಕಾರಗಳನ್ನೂ ಜವಾಬ್ದಾರಿಗಳನ್ನೂ ನಿರ್ವಹಿಸಬೇಕಾಗಿದೆ.

**ಜವಾಬ್ದಾರಿಗಳು**

- ಅಲ್ಪಸಂಖ್ಯಾತರ ಸಾಮಾಜಿಕ ಅಭಿವೃದ್ಧಿಯ ಪ್ರಗತಿಯನ್ನು ಅವಲೋಕಿಸುವುದು.
- ಅಲ್ಪಸಂಖ್ಯಾತರ ರಕ್ಷಣೆಗಾಗಿರುವ ಸಂವಿಧಾನಾತ್ಮಕ ವ್ಯವಸ್ಥೆಗಳ ಹಾಗೂ ಕಾಯ್ದೆಗಳ ಕಾರ್ಯನಿರ್ವಹಣೆಯನ್ನು ಅವಲೋಕಿಸುವುದು.
- ಅಲ್ಪಸಂಖ್ಯಾತರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸಂದಿಗ್ಧತೆಗಳನ್ನು ಸಂಬಂಧಿಸಿದ ವರದಿಗಳನ್ನು ಆಯಾ ಸಮಯಗಳಲ್ಲಿ ಸಮರ್ಪಿಸುವುದು.
- ಅಲ್ಪಸಂಖ್ಯಾತರ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ದೂರುಗಳನ್ನು ಪರಿಶೀಲಿಸಿ ಕ್ರಮಗಳಿಗಾಗಿ ಶಿಫಾರಸ್ಸುಗಳನ್ನು ನೀಡುತ್ತದೆ.
- ಅಲ್ಪಸಂಖ್ಯಾತರ ರಕ್ಷಣೆಯನ್ನು ಸರಿಯಾಗಿ ನಡೆಸುವುದಕ್ಕೆ ಅಗತ್ಯವಾದ ನಿರ್ದೇಶಗಳನ್ನು ಸಮರ್ಪಿಸುತ್ತದೆ.

## ರಾಜ್ಯ ಅಲ್ಪಸಂಖ್ಯಾತ ಆಯೋಗ

2013 ರಲ್ಲಿ ಕೇರಳ ರಾಜ್ಯ ಅಲ್ಪಸಂಖ್ಯಾತ ಆಯೋಗವು ಅಸ್ತಿತ್ವಕ್ಕೆ ಬಂತು. ಆಯೋಗದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಸಹಿತ ನಾಲ್ಕು ಮಂದಿ ಸದಸ್ಯರಿದ್ದಾರೆ. ರಾಜ್ಯ ಸರಕಾರವು ಇವರನ್ನು ನಾಮನಿರ್ದೇಶನ ಮಾಡುತ್ತದೆ. ಸದಸ್ಯರ ಅಧಿಕಾರಾವಧಿ ಮೂರು ವರ್ಷ. ಸಂವಿಧಾನಾತ್ಮಕವಾಗಿ ಮತ – ಭಾಷಾ ಅಲ್ಪಸಂಖ್ಯಾತರಿಗೆ ನೀಡಿರುವ ಹಕ್ಕುಗಳು ಲಭಿಸುತ್ತಿವೆ ಎಂದು ಖಾತರಿಪಡಿಸುವುದು ಅಲ್ಪಸಂಖ್ಯಾತ ಆಯೋಗದ ಜವಾಬ್ದಾರಿಯಾಗಿದೆ. ಈ ವಿಭಾಗದವರಿಗೆ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಮುನ್ನಡೆಸಲು ಬೇಕಾದ ಕ್ರಮಗಳನ್ನು ಶಿಫಾರಸು ಮಾಡುವುದು ಈ ಆಯೋಗವಾಗಿದೆ.

- ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಹಸ್ತಕ್ಷೇಪಕ್ಕೆ ಸಂಬಂಧಿಸಿದ ಪತ್ರಿಕಾ ವರದಿಗಳನ್ನು ಸಂಗ್ರಹಿಸಿರಿ.
- ನಿಮ್ಮ ಪರಿಸರದಲ್ಲಿ ಭಾಷಾ ಅಲ್ಪಸಂಖ್ಯಾತರಿದ್ದಾರೆಯೇ ಎಂದು ಕಂಡುಹಿಡಿಯಬಹುದೆ?
- ಭಾಷಾ ಅಲ್ಪಸಂಖ್ಯಾತರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

ಎಲ್ಲ ವಿಭಾಗದ ಜನರ ಪಾಲ್ಗೊಳ್ಳುವಿಕೆ ಮತ್ತು ಒಳಪಡಿಸುವಿಕೆಯು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಮುಖವಾದುದಾಗಿದೆ. ಅಲ್ಪಸಂಖ್ಯಾತ ಭಾಷಾ ವಿಭಾಗಗಳು, ಮತ ವಿಭಾಗಗಳು, ಸಾಂಸ್ಕೃತಿಕ ವಿಭಾಗಗಳು ಮೊದಲಾದವುಗಳ ಏಳಿಗೆ ಹಾಗೂ ಪ್ರಗತಿಯು ಇದಕ್ಕೆ ಅನಿವಾರ್ಯವಾಗಿದೆ. ಇದರೊಂದಿಗೆ ಅಲ್ಪಸಂಖ್ಯಾತ ಕ್ಷೇಮವು ಬಹುಸಂಖ್ಯಾತರ ಜವಾಬ್ದಾರಿ ಎಂಬ ಸಾರ್ವತ್ರಿಕ ಪ್ರಜ್ಞೆಯನ್ನು ಮೂಡಿಸಬೇಕಾಗಿದೆ. ಈ ಉದ್ದೇಶಗಳನ್ನು ಸಾಧಿಸುವುದಕ್ಕೆ ಅಲ್ಪಸಂಖ್ಯಾತ ಆಯೋಗವು ನಡೆಸುವ ಪ್ರಯತ್ನಗಳು ಪ್ರಜಾಪ್ರಭುತ್ವದ ವ್ಯಾಪಿಸುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

## ರಾಷ್ಟ್ರೀಯ ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗ ಆಯೋಗಗಳು

ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗ ಪ್ರದೇಶಗಳಲ್ಲಿ ರಸ್ತೆ ಮತ್ತು ವಾರ್ತಾವಿನಿಮಯಕ್ಕೆ ಮೊದಲ ಆದ್ಯತೆಯನ್ನೀಯಬೇಕು. ಅವು ಇಲ್ಲದಿದ್ದರೆ ನಾವು ಮಾಡುವ ಯಾವುದೂ ಪರಿಣಾಮಕಾರಿಯಾಗದು. ಶಾಲೆಗಳು, ಆರೋಗ್ಯ ರಕ್ಷಣಾ ಚಟುವಟಿಕೆಗಳು, ಗುಡಿಕೈಗಾರಿಕೆಗಳು ಹೀಗೆ ಎಲ್ಲವೂ ಅತ್ಯಗತ್ಯವಾದವುಗಳಾಗಿವೆ. ಆದರೆ ನಾವು ಅವರ ಜೀವನ ವಿಧಾನದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದೂ ಅವರಿಗೆ ಇಷ್ಟವಿರುವ ರೀತಿಯಲ್ಲಿ ಜೀವಿಸಲು ಅವರಿಗೆ ಸಹಾಯ ಮಾಡುವುದು ಮಾತ್ರವೆಂಬುದನ್ನೂ ನಾವು ಯಾವಾಗಲೂ ನೆನಪಿನಲ್ಲಿಡಬೇಕು.

ಜವಹರ್ ಲಾಲ್ ನೆಹರೂ (ಜೂನ್ 7,1952)

ಭಾರತದ ಪ್ರಥಮ ಪ್ರಧಾನಮಂತ್ರಿ ಜವಹರ್‌ಲಾಲ್ ನೆಹರೂರವರ ಮಾತುಗಳನ್ನು ಮೇಲೆ ನೀಡಲಾಗಿದೆ. ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗ ವಿಭಾಗಕ್ಕೊಳಪಟ್ಟ ಜನರಿಗಾಗಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂದು ನೆಹರೂ ಅಭಿಪ್ರಾಯಪಟ್ಟಿದ್ದಾರೆ? ಚರ್ಚಿಸಿರಿ.

- ರಸ್ತೆಗಳು, ವಾರ್ತಾ ವಿನಿಮಯ ಸೌಕರ್ಯಗಳು.
- 
- 

ತಾರತಮ್ಯಗಳಿಂದಲೂ ಶೋಷಣೆಯಿಂದಲೂ ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗ ವಿಭಾಗಗಳನ್ನು ಕಾಪಾಡಲು ಮತ್ತು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದೆಂಬ ಉದ್ದೇಶದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಆಯೋಗವನ್ನು ರೂಪಿಸಲಾಯಿತು. ಇದರೊಂದಿಗೆ ಅವರ ಸಾಂಸ್ಕೃತಿಕ ವೈವಿಧ್ಯಗಳನ್ನು ಹಾಗೂ ವಿಶೇಷತೆಗಳನ್ನು ಕಾಪಾಡುವುದೂ ಪ್ರಮುಖವಾದುದಾಗಿದೆ. 2004 ರಲ್ಲಿ ಈ ಎರಡು ಆಯೋಗಗಳು ಅಸ್ತಿತ್ವಕ್ಕೆ ಬಂದವು. ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮೂವರು ಸದಸ್ಯರನ್ನು ಆಯೋಗವು ಒಳಗೊಂಡಿದೆ. ರಾಷ್ಟ್ರಪತಿಯವರು ಆಯೋಗದ ಸದಸ್ಯರನ್ನು ನೇಮಿಸುತ್ತಾರೆ. ಸದಸ್ಯರ ಅಧಿಕಾರಾವಧಿ ಮೂರು ವರ್ಷಗಳಾಗಿವೆ.







ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗ ಆಯೋಗದ ಕೇಂದ್ರ ಕಛೇರಿ – ನವದೆಹಲಿ

### ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗ (ಆಕ್ರಮಣಗಳನ್ನು ತಡೆಯುವುದು) ಕಾಯಿದೆ 1989

ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗದವರಿಗೆದುರಾಗಿ ನಡೆಯುವ ಆಕ್ರಮಣಗಳನ್ನು ತಡೆಯುವುದು, ಇಂತಹ ಅಪರಾಧಗಳ ವಿಚಾರಣೆಗಾಗಿ ಪ್ರತ್ಯೇಕ ನ್ಯಾಯಾಲಯಗಳನ್ನು ಸ್ಥಾಪಿಸುವುದು, ಇವರ ಆರೋಗ್ಯ ಮತ್ತು ಪುನರ್ವಸತಿಗಾಗಿ ಕ್ರಮಗಳನ್ನು ಕೈಗೊಳ್ಳುವುದು ಮೊದಲಾದಉದ್ದೇಶಗಳನ್ನಿಟ್ಟುಕೊಂಡುಪರಿಶಿಷ್ಟಜಾತಿ–ಪರಿಶಿಷ್ಟವರ್ಗ(ಅತಿಕ್ರಮಣಗಳನ್ನು ತಡೆಯುವುದು) ಕಾಯಿದೆಯು ಅಸ್ತಿತ್ವಕ್ಕೆ ಬಂತು. ಈ ಕಾಯಿದೆಯು 1989 ರಲ್ಲಿ ಜಾರಿಗೆ ಬಂತು. ಈ ಕಾಯಿದೆಯಲ್ಲಿ ಪರಿಶಿಷ್ಟ ವಿಭಾಗದವರ ಮೇಲೆ ನಡೆಯುವ ಅತಿಕ್ರಮಣಗಳು,

ಕಾನೂನು ಉಲ್ಲಂಘನೆಗಳು ಏನೆಂಬುದನ್ನೂ ಅಪರಾಧಿಗಳಿಗಿರುವ ಶಿಕ್ಷಾಕ್ರಮಗಳು ಯಾವುವೆಲ್ಲ ಎಂಬುದನ್ನೂ ಇವರ ಪುನರ್ವಸತಿ ಹೇಗಿರಬೇಕೆಂಬುದನ್ನೂ ವಿವರಿಸಲಾಗಿದೆ.

**ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗ ಆಯೋಗದ ಜವಾಬ್ದಾರಿಗಳು**

- ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗದವರ ಮೇಲೆ ನಡೆಯುವ ಆಕ್ರಮಣಗಳಿಗೆ ಸಂಬಂಧಿಸಿ ದೂರುಗಳನ್ನು ವಿಚಾರಣೆ ನಡೆಸುವುದು.
- ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗದವರ ಕ್ಷೇಮ, ರಕ್ಷಣೆ, ಏಳಿಗೆ ಎಂಬಿವುಗಳನ್ನು ಉದ್ದೇಶವಾಗಿರಿಸಿ ಕೊಂಡು ನಡೆಸುವ ಚಟುವಟಿಕೆಗಳನ್ನು ಸಮನ್ವಯ ಗೊಳಿಸುವುದು.
- ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗದವರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಅಗತ್ಯವಿರುವ ನಿರ್ದೇಶಗಳನ್ನು ಸರಕಾರಕ್ಕೆ ಸಮರ್ಪಿಸುವುದು.
- ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗದವರ ಕ್ಷೇಮಕ್ಕಾಗಿ ಸಂವಿಧಾನಾತ್ಮಕ ವ್ಯವಸ್ಥೆಗಳು ಕಾರ್ಯದಕ್ಷತೆಯಿಂದ ಜಾರಿಗೊಳ್ಳುತ್ತವೆ ಎಂಬುದನ್ನು ಅವಲೋಕಿಸುವುದು.

ಚರಿತ್ರೆಯ ಹಾದಿಯಲ್ಲಿ ಸಾಮಾಜಿಕವಾಗಿ ಅವಗಣಿಸಲ್ಪಟ್ಟ ವಿಭಾಗದವರ ಸಕ್ರಿಯವಾದ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸುವ ಮೂಲಕ ಮಾತ್ರವೇ ಪ್ರಜಾಪ್ರಭುತ್ವವು ಪೂರ್ಣವಾಗಬಹುದಷ್ಟೆ. ಅವರ ವಿಶೇಷವಾದ ಪಾರಂಪರಿಕ ಜ್ಞಾನ ಹಾಗೂ ಸಂಸ್ಕೃತಿಯ ಸ್ವಂತಿಕೆಯು ನಷ್ಟವಾಗದಂತೆ ಕಾಪಾಡುವುದರೊಂದಿಗೆ ಆಧುನಿಕ ಸಮಾಜದಲ್ಲಿ ಈ ಜನತೆಯ ಭಾಗವಹಿಸುವಿಕೆಯನ್ನು ಖಾತರಿಪಡಿಸಬೇಕು. ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ, ಪರಿಶಿಷ್ಟ ವರ್ಗ ಆಯೋಗ ಎಂಬಿವುಗಳ ಕಾರ್ಯನಿರ್ವಹಣೆಯು ಈ ಪ್ರಕ್ರಿಯೆಯನ್ನು ಬಲಪಡಿಸುವುದರ ಜೊತೆಗೆ ಪ್ರಜಾಪ್ರಭುತ್ವವು ಮತ್ತಷ್ಟು ಬಲಗೊಳ್ಳುತ್ತದೆ.

- ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗ ವಿಭಾಗಗಳಿಗಾಗಿ ಸರಕಾರವು ಜಾರಿಗೊಳಿಸುತ್ತಿರುವ ವಿವಿಧ ಕ್ಷೇಮ ಯೋಜನೆಗಳು ಯಾವುವು ಎಂಬುದನ್ನು ಕಂಡುಹಿಡಿದು ಪಟ್ಟಿ ತಯಾರಿಸಿರಿ.
- ರಾಷ್ಟ್ರೀಯ ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗ ಆಯೋಗಗಳ ಹಸ್ತಕ್ಷೇಪವನ್ನು ಸೂಚಿಸುವ ಪತ್ರಿಕಾ ವರದಿಗಳನ್ನು ಸಂಗ್ರಹಿಸಿರಿ.

### ರಾಜ್ಯ ಪರಿಶಿಷ್ಟ ಜಾತಿ – ಪರಿಶಿಷ್ಟ ಬುಡಕಟ್ಟು ವರ್ಗ ಆಯೋಗ

ಕೇರಳದ ಪರಿಶಿಷ್ಟ ಜಾತಿ – ಪರಿಶಿಷ್ಟ ಬುಡಕಟ್ಟು ವರ್ಗಕ್ಕೆ ಸೇರಿದವರ ಕ್ಷೇಮ ಹಾಗೂ ರಕ್ಷಣೆಯನ್ನು ಖಾತರಿಗೊಳಿಸುವ ಉದ್ದೇಶದಿಂದ ಕೇರಳ ಪರಿಶಿಷ್ಟ ಜಾತಿ – ಪರಿಶಿಷ್ಟ ಬುಡಕಟ್ಟು ವರ್ಗ ಆಯೋಗವು ರೂಪುಗೊಂಡಿತು. ಆಯೋಗವು ಅಧ್ಯಕ್ಷರು ಮತ್ತು ಇತರ ಇಬ್ಬರು ಸದಸ್ಯರನ್ನೊಳಗೊಂಡಿದೆ. ರಾಜ್ಯಪಾಲರು ಇವರನ್ನು ನೇಮಿಸುತ್ತಾರೆ. ಸದಸ್ಯರ ಅಧಿಕಾರಾವಧಿ ಮೂರು ವರ್ಷ. ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗದವರ ಹಕ್ಕುಗಳ ನಿಷೇಧಕ್ಕೆ ಸಂಬಂಧಿಸಿದ ದೂರುಗಳಲ್ಲಿ ವಿಚಾರಣೆ ನಡೆಸುವುದು ಮತ್ತು ಕ್ರಮಗಳ ಬಗ್ಗೆ ಶಿಫಾರಸು ನೀಡುವುದು ಆಯೋಗದ ಪ್ರಮುಖ ಜವಾಬ್ದಾರಿಯಾಗಿದೆ. ಮಾತ್ರವಲ್ಲದೆ ಪ್ರಸ್ತುತ ವಿಭಾಗಗಳ ಸಾಮಾಜಿಕ – ಆರ್ಥಿಕ ಸ್ಥಿತಿಯನ್ನು ಅವಲೋಕಿಸುವುದರೊಂದಿಗೆ ಅವರ ಪ್ರಗತಿಯನ್ನು ಖಾತರಿಪಡಿಸುವುದಕ್ಕೆ ಸಂಬಂಧಿಸಿದ ನಿರ್ದೇಶಗಳನ್ನು ನೀಡುವುದು ಕೂಡಾ ಆಯೋಗದ ಜವಾಬ್ದಾರಿಗಳಲ್ಲಿ ಒಳಗೊಳ್ಳುತ್ತದೆ.

# ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ

ಎಲ್ಲರಿಗೂ ಶಿಕ್ಷಣ ಲಭಿಸುವ ಒಂದು ಹಂತಕ್ಕೆ ತರಲೇಬೇಕು. ಹಿಂದುಳಿದ ವರ್ಗದವರಿಗೆ ಉನ್ನತ ಶಿಕ್ಷಣವು ತುಂಬ ಕಡಿಮೆ ಖರ್ಚಿನದ್ದಾಗ ಬೇಕೆಂಬುದು ಶಿಕ್ಷಣ ಇಲಾಖೆಯ ಧೋರಣೆಯಾಗಿದೆ. ಈ ವರ್ಗದವರೆಲ್ಲರನ್ನೂ ಸಮಾನತೆ ಯತ್ತ ಕೊಂಡೊಯ್ಯಬೇಕಾದರೆ ಅದಕ್ಕಿರುವ ಏಕೈಕ ಮಾರ್ಗವೆಂದರೆ ಅವರಿಗೆ ಪ್ರತ್ಯೇಕ ಪರಿಗಣನೆ ನೀಡುವುದು ಮಾತ್ರವಾಗಿದೆ.

**ಡಾ. ಬಿ. ಆರ್. ಅಂಬೇಡ್ಕರ್**

1927, ಫೆಬ್ರವರಿ 24, ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಬಜೆಟ್ ಭಾಷಣ

ಡಾ. ಬಿ.ಆರ್. ಅಂಬೇಡ್ಕರರ ಭಾಷಣವನ್ನು ಗಮನಿಸಿರಿ. ಹಿಂದುಳಿದ ವರ್ಗದವರ ಏಳಿಗೆಗಾಗಿ ಯಾವೆಲ್ಲ ವಿಚಾರಗಳನ್ನು ಅಂಬೇಡ್ಕರ್ ನಿರ್ದೇಶಿಸುತ್ತಾರೆ?

- ಉನ್ನತ ಶಿಕ್ಷಣದ ಖರ್ಚನ್ನು ಕಡಿಮೆ ಮಾಡುವುದು.
-
-
-

ದೇಶದಲ್ಲಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವವರ ಏಳಿಗೆಯನ್ನು ಉದ್ದೇಶವಾಗಿರಿಸಿಕೊಂಡು ಹಿಂದುಳಿದ ವರ್ಗದವರಿಗಾಗಿ ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸಲಾಯಿತು. ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವವರ ಹಿಂದುಳಿಯುವಿಕೆಯನ್ನು ನೀಗಿಸುವುದಕ್ಕೆ ಅಗತ್ಯವಾದ ನಿರ್ದೇಶಗಳನ್ನು ನೀಡುವುದು ಕೂಡಾ ಆಯೋಗದ ಜವಾಬ್ದಾರಿಗಳಲ್ಲಿ ಒಳಗೊಂಡಿದೆ. 1993 ರಲ್ಲಿ ಆಯೋಗವು ಅಸ್ತಿತ್ವಕ್ಕೆ ಬಂತು. ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮೂವರು ಸದಸ್ಯರನ್ನು ಆಯೋಗವು ಹೊಂದಿದೆ. ರಾಷ್ಟ್ರಪತಿಯವರು ಆಯೋಗದ ಸದಸ್ಯರನ್ನು ನೇಮಿಸುತ್ತಾರೆ. ಸದಸ್ಯರ ಅಧಿಕಾರಾವಧಿ ಮೂರು ವರ್ಷ. 2018 ರಲ್ಲಿ ಆಯೋಗಕ್ಕೆ ಸಂವಿಧಾನಾತ್ಮಕ ಸ್ಥಾನಮಾನ ಲಭಿಸಿತು.

## ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಜವಾಬ್ದಾರಿಗಳು

- ಹಿಂದುಳಿದ ವರ್ಗದವರಿಗಿರುವ ಸಂವಿಧಾನಾತ್ಮಕ ವ್ಯವಸ್ಥೆಗಳು ಮತ್ತು ಕಾನೂನುಗಳು ಕಾರ್ಯದಕ್ಷತೆಯಿಂದ ಕೂಡಿದೆ ಎಂದು ಖಾತರಿಪಡಿಸುವುದು.
- ಹಿಂದುಳಿದ ವರ್ಗದವರ ಕ್ಷೇಮಕ್ಕಾಗಿ ಇರುವ ವಿವಿಧ ವ್ಯವಸ್ಥೆಗಳ ಕಾರ್ಯ ನಿರ್ವಹಣೆಗೆ ಸಂಬಂಧಿಸಿದ ವರದಿಗಳನ್ನು ಸರಕಾರಕ್ಕೆ ಸಲ್ಲಿಸುವುದು.
- ಹಿಂದುಳಿದ ವರ್ಗದವರು ಎದುರಿಸುತ್ತಿರುವ ಅತಿಕ್ರಮಣಗಳಿಗೆದುರಾಗಿ ಕ್ರಮಕೈಗೊಳ್ಳಲು ಹಾಗೂ ನ್ಯಾಯವನ್ನು ಖಾತರಿಪಡಿಸುವು ದಕ್ಕಿರುವ ಶಿಫಾರಸುಗಳನ್ನು ನೀಡುವುದು.
- ಹಿಂದುಳಿದ ಪದವಿಗೆ ಸಂಬಂಧಪಟ್ಟ ಆವಶ್ಯಕತೆಗಳನ್ನು ಪರಿಶೀಲಿಸಿ ಅಗತ್ಯವಿರುವ ನಿರ್ದೇಶಗಳನ್ನು ಸರಕಾರಗಳಿಗೆ ಸಲ್ಲಿಸುವುದು.

### ಕೇರಳ ರಾಜ್ಯ ಹಿಂದುಳಿದ ವರ್ಗಗಳ ಆಯೋಗ

1993 ರಲ್ಲಿ ಕೇರಳ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಅಸ್ತಿತ್ವಕ್ಕೆ ಬಂತು. ಆಯೋಗದ ಅಧಿಕಾರಾವಧಿ ಮೂರು ವರ್ಷ. ಹಿಂದುಳಿದ ವರ್ಗದವರ ಸಾಮಾಜಿಕ – ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ, ಪ್ರಸ್ತುತ ವಿಭಾಗಗಳನ್ನು ಮೀಸಲಾತಿ ಪಟ್ಟಿಯಲ್ಲಿ ಸೇರಿಸಿ, ಅನುಕೂಲತೆಗಳನ್ನು ನೀಡಲು ಅಗತ್ಯವಾದ ನಿರ್ದೇಶಗಳನ್ನು ಸಲ್ಲಿಸುವುದು ಆಯೋಗದ ಜವಾಬ್ದಾರಿಯಲ್ಲಿ ಒಳಪಡುತ್ತದೆ.




ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಕೇಂದ್ರ ಕಛೇರಿ – ನವದೆಹಲಿ

- ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಮತ್ತು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಈಗಿನ ಅಧ್ಯಕ್ಷರು ಯಾರೆಂಬುದನ್ನು ಕಂಡುಹಿಡಿಯಿರಿ.
- ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಕಾರ್ಯ ಚಟುವಟಿಕೆಗಳ ಬಗ್ಗೆ ಟಿಪ್ಪಣಿ ತಯಾರಿಸಿರಿ.

## ಪ್ರಜಾಪ್ರಭುತ್ವದ ವ್ಯಾಪಿಸುವಿಕೆ – ಸಂಸ್ಥೆಗಳ ಪಾತ್ರ

ವಿಶಾಲವಾದ ಭೂವಿಸ್ತಾರ, ಹೆಚ್ಚಿನ ಜನಸಂಖ್ಯೆ, ಸಾಂಸ್ಕೃತಿಕ ವೈವಿಧ್ಯಗಳಿರುವ ನಮ್ಮ ದೇಶದಲ್ಲಿ ವಿವಿಧ ಜನ ವಿಭಾಗಗಳ ಸಾಮಾಜಿಕ – ಆರ್ಥಿಕ ಹಿಂದುಳಿಯುವಿಕೆಯನ್ನು ನೀಗಿಸಬೇಕಾದುದು ಅನಿವಾರ್ಯವಾಗಿದೆ. ಸಂವಿಧಾನವು ಕಲ್ಪಿಸುವ ಅವಕಾಶ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸುವ ಮೂಲಕ ಮಾತ್ರ ಈ ಹಿಂದುಳಿಯುವಿಕೆಯನ್ನು ನೀಗಿಸಲು ಸಾಧ್ಯವಾಗಬಹುದಷ್ಟೆ. ಸಾಮಾಜಿಕ – ಆರ್ಥಿಕವಾಗಿ ಹಿಂದುಳಿದಿರುವ ವರ್ಗದವರನ್ನು ಕೂಡಾ ಸಮಾಜದ ಮುಖ್ಯವಾಹಿನಿಗೆ ತಲುಪಿಸುವುದರ ಮೂಲಕ ಮಾತ್ರವೇ ಪ್ರಜಾಪ್ರಭುತ್ವವು ಸಂಪೂರ್ಣವಾಗಬಹುದಷ್ಟೆ.

## ಕೇಂದ್ರ ಲೋಕ ಸೇವಾ ಆಯೋಗ (UPSC)

ಕೇಂದ್ರ ಲೋಕ ಸೇವಾ ಆಯೋಗ (UPSC) ವೆಂಬುದು ಭಾರತ ಸರಕಾರದ ಅಧೀನದಲ್ಲಿ ನೇಮಕಾತಿಗಾಗಿ ಸ್ಥಾಪಿತವಾದ ಸಂವಿಧಾನಾತ್ಮಕ ಸಂಸ್ಥೆಯಾಗಿದೆ. ಭಾರತೀಯ ಸಂವಿಧಾನದ ಅನುಚ್ಛೇದ 320 ರ ಪ್ರಕಾರ ಆಯೋಗವು ಅಸ್ತಿತ್ವಕ್ಕೆ ಬಂತು. ಆಯೋಗವು ಅಧ್ಯಕ್ಷರು ಹಾಗೂ ಹತ್ತು ಜನ ಸದಸ್ಯರನ್ನು ಹೊಂದಿದೆ. ರಾಷ್ಟ್ರಪತಿಗಳು ಇವರನ್ನು ನೇಮಕ ಮಾಡುತ್ತಾರೆ. ಸದಸ್ಯರ ಅಧಿಕಾರಾವಧಿ ಆರು ವರ್ಷಗಳು ಅಥವಾ ಅವರಿಗೆ 65 ವರ್ಷ ಪ್ರಾಯವಾಗುವವರೆಗೆ ಆಗಿದೆ. ಅಖಿಲ ಭಾರತ ಸೇವೆ (All India Service), ಕೇಂದ್ರ ನಾಗರಿಕ ಸೇವೆ (Central Civil Service) ಗಿರುವ ನೇಮಕಾತಿಗಳನ್ನು ಯು.ಪಿ.ಎಸ್.ಸಿ. ಯು ನಡೆಸುತ್ತದೆ. ಕೇಂದ್ರ ಸರಕಾರದ ಸೇವೆಗೆ ನೇಮಕಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಆಯ್ಕೆ ನಡೆಸುವುದು ಆಯೋಗದ ಪ್ರಮುಖ ಜವಾಬ್ದಾರಿಯಾಗಿದೆ. ರಾಜ್ಯ ಲೋಕ ಸೇವಾ ಆಯೋಗವು (PSC) ರಾಜ್ಯಗಳಲ್ಲಿ ಸರಕಾರದ ಸೇವೆಗೆ ನೇಮಕವನ್ನು ಮಾಡುತ್ತದೆ. ಕೇರಳದಲ್ಲಿ ಲೋಕ ಸೇವಾ ಆಯೋಗವು (KPSC) ರಾಜ್ಯ ಸರಕಾರದ ಹುದ್ದೆಗಳಿಗೆ ನೇಮಕಗಳನ್ನು ಮಾಡುತ್ತದೆ.

ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯ ಜಯಪರಾಜಯಗಳು ಜನರ ಪಾಲ್ಗೊಳ್ಳುವಿಕೆಯನ್ನು ಅವಲಂಬಿಸಿವೆ. ವಿವಿಧ ಜನವರ್ಗದವರ ಪಾಲ್ಗೊಳ್ಳುವಿಕೆಯನ್ನು ರಾಜಕೀಯ ಪ್ರಕ್ರಿಯೆಯಲ್ಲಿ ಖಾತರಿಪಡಿಸುವಲ್ಲಿ ಮೇಲೆ ಹೇಳಿರುವ ಸಾಂವಿಧಾನಾತ್ಮಕ – ಸಾಂವಿಧಾನಾತ್ಮಕೇತರ ಸಂಸ್ಥೆಗಳ ಪಾತ್ರವು ಪ್ರಮುಖವಾದುದಾಗಿದೆ. ಉದಾಹರಣೆಗೆ ಚುನಾವಣಾ ಆಯೋಗವು ಪೌರರ ರಾಜಕೀಯ ಹಕ್ಕನ್ನು ಸ್ವತಂತ್ರ ಹಾಗೂ ನಿರ್ಭಯದಿಂದ ಬಳಸುವ ಸಂದರ್ಭವನ್ನು ಸೃಷ್ಟಿಸುವ ಮೂಲಕ ರಾಜಕೀಯ ಪ್ರಜಾಪ್ರಭುತ್ವದ ಅಡಿಪಾಯವನ್ನು ವಿಪುಲಗೊಳಿಸುತ್ತದೆ. 1951 – 52 ರಿಂದಲೇ ಚುನಾವಣೆಯು ಪ್ರಜಾಪ್ರಭುತ್ವವನ್ನು ಬಲಪಡಿಸಲು ಮತ್ತು ಸ್ವತಂತ್ರ ಹಾಗೂ ನ್ಯಾಯ ಸಮ್ಮತವಾದ ಚುನಾವಣೆಯನ್ನು ಖಚಿತಪಡಿಸುವುದಕ್ಕಾಗಿ ಅಗತ್ಯವಾದ ಕ್ರಮಗಳನ್ನು ಚುನಾವಣಾ ಆಯೋಗವು ಕೈಗೊಂಡಿದೆ. ಮತದಾರ ಕ್ಷೇತ್ರಗಳ ನಿರ್ಣಯ, ಮತದಾರ ಪಟ್ಟಿಯ ತಯಾರಿ, ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕಿನ ಜಾರಿಗೊಳಿಸುವಿಕೆ, ರಾಜಕೀಯ ಪಕ್ಷಗಳಿಗೆ ಅಂಗೀಕಾರ ನೀಡುವುದು, ಚುನಾವಣಾ ಸುಧಾರಣೆಗಳನ್ನು ಜಾರಿಗೊಳಿಸುವುದು, ಚುನಾವಣಾ ಸಾಕ್ಷರತೆಯನ್ನು ಗಳಿಸುವುದು ಮೊದಲಾದ ಕಾರ್ಯಗಳನ್ನು ಆಯೋಗವು ನಿರ್ವಹಿಸುವ ಮೂಲಕ ಭಾರತದ ಪ್ರಜಾಪ್ರಭುತ್ವವನ್ನು ಬಲಪಡಿಸಿದೆ.

ಚಾರಿತ್ರಿಕ ಕಾರಣಗಳಿಂದ ಅವಗಣಿಸಲ್ಪಟ್ಟಿರುವ ವಿವಿಧ ವಿಭಾಗದವರು ಪ್ರಜಾಪ್ರಭುತ್ವ ಪ್ರಕ್ರಿಯೆಯ ಅಂಗವಾಗುವಂತೆ ಮಾಡಿ, ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡುವಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ರಾಷ್ಟ್ರೀಯ ಮಹಿಳಾ ಆಯೋಗ, ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗ, ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ, ರಾಷ್ಟ್ರೀಯ ಪರಿಶಿಷ್ಟ ವರ್ಗ ಆಯೋಗ, ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಮೊದಲಾದ ಸಂಸ್ಥೆಗಳು ಪ್ರಮುಖ ಪಾತ್ರವಹಿಸುತ್ತವೆ. ಚುನಾವಣಾ ಪ್ರಜಾಪ್ರಭುತ್ವಕ್ಕಿಂತಲೂ ಮಿಗಿಲಾಗಿ ವಿಭಾಗೀಯತೆಗೊಳಗಾದ (ಬದಿಗೆ ತಳ್ಳಲ್ಪಟ್ಟ) ವರ್ಗಗಳ ತೊಂದರೆಗಳನ್ನು ಪ್ರತ್ಯೇಕವಾಗಿಯೇ ಪರಿಹರಿಸಬೇಕಾಗಿದೆ. ಮೇಲೆ ಹೇಳಿದ ಆಯೋಗಗಳು ಈ ಕಾರ್ಯವನ್ನು ನಿರ್ವಹಿಸುತ್ತವೆ. ಸಾಮಾಜಿಕ ಹಿಂದುಳಿಯುವಿಕೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದರ ಜೊತೆಗೆ ವೈಯಕ್ತಿಕವಾಗಿ ಎದುರಿಸುತ್ತಿರುವ ಸಮಸ್ಯೆಗಳಿಗೂ ಪರಿಹಾರವನ್ನು ಕಂಡುಕೊಳ್ಳಲು ಈ ಆಯೋಗಗಳು ಪ್ರಯತ್ನಿಸುತ್ತಿವೆ.

ಪೌರರ ಹಕ್ಕುಗಳನ್ನು ಕಾಪಾಡುವುದರೊಂದಿಗೆ ಮಾನವರಲ್ಲಿ ಅಂತರ್ಲೀನವಾದ ಘನತೆಯಿಂದ ರೂಪುಗೊಂಡ ಹಕ್ಕುಗಳ ಸಂರಕ್ಷಣೆ ಹಾಗೂ ಖಾತರಿಪಡಿಸುವಿಕೆಯು ಪ್ರಜಾಪ್ರಭುತ್ವದ ವ್ಯಾಪಿಸುವಿಕೆಗೆ ಅನಿವಾರ್ಯವಾಗಿದೆ. ಇಂತಹ ಹಕ್ಕುಗಳನ್ನು ಖಾತರಿಪಡಿಸಿ

ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಸುದೃಢಗೊಳಿಸುವಲ್ಲಿ ಮಾನವ ಹಕ್ಕುಗಳ ಆಯೋಗವು ಸ್ತುತ್ಯರ್ಹವಾದ ಪಾತ್ರ ವಹಿಸುತ್ತದೆ. ಸ್ತ್ರೀಯರ ಸಾಮಾಜಿಕ ಮುನ್ನಡೆಯನ್ನು ಖಾತರಿಪಡಿಸುವುದಕ್ಕೆ, ಸ್ತ್ರೀಯರಿಗೆದುರಾಗಿ ನಡೆಯುವ ಅತಿಕ್ರಮಣಗಳನ್ನು ತಡೆಯಲು ಹಾಗೂ ಅವರ ಘನತೆಯನ್ನು ಎತ್ತಿಹಿಡಿಯುವುದಕ್ಕೆ ಸಹಕಾರಿಯಾಗುವಂತಹ ಕ್ರಮಗಳನ್ನು ಕೈಗೊಳ್ಳುವ ಮೂಲಕ ಮಹಿಳಾ ಆಯೋಗವು ಪ್ರಜಾಪ್ರಭುತ್ವವು ಇನ್ನೂ ಅರ್ಥಪೂರ್ಣವಾಗುವಂತೆ ಮಾಡಿದೆ.

ಅಲ್ಪಸಂಖ್ಯಾತರ ರಕ್ಷಣೆ, ಸಮಾನ ಪರಿಗಣನೆ ಇವುಗಳನ್ನು ಖಾತರಿಪಡಿಸಬೇಕಾದುದು ಪ್ರಜಾಪ್ರಭುತ್ವ ರಾಷ್ಟ್ರವೊಂದರ ಜವಾಬ್ದಾರಿಯಾಗಿದೆ. ಅಲ್ಪಸಂಖ್ಯಾತ ವರ್ಗದವರ ಮೇಲೆ ನಡೆಯುವ ಆಕ್ರಮಣಗಳನ್ನು ತಡೆಯುವ ಮೂಲಕ ಹಾಗೂ ಅಲ್ಪಸಂಖ್ಯಾತರ ಹಕ್ಕುಗಳನ್ನು ಖಾತರಿಪಡಿಸುವ ಮೂಲಕ ಅಲ್ಪಸಂಖ್ಯಾತ ಆಯೋಗವು ಪ್ರಜಾಪ್ರಭುತ್ವವನ್ನು ಬಲಪಡಿಸುತ್ತದೆ. ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗದವರು ಎದುರಿಸುತ್ತಿರುವ ವಿವಿಧ ರೀತಿಯ ಸಾಮಾಜಿಕ – ಆರ್ಥಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಹಾಗೂ ಅವರನ್ನು ಮುಖ್ಯವಾಹಿನಿಗೆ ತಲುಪಿಸುವುದಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪರಿಶಿಷ್ಟ ಜಾತಿ – ಪರಿಶಿಷ್ಟ ವರ್ಗ ಆಯೋಗಗಳು ದೊಡ್ಡ ಜವಾಬ್ದಾರಿಯನ್ನು ನೆರವೇರಿಸುತ್ತವೆ. ಇತರ ಹಿಂದುಳಿದ ವರ್ಗದವರ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿರುವ ಹಿಂದುಳಿಯುವಿಕೆಗೆ ಪರಿಹಾರವನ್ನು ಕಂಡುಕೊಂಡು ಅವರನ್ನು ಸಮಾಜದ ಮುಖ್ಯವಾಹಿನಿಯ ಅಂಗವಾಗುವಂತೆ ಮಾಡುವ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಹಿಂದುಳಿದ ವರ್ಗಗಳ ಆಯೋಗವು ನಿರ್ವಹಿಸುತ್ತವೆ.

### ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಮಕ್ಕಳ ಹಕ್ಕುಗಳನ್ನು ಕಾಪಾಡುವ ಉದ್ದೇಶದಿಂದ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ರೂಪಿಸಲಾಯಿತು. ಮಹಿಳಾ ಶಿಶು ಅಭಿವೃದ್ಧಿ ಸಚಿವಾಲಯದ ಅಧೀನದಲ್ಲಿ ಆಯೋಗವು ಕಾರ್ಯವೆಸಗುತ್ತದೆ. 2007 ಮಾರ್ಚ್ 5 ರಂದು ಆಯೋಗವು ಅಸ್ತಿತ್ವಕ್ಕೆ ಬಂತು. ಓರ್ವ ಮುಖ್ಯಸ್ಥರು ಮತ್ತು 6 ಮಂದಿ ಸದಸ್ಯರು ಆಯೋಗದಲ್ಲಿದ್ದಾರೆ. ಮಕ್ಕಳ ಶಿಕ್ಷಣ, ಆರೋಗ್ಯ, ಶುಶ್ರೂಷೆ, ಕ್ಷೇಮ, ನ್ಯಾಯ ಮೊದಲಾದವು ಆಯೋಗದ ಉದ್ದೇಶಗಳಾಗಿವೆ. ಕೇರಳದಲ್ಲಿ ಮಕ್ಕಳ ಹಕ್ಕುಗಳನ್ನು ಕಾಪಾಡುವುದಕ್ಕಾಗಿ ಕೇರಳ ರಾಜ್ಯ ಮಕ್ಕಳ ಹಕ್ಕುಗಳ ಆಯೋಗವು ಕಾರ್ಯವೆಸಗುತ್ತಿದೆ.

ಈ ರೀತಿಯಲ್ಲಿ ಅವಗಣಿಸಲ್ಪಟ್ಟ ವರ್ಗಗಳನ್ನು ಒಳಪಡಿಸಿಕೊಂಡು ರಾಜಕೀಯ ಹಕ್ಕುಗಳ ಬಳಕೆಯನ್ನು ಸಾಧ್ಯವಾಗಿಸುವ ಮೂಲಕ ಮೇಲೆ ಹೇಳಿದ ಸಂಸ್ಥೆಗಳು ಭಾರತೀಯ ಪ್ರಜಾಪ್ರಭುತ್ವವನ್ನು ಸಾಮಾಜಿಕ – ಆರ್ಥಿಕ ಹಂತಗಳಿಗೂ ಕೂಡ ವ್ಯಾಪಿಸುವಂತೆ ಮಾಡುತ್ತವೆ.

ಪ್ರಜಾಪ್ರಭುತ್ವದ ವ್ಯಾಪಿಸುವಿಕೆಯಲ್ಲಿ ಸಂಸ್ಥೆಗಳ ಪಾತ್ರ ಎಂಬ ವಿಷಯದಲ್ಲಿ ತರಗತಿಯಲ್ಲೊಂದು ಪ್ಯಾನೆಲ್ ಚರ್ಚೆಯನ್ನು ಏರ್ಪಡಿಸಿರಿ.

### ಮುಂದುವರಿದ ಚಟುವಟಿಕೆಗಳು

1. ಅಂತಾರಾಷ್ಟ್ರೀಯ ಮಹಿಳಾ ದಿನಕ್ಕೆ ಸಂಬಂಧಿಸಿ ಸ್ತ್ರೀ ಸುರಕ್ಷೆ ಎಂಬ ವಿಷಯದಲ್ಲಿ ವಿಚಾರಗೋಷ್ಠಿಯೊಂದನ್ನು ಏರ್ಪಡಿಸಿರಿ.

2. ನಮ್ಮ ವಿದ್ಯಾಲಯದಲ್ಲಿ ಜರಗಲಿರುವ ಶಾಲಾಪಾರ್ಲಿಮೆಂಟು ಚುನಾವಣೆಯ ಕಾರ್ಯವಿಧಾನಗಳನ್ನು ಗಮನಿಸಿದ್ದೀರಲ್ಲವೇ? ಚುನಾವಣಾ ಆಯೋಗದ ಜವಾಬ್ದಾರಿಗಳನ್ನು ಅವಲೋಕಿಸಿ ತರಗತಿಯಲ್ಲೊಂದು ಮಾದರಿ ಚುನಾವಣೆಯನ್ನು ಏರ್ಪಡಿಸಿದರೆ ಹೇಗೆ? ಅದಕ್ಕಾಗಿ ಯಾವೆಲ್ಲ ಸಿದ್ಧತೆಗಳನ್ನು ಮಾಡಬೇಕು?

- 
- 
- 

3. ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿ ಪ್ರಜ್ಞೆಯನ್ನು ಮೂಡಿಸಲು ಮತ್ತು ಅದಕ್ಕಿರುವ ಪರಿಹಾರವನ್ನು ನಿರ್ದೇಶಿಸಲು ಬೋರ್ಡುಗಳು, ಚಿತ್ರಗಳು ಇತ್ಯಾದಿಗಳನ್ನು ಸಂಗ್ರಹಿಸಿ ಪ್ರದರ್ಶನವೊಂದನ್ನು ಏರ್ಪಡಿಸಿರಿ.

4. ಸಮಾಜದಲ್ಲಿ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಂಬಂಧಿಸಿದ ನಾಟಕವೊಂದನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

5. ತಖ್ತೆಯನ್ನು ಪೂರ್ತಿಗೊಳಿಸಿರಿ.

ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದಕ್ಕಾಗಿ ರೂಪಿತವಾದ ವಿವಿಧ ಆಯೋಗಗಳ ಹೆಸರು, ರೂಪುಗೊಂಡ ಇಸವಿ ಇತ್ಯಾದಿಗಳನ್ನು ಕೆಳಗೆ ಕೊಟ್ಟಿರುವ ತಖ್ತೆಯಲ್ಲಿ ಬರೆಯಿರಿ.

| | ಆಯೋಗದ ಹೆಸರು | ರೂಪುಗೊಂಡ ಇಸವಿ |
|---|---|---|
| 1 | ಚುನಾವಣಾ ಆಯೋಗ | 1950 |
| 2 | | |
| 3 | | |
| 4 | | |
| 5 | | |
| 6 | | |

# 8 ಲಿಂಗ ತಾರತಮ್ಯವಿಲ್ಲದ ಸಮಾಜದೆಡೆಗೆ

> ಲಿಂಗ ಮತ್ತು ಲಿಂಗಭೇದ ವಿಭಿನ್ನವಾದ ಆಶಯಗಳಾಗಿವೆ; ಲಿಂಗವನ್ನು ಆಯ್ಕೆ ಮಾಡಲಿರುವ ಹಕ್ಕು ವ್ಯಕ್ತಿಯಲ್ಲಿ ನಿಕ್ಷಿಪ್ತವಾಗಿದೆ.
>
> **ಗೌರವಾನ್ವಿತ ಕೇರಳ ಹೈಕೋರ್ಟ್**

ಇದು ಗೌರವಾನ್ವಿತ ಕೇರಳ ಹೈಕೋರ್ಟ್ 2023 ಅಗೋಸ್ಟ್ 8 ರಂದು ಪ್ರಕಟಿಸಿದ ಒಂದು ನಿರೀಕ್ಷಣೆಯ ಕುರಿತಾದ ವಾರ್ತೆಯಾಗಿದೆ.

ಈ ವಾರ್ತೆಯಿಂದ ಯಾವ ಯಾವ ವಿಚಾರಗಳು ನಿಮ್ಮ ಗಮನಕ್ಕೆ ಬಂದವು?

•

•

ಈ ವಾರ್ತೆಯಲ್ಲಿ ಒಳಗೊಂಡಿರುವ ಲಿಂಗ (Gender), ಲಿಂಗಭೇದ (Sex) ಎಂಬೀ ಪದಗಳನ್ನು ಇದಕ್ಕೆ ಮೊದಲು ನೀವು ಕೇಳಿರುವಿರಾ ಹಾಗೂ ಪರಿಚಯಿಸಿಕೊಂಡಿದ್ದೀರಾ? ಯಾವ ಯಾವ ಅಧಿಕೃತ ದಾಖಲೆಗಳಲ್ಲಿ ಇವುಗಳ ಕುರಿತು ಸೂಚಿಸಲಾಗಿದೆ?

ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.

- ಆಧಾರ್ ಕಾರ್ಡ್
- ಶಾಲಾ ಪ್ರವೇಶಾತಿ ದಾಖಲೆಗಳು
- ಜನನ ಸರ್ಟಿಫಿಕೇಟ್
- ರೇಶನ್ ಕಾರ್ಡ್
-
-

ವಿವಿಧ ರೀತಿಯ ಗುರುತಿನ ದಾಖಲೆಗಳಲ್ಲಿ ಲಿಂಗ ಮತ್ತು ಲಿಂಗಭೇದ ಎಂಬೀ ಪದಗಳನ್ನು ಪರ್ಯಾಯ ಪದಗಳಾಗಿ ಉಪಯೋಗಿಸಿರುವುದನ್ನು ಕಾಣಬಹುದು. ಆದರೆ ಇನ್ನಿತರ ಗುರುತಿನ ದಾಖಲೆಗಳಲ್ಲಿ, ಅರ್ಜಿ ನಮೂನೆಗಳಲ್ಲಿ ಇದಕ್ಕೆ ಬದಲಾಗಿ ಗಂಡು/ಹೆಣ್ಣು/ ಇತರರು ಎಂದು ಬಳಸಿರುವುದನ್ನು ಕಾಣಬಹುದು.

## ಲಿಂಗಭೇದ ಮತ್ತು ಲಿಂಗ (Sex and Gender)

ಈ ಪಾಠಭಾಗದ ಆರಂಭದಲ್ಲಿ ನೀಡಿರುವ ವಾರ್ತೆಯಲ್ಲಿ ಗೌರವಾನ್ವಿತ ಕೇರಳ ಹೈಕೋರ್ಟಿನ ನಿರೀಕ್ಷಣೆಯಲ್ಲಿ ಲಿಂಗಭೇದ (Sex) ಮತ್ತು ಲಿಂಗ (Gender) ಎಂಬುದು ವಿಭಿನ್ನವಾದ ಆಶಯಗಳಾಗಿವೆಯೆಂದು ಸೂಚಿಸಲಾಗಿದೆ.

ಗಂಡು ಎಂದೂ ಹೆಣ್ಣು ಎಂದೂ ಪ್ರತ್ಯೇಕಿಸುವ ಜೀವಶಾಸ್ತ್ರಪರವಾದ (ಜೈವಿಕ) ವಿಶೇಷತೆಗಳನ್ನು ಸೂಚಿಸುವುದು ಲಿಂಗಭೇದವಾಗಿದೆ. ಕ್ರೋಮೋಸೋಮ್‌ಗಳು, ಶಾರೀರಿಕ ರಚನೆ, ಹಾರ್ಮೋನುಗಳು, ಪ್ರತ್ಯುತ್ಪಾದನಾ ವ್ಯವಸ್ಥೆ ಮತ್ತು ಇತರ ಶಾರೀರಿಕ ಘಟಕಗಳಲ್ಲಿ ಗಂಡು ಮತ್ತು ಹೆಣ್ಣಿಗಿರುವ ವ್ಯತ್ಯಾಸಗಳನ್ನು ಲಿಂಗಭೇದ ಎಂಬ ಪದವು ಸೂಚಿಸುತ್ತದೆ.

ಲಿಂಗವೆಂಬುದು ವಿಭಿನ್ನ ಸಾಮಾಜಿಕ ಸನ್ನಿವೇಶಗಳಲ್ಲಿ ಪುರುಷ, ಸ್ತ್ರೀ ಎಂಬೀ ವಿಭಾಗಗಳಿಗೆ ಸಂಬಂಧಿಸಿಕೊಂಡಿರುವ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮಾನಸಿಕವಾದ ವಿಶೇಷತೆಗಳನ್ನು ಸೂಚಿಸುತ್ತದೆ. ಉದಾಹರಣೆಗೆ ಕೆಲವು ಸಮಾಜಗಳಲ್ಲಿ ಗುಲಾಬಿ ಬಣ್ಣವು ಸ್ತ್ರೀಯರಿಗಿರುವ ಬಣ್ಣವೆಂದೂ ನೀಲಬಣ್ಣವು ಪುರುಷರಿಗಿರುವ ಬಣ್ಣವೆಂದೂ ಪರಿಗಣಿಸುತ್ತಾರೆ. ಇದಕ್ಕೆ ಯಾವುದೇ ಜೈವಿಕ ಕಾರಣಗಳಿಲ್ಲ. ಇದು ಬಹಳ ಹಿಂದಿನ ಕಾಲದಿಂದಲೇ ಸಾಮಾಜಿಕ ಸಂಪ್ರದಾಯವಾಗಿ ಜಾರಿಯಲ್ಲಿರುವುದಾಗಿದೆ. ಇಂತಹ ಇನ್ನಿತರ ಸಂದರ್ಭಗಳನ್ನು ನೀವು ಗಮನಿಸಿದ್ದೀರಾ?

ಲಿಂಗವು ಜೀವಶಾಸ್ತ್ರಪರವಾಗಿ ಅಥವಾ ಸ್ಥಿರವಾಗಿ ಇರುವುದಲ್ಲ. ಇದು ಸಾಮಾಜಿಕ ಹಸ್ತಕ್ಷೇಪಗಳ ಮೂಲಕ ಕರಗತವಾಗುವುದು ಹಾಗೂ ಪ್ರಬಲವಾಗುವುದು. ಅಂದರೆ ಲಿಂಗವು ಒಂದು ಸಾಮಾಜಿಕ ರಚನೆಯಾಗಿದೆ. ಲಿಂಗವೆಂಬುದು ಲಿಂಗಭೇದಕ್ಕಿಂತಲೂ ಮಿಗಿಲಾದ ಒಂದು ಪರಿಕಲ್ಪನೆಯಾಗಿದೆ. ಪ್ರತಿಯೊಂದು ಸಮಾಜವೂ ಪುರುಷ, ಸ್ತ್ರೀ ಎಂಬೀ ಲಿಂಗಗಳಿಗೆ ಸಂಬಂಧಿಸಿ ಕೆಲವು ನಿರೀಕ್ಷೆಗಳನ್ನು ಮತ್ತು ನಡವಳಿಕೆಗಳನ್ನು

ನಿರ್ಮಿಸಿವೆ. ಉದಾಹರಣೆಗೆ ಗಂಡುಮಕ್ಕಳಿಗೆ ಆಟಿಕೆ ಬಂದೂಕುಗಳು ಮತ್ತು ಹೆಣ್ಣು ಮಕ್ಕಳಿಗೆ ಬೊಂಬೆಗಳು ಯೋಗ್ಯವಾದ ಆಟಿಕೆಗಳಾಗಿವೆಯೆಂಬ ಧೋರಣೆಯು ಸಾಮಾನ್ಯವಾಗಿ ನೆಲೆನಿಂತಿರುವುದನ್ನು ಕಾಣಬಹುದು. ಇದೇ ರೀತಿ ವ್ಯಕ್ತಿಗಳು ಸಮಾಜದಿಂದ ಲಿಂಗದ ಕುರಿತಾದ ನಿರೀಕ್ಷೆಗಳನ್ನೂ ನಡವಳಿಕೆಗಳನ್ನೂ ಸಮಾಜೀಕರಣದ ಮೂಲಕ ಆರ್ಜಿಸಿಕೊಳ್ಳುತ್ತಾರೆ. ಇದು ವಿಭಿನ್ನ ಸಂಸ್ಕೃತಿಗಳಲ್ಲಿ ವಿಭಿನ್ನ ರೀತಿಯಲ್ಲಾಗಿರಬಹುದು. ಇದರೊಂದಿಗೆ ಇವುಗಳಿಗೆ ಕಾಲಕ್ಕೆ ತಕ್ಕಂತೆ ಬದಲಾವಣೆ ಗಳೂ ಉಂಟಾಗುತ್ತವೆ.

ಎಲ್ಲಾ ವ್ಯಕ್ತಿಗಳಿಗಿರುವುದು ಲಿಂಗಭೇದಕ್ಕೆ ಹೊಂದಿ ಕೊಂಡು ಸಮಾಜವು ನಿರೀಕ್ಷಿಸುವ ಲಿಂಗವಾಗಿರಲಾರದು. ಕೆಲವರು ಲಿಂಗಭೇದಕ್ಕೆ ಅನುಗುಣವಾಗಿಲ್ಲದ ಲಿಂಗ ವುಳ್ಳ ಮನುಷ್ಯರಾಗಿರಬಹುದು. ಹೀಗೆ ಸಮಾಜವು ನಿರೀಕ್ಷಿಸು ವುದಕ್ಕಿಂತ ಭಿನ್ನವಾದ ಲಿಂಗವುಳ್ಳವರು ತೃತೀಯಲಿಂಗಿ (Transgender) ಗಳಾಗಿದ್ದಾರೆ.

### ಸಮಾಜೀಕರಣ (Socialisation)

ಸಮಾಜೀಕರಣವು ಹುಟ್ಟಿನಿಂದ ಆರಂಭಿಸಿ ಜೀವನ ಕಾಲದುದ್ದಕ್ಕೂ ಮುಂದುವರಿಯುವ ಒಂದು ಪ್ರಕ್ರಿಯೆಯಾಗಿದೆ. ಮಕ್ಕಳಿಗೆ ಅವರು ಜನಿಸುವ ಸಂದರ್ಭದಲ್ಲಿ ಸಮಾಜದ ಕುರಿತು ಮತ್ತು ಸಾಮಾಜಿಕ ನಡವಳಿಕೆಗಳ ಕುರಿತು ಯಾವುದೇ ತಿಳುವಳಿಕೆಗಳಿರುವುದಿಲ್ಲ. ಆದರೆ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಸಮಾಜದ ಭಾಗವಾಗಿ ಬದಲಾಗಲು ಆ ಸಮಾಜದ ಮೌಲ್ಯಗಳನ್ನೂ ಸಾಮಾಜಿಕ ರೂಢಿಗಳನ್ನೂ ನಡವಳಿಕೆಗಳನ್ನೂ ಅವರು ಕಲಿಯುತ್ತಾರೆ. ಹೀಗೆ ಕರಗತ ಮಾಡುವ ಪ್ರಕ್ರಿಯೆಯೇ ಸಮಾಜೀಕರಣ (learning process) ವಾಗಿದೆ.

### ತೃತೀಯಲಿಂಗಿಗಳು (Transgender)

ತೃತೀಯಲಿಂಗಿ ಎಂದರೆ ಒಬ್ಬ ವ್ಯಕ್ತಿಗೆ ಜನನದ ಸಂದರ್ಭದಲ್ಲಿ ನೀಡಿರುವ ಲಿಂಗಪದವಿಗೆ ಹೊಂದಿಕೆ ಯಾಗದ ವ್ಯಕ್ತಿ ಎಂದರ್ಥ. ಈ ವಿಭಾಗದಲ್ಲಿ ಟ್ರಾನ್ಸ್ ಪುರುಷ (Transman) ಮತ್ತು ಟ್ರಾನ್ಸ್ ಸ್ತ್ರೀ (Transwoman) ಒಳಪಡುತ್ತಾರೆ.

Clause (K) of Section 2, TPPR Act, 2019)

ಲಿಂಗಭೇದವು ನಮ್ಮನ್ನು ಜೀವಶಾಸ್ತ್ರಪರವಾಗಿ ಪುರುಷನೆಂದೂ ಸ್ತ್ರೀಯೆಂದೂ ವರ್ಗೀಕರಿಸುತ್ತದೆ. ಲಿಂಗವು ನಮ್ಮಲ್ಲಿ ಪುರುಷತ್ವ (Masculinity) ಅಥವಾ ಸ್ತ್ರೀತ್ವವನ್ನು (Femininity) ಉಂಟುಮಾಡುತ್ತದೆ. ಪುರುಷ ಮತ್ತು ಸ್ತ್ರೀಯಿಂದ ಸಮಾಜವು ನಿರೀಕ್ಷಿಸುವ ನಡವಳಿಕೆಯನ್ನು ಪುರುಷತ್ವ, ಸ್ತ್ರೀತ್ವ ಎಂಬೀ ಪದಗಳು ಸೂಚಿಸುತ್ತವೆ. ಪುರುಷನು ಶಕ್ತಿಯ ಸಂಕೇತವೆಂದೂ ಸ್ತ್ರೀ ವಾತ್ಸಲ್ಯದ ಸಂಕೇತವೆಂದೂ ಪರಿಗಣಿಸುವುದು ಇದಕ್ಕೆ ಉದಾಹರಣೆಯಾಗಿದೆ. ಪುರುಷರು ಅಳಬಾರದೆಂದೂ ಸ್ತ್ರೀಯರು ಹೆಚ್ಚು ಭಾವನಾತ್ಮಕತೆಯುಳ್ಳವರೆಂದೂ ಪರಿಗಣಿಸುವುದು ಇನ್ನೊಂದು ಉದಾಹರಣೆಯಾಗಿದೆ. ಇತರ ಉದಾಹರಣೆಗಳನ್ನು ಕಂಡುಹಿಡಿಯಿರಿ.

ಲಿಂಗಭೇದವು ಹುಟ್ಟಿನಿಂದಲೇ ಲಭಿಸುವುದರಿಂದ ಅದು ಪೂರ್ವ ನಿಯೋಜಿತವಾದ ಪದವಿಯಾಗಿದೆ. ಆದರೆ ಲಿಂಗವು ಒಂದು ಆರ್ಜಿತ ಪದವಿಯಾಗಿದೆ. ಇದು ನಾವು ಜೀವಿಸುವ ಸಂಸ್ಕೃತಿಯಿಂದ ಕಲಿಯುವ ಮೂಲಕ ರೂಪುಗೊಳ್ಳುವುದಾಗಿದೆ.

## ಪೂರ್ವನಿಯೋಜಿತ ಪದವಿ ಮತ್ತು ಆರ್ಜಿತ ಪದವಿ (Ascribed Status and Achieved Status)

ಹುಟ್ಟಿನಿಂದಲೇ ಒಬ್ಬ ವ್ಯಕ್ತಿಗೆ ಲಭಿಸುವ ಸಾಮಾಜಿಕ ಪದವಿಯೇ ಪೂರ್ವ ನಿಯೋಜಿತ ಪದವಿ. ಒಬ್ಬ ವ್ಯಕ್ತಿಗೆ ಸ್ವತಃ ಆಯ್ಕೆ ಮಾಡಲು ಸಾಧ್ಯವಾಗದ ವಿಚಾರಗಳಾದ ಪ್ರಾಯ, ವಂಶ, ಲಿಂಗಭೇದ ಇತ್ಯಾದಿಗಳು ಪೂರ್ವ ನಿಯೋಜಿತ ಪದವಿಗೆ ಉದಾಹರಣೆಗಳಾಗಿವೆ.

ವ್ಯಕ್ತಿಗಳು ತಮ್ಮ ಸ್ವಂತ ಸಾಮರ್ಥ್ಯಗಳ ಮೂಲಕ ಹಾಗೂ ಆಯ್ಕೆ ಮಾಡುವ ಮೂಲಕ ಗಳಿಸುವ ಸಾಮಾಜಿಕ ಪದವಿಯು ಆರ್ಜಿತ ಪದವಿಯಾಗಿದೆ. ವಿದ್ಯಾರ್ಹತೆ, ಆದಾಯ, ಉದ್ಯೋಗ ನೈಪುಣ್ಯ ಇತ್ಯಾದಿಗಳು ಆರ್ಜಿತ ಪದವಿಗೆ ಉದಾಹರಣೆಗಳಾಗಿವೆ. ಇವು ಕಾಲಾಂತರಗಳಲ್ಲಿ ಸಮಾಜದಿಂದ ಕಲಿತುಕೊಳ್ಳುವವುಗಳಾಗಿವೆ. ಲಿಂಗವು ಸಾಮಾಜಿಕ ಹಸ್ತಕ್ಷೇಪಗಳ ಮೂಲಕ ಕರಗತ ಮಾಡಿಕೊಂಡು ಸಶಕ್ತಗೊಳಿಸುವುದರಿಂದ ಅದೊಂದು ಆರ್ಜಿತ ಪದವಿಯಾಗುತ್ತದೆ.

**ಪಟ್ಟಿಯನ್ನು ವಿಸ್ತರಿಸಿರಿ.**

| ಲಿಂಗಭೇದ (Sex) | ಲಿಂಗ (Gender) |
|---|---|
| • ಜೀವಶಾಸ್ತ್ರಪರವಾದ ವಿಶೇಷತೆಗಳನ್ನು ಸೂಚಿಸುತ್ತದೆ. | • ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮಾನಸಿಕವಾದ ವಿಶೇಷತೆಗಳನ್ನು ಸೂಚಿಸುತ್ತದೆ. |
| • | • |
| • | • |

ಲಿಂಗ ಮತ್ತು ಲಿಂಗಭೇದಗಳೊಳಗಿನ ವ್ಯತ್ಯಾಸವನ್ನು ತರಗತಿಯಲ್ಲಿ ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

ಲಿಂಗಭೇದ ಮತ್ತು ಲಿಂಗವು ಹೇಗೆ ಭಿನ್ನವಾಗಿವೆಯೆಂಬುದನ್ನು ನಾವು ಇದುವರೆಗೆ ಚರ್ಚಿಸಿದ್ದೇವಲ್ಲವೇ. ಲಿಂಗವನ್ನು ನಿರ್ಧರಿಸುವುದು ಜನನವನ್ನು ಮತ್ತು ಶರೀರವನ್ನು ಮಾನದಂಡವಾಗಿಟ್ಟುಕೊಂಡಲ್ಲ. ಅದರ ಬದಲು ಸಾಮಾಜಿಕ ಸಂವಹನಗಳ ಮೂಲಕವೂ ಸಾಮಾಜಿಕ ರೂಢಿಯ ಮೂಲಕವೂ ರೂಪುಗೊಳ್ಳುವ ಅಭ್ಯಾಸಗಳ ಮೂಲಕ ಲಿಂಗವನ್ನು ನಿರ್ಧರಿಸಲಾಗುತ್ತದೆ.

ಅಂತಸ್ತು (Status) ಸಾಮಾಜಿಕ ವ್ಯವಸ್ಥೆಯೊಳಗೆ ಒಬ್ಬ ವ್ಯಕ್ತಿಗೆ ದೊರಕುವ ಸ್ಥಾನಮಾನವಾಗಿದೆ. ಒಂದು ಸಾಮಾಜಿಕ ವ್ಯವಸ್ಥೆಯೊಳಗೆ ವ್ಯಕ್ತಿಗಳು ಹೇಗೆ ಪರಿಗಣಿಸಲ್ಪಡುತ್ತಾರೆ ಅಥವಾ ನಿರ್ವಚಿಸಲ್ಪಡುತ್ತಾರೆ ಎಂಬುದನ್ನು ಸೂಚಿಸುವ ನಿರ್ಣಾಯಕ ಘಟಕವೇ ಅಂತಸ್ತು. ಎಲ್ಲ ಸಮಾಜಗಳೂ ಆ ಸಮಾಜದಲ್ಲಿ ಒಳಗೊಂಡಿರುವ ಸದಸ್ಯರನ್ನು ಸ್ಥಾನಮಾನಕ್ಕೆ ಅನುಗುಣವಾಗಿ ವರ್ಗೀಕರಿಸಿವೆ. ಆ ಮೂಲಕ ಸಾಮಾಜಿಕ ಶ್ರೇಣಿಯನ್ನು ಸೃಷ್ಟಿಸುತ್ತವೆ. ಹೀಗೆ ಸಮಾಜದಲ್ಲಿ ವ್ಯಕ್ತಿಗಳನ್ನು ಉನ್ನತ ಸ್ಥಾನಮಾನದಲ್ಲಿರುವವರೆಂದೂ ಕೆಳಮಟ್ಟದ ಸ್ಥಾನಮಾನದಲ್ಲಿರುವವರೆಂದೂ ನಿಶ್ಚಯಿಸಲಾಗುತ್ತದೆ.

## ಸಾಮಾಜಿಕ ಶ್ರೇಣೀಕರಣ (Social Stratification)

ಸಾಮಾಜಿಕ ಶ್ರೇಣೀಕರಣವೆಂದರೆ ಸಮಾಜದ ವ್ಯಕ್ತಿಗಳನ್ನು ಸಮಾನತೆಯಿಲ್ಲದ ವಿಧದಲ್ಲಿ, ವಿವಿಧ ಸ್ತರಗಳಲ್ಲಾಗಿ ಅಥವಾ ಶ್ರೇಣಿಗಳಲ್ಲಾಗಿ ಸಾಮಾಜಿಕವಾದ ಸ್ಥಾನವನ್ನು ನಿಶ್ಚಯಿಸಿ ನಿಗದಿಪಡಿಸುವುದಾಗಿದೆ. ಉನ್ನತ ಸ್ಥಾನದವರೆಂದು ನಿಗದಿಪಡಿಸಿದವರಿಗೆ ಸಮಾಜದಲ್ಲಿ ಉನ್ನತ ಪದವಿಯನ್ನು ಮತ್ತು ಕೆಳಮಟ್ಟದವರೆಂದು ನಿಗದಿಪಡಿಸಿದವರಿಗೆ ಸಮಾಜದಲ್ಲಿ ಕೆಳಮಟ್ಟದ ಪದವಿಯನ್ನು ಗಳಿಸುವ ರೀತಿಯಲ್ಲಿ ಇದು ಕಾರ್ಯಾಚರಿಸುತ್ತದೆ. ಗುಲಾಮಗಿರಿ, ಜಾತಿವ್ಯವಸ್ಥೆ ಇತ್ಯಾದಿಗಳು ಸಮಾಜದಲ್ಲಿ ಜಾರಿಯಲ್ಲಿದ್ದ ಕೆಲವು ಸಾಮಾಜಿಕ ಶ್ರೇಣಿಗಳಿಗೆ ಉದಾಹರಣೆಗಳಾಗಿವೆ.

ನಮ್ಮ ಸಮಾಜದಲ್ಲಿ ಪುರುಷರ ಹಾಗೂ ಮಹಿಳೆಯರ ಸ್ಥಾನಮಾನವು ಸಮಾನ ಶ್ರೇಣಿಯಲ್ಲಿದೆಯೆ? ವ್ಯತ್ಯಾಸಗಳನ್ನು ಗಮನಿಸಿದ್ದೀರಾ?



### ಕ್ಲೋಡಿಯ ಗೋಲ್ಡಿನ್

ಇವರು 2023 ರಲ್ಲಿ ಅರ್ಥಶಾಸ್ತ್ರಕ್ಕಿರುವ ನೋಬೆಲ್ ಪ್ರಶಸ್ತಿ ವಿಜೇತರು. ಉದ್ಯೋಗ ರಂಗದಲ್ಲಿರುವ ಮಹಿಳೆಯರ ಕುರಿತಾದ ಅಧ್ಯಯನ, ಉದ್ಯೋಗದಲ್ಲಿ ಪಾಲ್ಗೊಳ್ಳುವಿಕೆ ಹಾಗೂ ಆದಾಯದಲ್ಲಿರುವ ಲಿಂಗ ವ್ಯತ್ಯಾಸಗಳ (Gender Difference) ಕಾರಣಗಳ ಕುರಿತಾದ ಸಂಶೋಧನೆ. ಗಳನ್ನು ನಡೆಸಿದ ಕ್ಲೋಡಿಯ ಗೋಲ್ಡಿನ್ ಅರ್ಥಶಾಸ್ತ್ರದಲ್ಲಿ ಪ್ರಶಸ್ತಿ ಪಡೆದ ಮೂರನೇ ಮಹಿಳೆಯಾಗಿದ್ದಾಳೆ.

## ಲಿಂಗಪರವಾದ ಪಾತ್ರಗಳು (Gender Roles)



ಮೂರು ಗೆಳೆಯರೊಳಗಿನ ಸಂಭಾಷಣೆಗಳನ್ನು ನೀವು ಗಮನಿಸಿದ್ದೀರಲ್ಲವೇ. ಈ ಸಂಭಾಷಣೆಗೆ ನೀವು ಹೇಗೆ ಪ್ರತಿಕ್ರಿಯೆ ವ್ಯಕ್ತಪಡಿಸುವಿರಿ? ಕೆಲವು ಕೆಲಸಗಳನ್ನು ಕೆಲವೊಂದು ಲಿಂಗದವರು ಮಾತ್ರವೇ ಮಾಡಬಹುದೆಂಬ ಹೇಳಿಕೆಯನ್ನು ನೀವು ಕೇಳಿದ್ದೀರಾ?ವಾಸ್ತವಿಕವಾಗಿ ಕೆಲಸಗಳಿಗೆ ಹೀಗೆ ಗಂಡು ಹೆಣ್ಣೆಂಬ ಭೇದಭಾವವಿದೆಯೆ?

ಪಾತ್ರವೆಂದರೆ (Role) ಒಂದು ಲಿಂಗಕ್ಕೆ ಸಂಬಂಧಿಸಿಕೊಂಡು ಸಮಾಜವು ನಿರೀಕ್ಷಿಸುವ ನಡವಳಿಕೆಯಾಗಿದೆ. ಲಿಂಗಪರವಾದ ಪಾತ್ರ (Gender Role) ಎಂಬ ಪದವು ಸಮಾಜದಲ್ಲಿ ಪುರುಷ ಮತ್ತು ಸ್ತ್ರೀ ಹೇಗೆ ಮಾತನಾಡಬೇಕು, ಚಿಂತಿಸಬೇಕು, ವಸ್ತ್ರ ಧರಿಸಬೇಕು, ವರ್ತಿಸಬೇಕು ಹಾಗೂ ಯಾವ ಯಾವ ಕೆಲಸಗಳನ್ನು ಯಾರು ಯಾರು ಮಾಡಬೇಕು ಎಂಬುದರ ಕುರಿತಾದ ನಿರೀಕ್ಷಣೆಯನ್ನು ಸೂಚಿಸುತ್ತದೆ. ಲಿಂಗಪರವಾದ ಪಾತ್ರವೆಂಬುದರಿಂದ ಅರ್ಥೈಸುವುದೇನೆಂದರೆ ಒಂದು ಸಮಾಜವು ಪುರುಷತ್ವ ಮತ್ತು ಸ್ತ್ರೀತ್ವಕ್ಕೆ ಸಂಬಂಧಿಸಿಕೊಂಡು ನಿಶ್ಚಯಿಸುವ ನಿರ್ದಿಷ್ಟ ಸ್ವಭಾವಗಳು, ವರ್ತನೆಗಳು, ಮನೋಭಾವಗಳು ಹಾಗೂ ಪ್ರಕ್ರಿಯೆಗಳಾಗಿವೆ. ಉದಾಹರಣೆಗೆ, ಒಂದು ಕುಟುಂಬದಲ್ಲಿ ಆದಾಯವನ್ನುಂಟು ಮಾಡಬೇಕಾದವ ಪುರುಷನೆಂದೂ ಮನೆಕೆಲಸಗಳನ್ನು ಮಾಡಬೇಕಾದುದು ಸ್ತ್ರೀಯೆಂದೂ ಇರುವ ಧೋರಣೆಯು ಕೆಲವು ಸಮಾಜದಲ್ಲಿ ಜಾರಿಯಲ್ಲಿದೆ. ಇಂತಹ ಪಾತ್ರಗಳು ವ್ಯಕ್ತಿಗಳ ಆಯ್ಕೆಯ ಸ್ವಾತಂತ್ರ್ಯವನ್ನು ಪರಿಮಿತಗೊಳಿಸುತ್ತವೆ. ಲಿಂಗಪರವಾದ ಪಾತ್ರಗಳ ಆಧಾರದಲ್ಲಿ ನಮ್ಮ ಸಮಾಜದಲ್ಲೂ ಅನೇಕ ವರ್ತನಾ ರೀತಿಗಳೂ ನಡವಳಿಕೆಯ ಕ್ರಮಗಳೂ ಅಭ್ಯಾಸಗಳೂ ರೂಢಿಯಲ್ಲಿವೆ.

ನಿಮ್ಮ ವಿದ್ಯಾಲಯದಲ್ಲಿ ಜವಾಬ್ದಾರಿಗಳನ್ನು ನೀಡುವುದು ಲಿಂಗಭೇದಕ್ಕನುಸಾರವಾಗಿಯೊ? ನಿಮ್ಮ ವಿದ್ಯಾಲಯದಲ್ಲಿ ಈ ಕೆಳಗೆ ನೀಡಿರುವ ಜವಾಬ್ದಾರಿಗಳನ್ನು ಹೆಚ್ಚಾಗಿ ನಿಭಾಯಿಸುವವರು ಯಾರು?

**ಚೆಕ್ ಲಿಸ್ಟ್ ಪೂರ್ತಿಗೊಳಿಸಿರಿ.**

| ಜವಾಬ್ದಾರಿಗಳು | ಗಂಡು ಮಕ್ಕಳು | ಹೆಣ್ಣು ಮಕ್ಕಳು |
|---|---|---|
| • ಶಾಲಾ ಅಸೆಂಬ್ಲಿಯಲ್ಲಿ ಪ್ರಾರ್ಥನಾ ಗೀತೆಯನ್ನು ಹಾಡುವುದು. | | |
| • ಬೆಂಚ್ ಮತ್ತು ಡೆಸ್ಕ್ ಗಳನ್ನು ಕ್ರಮೀಕರಿಸುವುದು. | | |
| • ತರಗತಿಯಲ್ಲಿರುವ ಡಿಜಿಟಲ್ ಉಪಕರಣಗಳನ್ನು ಕ್ರಮೀಕರಿಸುವುದು. | | |
| • ತರಗತಿಯ ಹೊರಗಡೆಯಿರುವ ಅಗತ್ಯಗಳಿಗಾಗಿ ಹೋಗುವುದು | | |

ಇಂದು ಶಾಲೆಗಳಲ್ಲಿ ಹೀಗಿರುವ ಚಟುವಟಿಕೆಗಳನ್ನು ಗಂಡು ಹಾಗೂ ಹೆಣ್ಣು ಮಕ್ಕಳು ಪರಸ್ಪರ ಹಂಚಿಕೊಂಡು ಮಾಡುತ್ತಾರೆ ಎಂಬುದನ್ನು ಇದರಿಂದ ತಿಳಿದುಕೊಳ್ಳಬಹುದು.



**ಪುರುಷನಿಗೂ ಸ್ತ್ರೀಗೂ ಪರಂಪರಾಗತವಾಗಿ ಹಂಚಿ ನೀಡಲಾದ/ನಿಶ್ಚಯಿಸಿ ಕೊಟ್ಟಿರುವ ಕೆಲಸಗಳನ್ನು, ಜವಾಬ್ದಾರಿಗಳನ್ನು ಎಲ್ಲರೂ ಒಟ್ಟಿಗೆ ಸೇರಿ ಹಂಚಿಕೊಂಡು ಮಾಡುವ ಸಂದರ್ಭಗಳನ್ನು ಸೇರಿಸಿಕೊಂಡು ತರಗತಿಯಲ್ಲೊಂದು ರೋಲ್ ಪ್ಲೇಯನ್ನು ನಡೆಸಿರಿ.**

## ಲಿಂಗ ಮತ್ತು ಸಾಮಾಜಿಕ ರೂಢಿಗಳು (Gender and Social norms)



ಇದು ಹಿಂದಿನ ಕಾಲದಲ್ಲಿ ಭಾರತದಲ್ಲಿ ನೆಲೆನಿಂತಿದ್ದ 'ಸತಿ' ಎಂಬ ಸಾಮಾಜಿಕ ಅನಾಚಾರವನ್ನು ಸೂಚಿಸುವ ಚಿತ್ರವಾಗಿದೆ. 'ಸತಿ' ಎಂಬುದು ಗಂಡ ಮರಣಹೊಂದಿದರೆ ಹೆಂಡತಿ ಗಂಡನ ಚಿತೆಗೆ ಹಾರಿ ಪ್ರಾಣ ಕಳೆದುಕೊಳ್ಳಬೇಕೆಂಬ ಅನಾಚಾರವಾಗಿದೆ. 'ಅಸ್ಪೃಶ್ಯತೆ'ಯು ಭಾರತದಲ್ಲಿ ಜಾರಿಯಲ್ಲಿದ್ದ ಇನ್ನೊಂದು ಸಾಮಾಜಿಕ ಅನಾಚಾರವಾಗಿತ್ತು. ಮಾನವರನ್ನು ವಿಭಿನ್ನ ಜಾತಿಗಳಾಗಿ ವಿಂಗಡಿಸಿ, ವ್ಯಕ್ತಿಗಳನ್ನು ವಿಭಿನ್ನ ಜಾತಿಗಳಲ್ಲಿ ಒಳಪಡಿಸಿ ಅವುಗಳಲ್ಲಿ ಅತಿ ಕೆಳಗಿನ ಜಾತಿಯಾಗಿ ಪರಿಗಣಿಸಲಾದವರು ಉನ್ನತ ಜಾತಿಯವರಾಗಿ ಅಂಗೀಕರಿಸಲಾದ ವ್ಯಕ್ತಿಗಳಿಂದ ನಿಶ್ಚಿತ ಅಂತರವನ್ನು ಪಾಲಿಸಿಕೊಂಡು ಮಾತ್ರವೇ ಸಮಾಜದಲ್ಲಿ ವ್ಯವಹರಿಸಬಹುದೆಂಬ ಅನಾಚಾರವು ಅಸ್ಪೃಶ್ಯತೆ (ಮುಟ್ಟಬಾರದವರು) ಯಾಗಿತ್ತು. ಸತಿ ಮತ್ತು ಅಸ್ಪೃಶ್ಯತೆಯನ್ನು ಹಿಂದಿನ ಕಾಲಗಳಲ್ಲಿ ಕಾನೂನಿನಂತೆ ಪಾಲಿಸುತ್ತಿದ್ದರು. ಆದರೆ ಅನಂತರದ ಕಾಲದಲ್ಲಿ ಸಾಮಾಜಿಕ ಸುಧಾರಣೆಗಳ ಅಂಗವಾಗಿ ನಿರ್ಮಾಣಗೊಂಡ ಕಾನೂನುಗಳ ಮೂಲಕ ಇವುಗಳನ್ನು ನಿಷೇಧಿಸಲಾಯಿತು.

1987 ರ 'ಸತಿಸಹಗಮನ ನಿಷೇಧ' ಕಾನೂನಿನ ಮೂಲಕ ಭಾರತದ ಪಾರ್ಲಿಮೆಂಟ್ ಸತಿಸಹಗಮನ ಪದ್ಧತಿಯನ್ನು ನಿಷೇಧಿಸಿತು. ಸ್ವತಃ ಅಥವಾ ನಿರ್ಬಂಧಪೂರ್ವಕ ಸತಿ ಆಚರಿಸುವುದನ್ನು ಮತ್ತು ಸತಿಸಹಗಮನ ಪದ್ಧತಿಯ ಪರವಾಗಿ ಪ್ರಸ್ತಾವನೆ ಮಾಡುವುದನ್ನು ಈ ಕಾನೂನು ತಡೆಗಟ್ಟುತ್ತದೆ.

ಸಂವಿಧಾನದ ವಿಧಿ 17 ರ ಮೂಲಕ ಮತ್ತು 1955 ರ ನಾಗರಿಕ ಹಕ್ಕು ಸಂರಕ್ಷಣಾ ಕಾನೂನುಗಳ ಮೂಲಕ ಭಾರತದಲ್ಲಿ ಅಸ್ಪೃಶ್ಯತೆ ಎಂಬ ಅನಾಚಾರವನ್ನು ನಿಷೇಧಿಸಲಾಯಿತು.

ಅಲಿಖಿತವಾದ ಆದರೆ ಒಂದು ಸಮಾಜದಲ್ಲಿ ಬಹಳ ಹಿಂದಿನಿಂದಲೇ ಜಾರಿಯಲ್ಲಿರುವ ಕೆಲವು ವರ್ತನಾ ರೀತಿಗಳು ನಮ್ಮ ಸುತ್ತಮುತ್ತಲೂ ಇವೆ. ಇವುಗಳನ್ನು ಸಾಮಾಜಿಕ ರೂಢಿಗಳು (Social Norms) ಎನ್ನುತ್ತಾರೆ. ಒಂದು ಪ್ರತ್ಯೇಕ ಸಾಮಾಜಿಕ ಸಂಘದಲ್ಲಿ ಅಥವಾ ಸಂಸ್ಕೃತಿಯಲ್ಲಿ ಅವರಿಗೆ ಸ್ವೀಕೃತವಾಗಿ ಪರಿಗಣಿಸಲಾದ ವಿಶ್ವಾಸಗಳು, ನಡವಳಿಕೆಗಳು, ಮನೋಭಾವಗಳು ಎಂಬಿವುಗಳಿಗೆ ಸಂಬಂಧಿಸಿದ ಅಲಿಖಿತ ನಿಯಮಗಳು ಸಾಮಾಜಿಕ ರೂಢಿಗಳಾಗಿವೆ. ಒಬ್ಬ ವ್ಯಕ್ತಿಯನ್ನು ಕಾಣುವಾಗ ಗೌರವಿಸುವುದು, ಕೃತಜ್ಞತೆ ಸೂಚಿಸುವುದು ಇತ್ಯಾದಿ ಸಾಮಾಜಿಕ ರೂಢಿಗಳಾಗಿವೆ.

ಕೆಳಗೆ ಕೊಟ್ಟಿರುವ ಪ್ರಸ್ತಾವನೆಗಳನ್ನು ಗಮನಿಸಿರಿ.

- ಕುಡಿಯುವ ನೀರನ್ನು ಪೋಲು ಮಾಡದಿರಿ.
- ಯಾರನ್ನೂ ಶಾರೀರಿಕವಾಗಿ ಉಪದ್ರವಿಸದಿರಿ.
- ಹಿರಿಯ ವ್ಯಕ್ತಿಗಳನ್ನು ಗೌರವಿಸಬೇಕು.
- ದ್ವಿಚಕ್ರ ವಾಹನಗಳಲ್ಲಿ ಸಂಚರಿಸುವವರು ನಿರ್ಬಂಧವಾಗಿ ಶಿರಸ್ತ್ರಾಣ (Helmet) ಧರಿಸಬೇಕು.
- ಶಾರೀರಿಕ ಪ್ರತ್ಯೇಕತೆಗಳಾಧಾರದಲ್ಲಿ ಯಾರನ್ನೂ ಹೊರಗಿಡಬಾರದು.
- ಕಾನೂನಿಗೆ ಅನುಸಾರವಾಗಿ ಆಯ್ಕೆ ಮಾಡಲು ಎಲ್ಲಾ ವ್ಯಕ್ತಿಗಳಿಗೂ ಹಕ್ಕಿದೆ.
- ಹಿರಿಯ ನಾಗರಿಕರನ್ನು ಸಂರಕ್ಷಿಸಬೇಕು.
- ವರದಕ್ಷಿಣೆ ಪಡೆಯುವುದು ಮತ್ತು ಕೊಡುವುದು ಶಿಕ್ಷಾರ್ಹವಾಗಿದೆ.

ಈ ಹೇಳಿಕೆಗಳನ್ನು ಕಾನೂನುಗಳು ಮತ್ತು ಸಾಮಾಜಿಕ ರೂಢಿಗಳು ಎಂಬುದಾಗಿ ವರ್ಗೀಕರಿಸಿರಿ.

| ಕಾನೂನುಗಳು | ಸಾಮಾಜಿಕ ರೂಢಿಗಳು |
|---|---|
| • ಯಾರನ್ನೂ ಶಾರೀರಿಕವಾಗಿ ಉಪದ್ರವಿಸದಿರಿ. | • ಹಿರಿಯ ವ್ಯಕ್ತಿಗಳನ್ನು ಗೌರವಿಸಬೇಕು. |
| • | • |
| • | • |
| • | • |
| • | • |

ಹೀಗಿರುವ ಇನ್ನೂ ಹೆಚ್ಚಿನ ಕಾನೂನುಗಳನ್ನೂ ಸಾಮಾಜಿಕ ರೂಢಿಗಳನ್ನೂ ಕಂಡುಹಿಡಿದು ಪಟ್ಟಿಯಲ್ಲಿ ಸೇರಿಸಿರಿ.

ಕಾನೂನುಪರವಲ್ಲದ ಸಾಮಾಜಿಕ ರೂಢಿಗಳು ಸಮಾಜದಲ್ಲಿ ಇಂದೂ ಕೂಡಾ ಜಾರಿಯಲ್ಲಿವೆ. ಯಾಕೆ? ನಿಮ್ಮ ಅಭಿಪ್ರಾಯಗಳನ್ನು ಸಮಾಜ ವಿಜ್ಞಾನ ಚಟುವಟಿಕಾ ಪುಸ್ತಕದಲ್ಲಿ ಬರೆಯಿರಿ.

## ಲಿಂಗ-ಪಡಿಯಚ್ಚುಗಳು (Gender Stereotypes)

ಕೆಳಗೆ ನೀಡಿರುವ ಹೇಳಿಕೆಗಳನ್ನು ಗಮನಿಸಿರಿ.




ಕೊಟ್ಟಿರುವ ಹೇಳಿಕೆಗಳು ಸರಿಯಾಗಿವೆಯೆಂಬ ಅಭಿಪ್ರಾಯ ನಿಮಗಿದೆಯೇ. ಇವು ಪರಂಪರಾಗತವಾಗಿ ಸಮಾಜವು ತಪ್ಪಾಗಿ ಅರ್ಥೈಸಿಕೊಂಡ ಕೆಲವು ವಿಚಾರಗಳಲ್ಲವೇ.

ಸ್ತ್ರೀಯರ ಹಾಗೂ ಪುರುಷರ ಗುಣಲಕ್ಷಣಗಳೆಂಬ ವಿಧದಲ್ಲಿ ಸಮಾಜವು ತಪ್ಪಾಗಿ ತಿಳಿದುಕೊಂಡಿರುವ ಇಂತಹ ವಿಚಾರಗಳನ್ನು ಅವರ ಪ್ರಧಾನ ಗುಣಲಕ್ಷಣಗಳೆಂದು ಸಾಮಾನ್ಯವಾಗಿ ಹೆಚ್ಚಿನವರು ಅಭಿಪ್ರಾಯ ಪಡುತ್ತಾರೆ. ಹೀಗೆ ವಾಸ್ತವಿಕವಲ್ಲದ ಅಥವಾ ಭಾಗಿಕವಾಗಿ ಮಾತ್ರ ಸರಿಯೆಂದೆನಿಸುವ ಕೆಲವು ವಿಚಾರಗಳನ್ನು ಸ್ತ್ರೀಯರ ಮತ್ತು ಪುರುಷರ ಮೂಲಭೂತ ಗುಣಲಕ್ಷಣಗಳಾಗಿ ಅತ್ಯಂತ ಸರಳವಾದ ರೀತಿಯಲ್ಲಿ ಮಂಡಿಸುವ ಮೂಲಕ ಲಿಂಗ ಪಡಿಯಚ್ಚುಗಳನ್ನು (Stereotype) ಸೃಷ್ಟಿಸಲಾಗುತ್ತದೆ.

### ಪಡಿಯಚ್ಚುಗಳು (Stereotype)

ಪಡಿಯಚ್ಚುಗಳು (Stereotype) ಎಂದರೆ ಸಾಮಾನ್ಯೀಕರಿಸಿದ ಗುರುತುಗಳ ಆಧಾರದಲ್ಲಿ ಕೆಲವು ಪ್ರತ್ಯೇಕ ವಿಭಾಗಗಳನ್ನು ಮತ್ತು ಜನರನ್ನು ಸಾಮಾಜಿಕವಾಗಿ ವರ್ಗೀಕರಿಸುವ ಒಂದು ವಿಧಾನವಾಗಿದೆ. ವರ್ಗ, ಜಾತಿ, ಮತ, ಉದ್ಯೋಗ, ಭಾಷೆ, ಲಿಂಗ ಎಂಬಿವುಗಳ ಆಧಾರದಲ್ಲಿ ಪಡಿಯಚ್ಚುಗಳು ರೂಪುಗೊಳ್ಳುವುದಿದೆ.

ಲಿಂಗ ಪಡಿಯಚ್ಚುಗಳಿಗೆ ಉದಾಹರಣೆಗಳನ್ನು ನಿಮಗೆ ಕಂಡುಹಿಡಿಯಲು ಸಾಧ್ಯವಿದೆಯೆ? ಕೆಳಗೆ ಬರೆದು ಸೇರಿಸಿರಿ.

- ಮಹಿಳೆಯರು ದಾದಿಯರಾಗಲು ಉತ್ತಮರಾಗಿದ್ದಾರೆ. ಪುರುಷರು ಇದಕ್ಕೆ ಯೋಗ್ಯರಲ್ಲ.
- 
- 

ಲಿಂಗಪರವಾದ ಪಾತ್ರಗಳು, ಸಾಮಾಜಿಕ ರೂಢಿಗಳು, ಪಡಿಯಚ್ಚುಗಳು ಎಂಬಿವು ಲಿಂಗ ವ್ಯತ್ಯಾಸಕ್ಕೆ ಕಾರಣಗಳಾಗಿವೆ.

## ಮಾಧ್ಯಮಗಳು ಮತ್ತು ಲಿಂಗ ಪಡಿಯಚ್ಚುಗಳು (Media and Gender Stereotypes)

ದೂರದರ್ಶನದಲ್ಲಿ ಮತ್ತು ಓನ್‌ಲೈನ್ ಸ್ಟ್ರೀಮಿಂಗ್‌ಗಳಲ್ಲಿ ಬರುವ ಜಾಹೀರಾತುಗಳನ್ನು ನೀವು ಗಮನಿಸಿದ್ದೀರಲ್ಲವೆ? ಕೆಳಗೆ ಕೊಟ್ಟಿರುವ ಉತ್ಪನ್ನಗಳ ಕುರಿತು ವಿಚಾರ ಮಂಡಿಸಲು ಮತ್ತು ಅದನ್ನು ಉಪಯೋಗಿಸುವುದನ್ನು ಅಭಿನಯಿಸುವ ಮೂಲಕ ತೋರಿಸಲು ಸ್ಕ್ರೀನಿನಲ್ಲಿ ಮೂಡಿಬರುವುದು ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀಯರೋ ಪುರುಷರೋ ಎಂದು ನಿರೀಕ್ಷಣೆ ಮಾಡಿ ಬರೆಯಿರಿ.

- ಮಸಾಲೆ ಹುಡಿಗಳು
- ಪಾತ್ರೆ ತೊಳೆಯುವ ಸಾಮಗ್ರಿಗಳು
- ಬೈಕುಗಳು ಮತ್ತು ಕಾರುಗಳು
- ಸೌಂದರ್ಯವರ್ಧಕ ವಸ್ತುಗಳು
- ಆಟದ ಸಾಮಗ್ರಿಗಳು
- ಪಾತ್ರೆಗಳು, ಸ್ಟೌ ಇತ್ಯಾದಿ ಅಡುಗೆಮನೆ ಸಾಮಗ್ರಿಗಳು
- ಆರ್ಥಿಕ ಸಂಸ್ಥೆಗಳು
- ಸಿಮೆಂಟ್

| ಹೆಚ್ಚಾಗಿ ಸ್ತ್ರೀಯರು | ಹೆಚ್ಚಾಗಿ ಪುರುಷರು |
| --- | --- |
| | |

ಇನ್ನೂ ಹೆಚ್ಚು ಜಾಹೀರಾತುಗಳನ್ನು ವೀಕ್ಷಿಸಿರಿ. ಯಾವ ಲಿಂಗದವರನ್ನು ಹೆಚ್ಚಾಗಿ ಇವುಗಳಲ್ಲಿ ಕಾಣಬಹುದು?

ಜಾಹೀರಾತುಗಳು ಲಿಂಗ ಪಡಿಯಚ್ಚುಗಳನ್ನು ಹಲವು ವಿಧದಲ್ಲಿ ಸುಶಕ್ತಗೊಳಿಸುವುದನ್ನು ಕಾಣಬಹುದು.

## ಭಾಷೆ ಮತ್ತು ಲಿಂಗ ಪಡಿಯಚ್ಚುಗಳು (Language and Gender Stereotype)

ನಾವು ಉಪಯೋಗಿಸುವ ಭಾಷೆಗಳಲ್ಲಿಯೂ ಲಿಂಗ ವ್ಯತ್ಯಾಸ ಜಾರಿಯಲ್ಲಿದೆ. ಭಾಷೆಗಳಲ್ಲಿ ನಾಮಪದಗಳನ್ನು ಗಂಡು/ಹೆಣ್ಣು ಎಂಬ ಕ್ರಮದಲ್ಲಿ ವರ್ಗೀಕರಿಸಿದ್ದಾರೆ. ಪೌರರು, ಮಾನವರು ಮುಂತಾದ ಪುರುಷರನ್ನು ಸೂಚಿಸುವಂತೆ ಭಾಸವಾಗುವ ಪದಗಳು ಎಲ್ಲರನ್ನೂ ಸೂಚಿಸುವ ಸಾಮಾನ್ಯ ಪದಗಳಾಗಿ ಬದಲಾದುದು ಹೇಗೆ? ಉದಾಹರಣೆಗೆ ಪುರುಷ ಡಾಕ್ಟರ್ ಎಂದು ಹೇಳುವುದಿಲ್ಲ. ಆದರೆ ಲೇಡಿ ಡಾಕ್ಟರ್ ಎಂಬ ಪದಪ್ರಯೋಗ ಜಾರಿಯಲ್ಲಿದೆ. ಡಾಕ್ಟರ್ ಎಂಬ ಪದವನ್ನು ಮಾತ್ರ ಹೇಳಿದರೆ ಅದು ಹೆಚ್ಚಾಗಿ ಪುರುಷರನ್ನು ಮಾತ್ರ ಸಂಭೋದನೆ ಮಾಡುವ ಪದವಾಗಿ ತೋರುವುದು ಯಾಕೆ? ಪುರುಷರು ಮಾತ್ರ ವ್ಯವಹರಿಸುತ್ತಿದ್ದ ವಿಚಾರಗಳಿಗೆ ಸಂಬಂಧಿಸಿದ ಪದಗಳು ಮತ್ತು ಪ್ರಯೋಗಗಳೆಲ್ಲವೂ ಈ ರೀತಿಯಲ್ಲಿ ಈಗಲೂ ಚಾಲ್ತಿಯಲ್ಲಿವೆ.

ಇಂತಹ ಪದ ಪ್ರಯೋಗಗಳನ್ನು ಆವರ್ತಿಸಿ ಉಪಯೋಗಿಸುವ ಮೂಲಕ ಪಡಿಯಚ್ಚುಗಳು ಇನ್ನಷ್ಟು ಸುದೃಢಗೊಳ್ಳುತ್ತವೆ. ಭಾಷೆಯ ಮೂಲಕವಿರುವ ಇಂತಹ ಪಡಿಯಚ್ಚುಗಳ ಸುದೃಢಗೊಳ್ಳುವಿಕೆಯನ್ನು (Stereotype reinforcing) ಹೇಗೆ ಪ್ರತಿರೋಧಿಸಬಹುದು? ಲಿಂಗ ಒಳಗೊಂಡಿರುವ (Gender Inclusive) ಪದಗಳು ಮತ್ತು ಪ್ರಯೋಗಗಳು ಇದನ್ನೆದುರಿಸಲಿರುವ ಮಾರ್ಗಗಳಾಗಿವೆ. ಕೆಳಗೆ ಕೊಟ್ಟಿರುವ ಪದಗಳನ್ನು ಗಮನಿಸಿರಿ.

- ಟೀಚರ್
- ಇಂಜಿನಿಯರ್
- ನರ್ಸ್

ಈ ಪದಗಳು ಪುರುಷನೆಂದು ಅಥವಾ ಸ್ತ್ರೀಯೆಂದು ಪ್ರತ್ಯೇಕಿಸಿ ತಿಳಿಯಲು ಸಾಧ್ಯವಿರುವವುಗಳಾಗಿವೆಯೆ? ಇವು ಭಾಷೆಯಲ್ಲಿ ಪ್ರಯೋಗಿಸುವ ಲಿಂಗ ಒಳಗೊಂಡಿರುವ ಪದಗಳಿಗೆ ಉದಾಹರಣೆಗಳಾಗಿವೆ.

ಭಾಷೆಯಲ್ಲಿ ಪ್ರಯೋಗಿಸಲು ಸಾಧ್ಯವಿರುವ ಲಿಂಗ ಒಳಗೊಂಡಿರುವ ಪದಗಳನ್ನು ಕಂಡುಹಿಡಿದು ಪಟ್ಟಿ ಮಾಡಿ ತರಗತಿಯಲ್ಲಿ ಪ್ರದರ್ಶಿಸಿರಿ.

ಮಾಧ್ಯಮಗಳು ಮತ್ತು ಭಾಷೆಗಳು ಲಿಂಗ ಪಡಿಯಚ್ಚುಗಳನ್ನು ಸುದೃಢಗೊಳಿಸುವ ಘಟಕಗಳಾಗಿವೆಯೆಂದು ನೀವು ಗಮನಿಸಿದಿರಲ್ಲವೇ. ಕುಟುಂಬ, ಶೈಕ್ಷಣಿಕ ಸಂಸ್ಥೆಗಳು, ಕಲೆ, ಸಾಹಿತ್ಯ ಮುಂತಾದವುಗಳೂ ಲಿಂಗ ಪಡಿಯಚ್ಚುಗಳನ್ನು ಬಲಪಡಿಸುತ್ತವೆ.

"ಭಾಷೆ, ಕುಟುಂಬ, ಕಲೆ, ಸಾಹಿತ್ಯ, ಶೈಕ್ಷಣಿಕ ಸಂಸ್ಥೆಗಳು ಲಿಂಗ ಪಡಿಯಚ್ಚುಗಳನ್ನು ಬಲಗೊಳಿಸುತ್ತವೆ." ಎಂಬ ವಿಷಯದಲ್ಲಿ ಸಂವಾದವೊಂದನ್ನು ಆಯೋಜಿಸಿ ಟಿಪ್ಪಣಿ ತಯಾರಿಸಿರಿ.

ಲಿಂಗಪರವಾದ ಪಾತ್ರಗಳು, ಸಾಮಾಜಿಕ ರೂಢಿಗಳು, ಪಡಿಯಚ್ಚುಗಳು ಲಿಂಗ ವ್ಯತ್ಯಾಸದೆಡೆಗೆ ಸಾಗಿಸುತ್ತವೆಯೆಂದು ನೀವು ಗಮನಿಸಿದಿರಲ್ಲವೇ. ಇವು ಸಮಾಜದಲ್ಲಿ ಲಿಂಗ ಆಧಾರಿತವಾದ ಅತಿಕ್ರಮಣಗಳಿಗೂ ಲಿಂಗ ಪಕ್ಷಪಾತಗಳಿಗೂ ಕಾರಣವಾಗುತ್ತದೆ. ಹೀಗೆ ಸಮಾಜದಲ್ಲಿ ಪುರುಷರಿಗೂ ಸ್ತ್ರೀಯರಿಗೂ ಇತರ ಲಿಂಗದವರಿಗೂ ಅಸಮಾನ ಪರಿಸ್ಥಿತಿಯನ್ನು ಉಂಟುಮಾಡುತ್ತದೆ.

## ಲಿಂಗ ಆಧಾರಿತ ದೌರ್ಜನ್ಯಗಳು (Gender based Violences)

ವರದಕ್ಷಿಣೆಯ ಹೆಸರಿನಲ್ಲಿ ಕಿರುಕುಳ : ಗಂಡನ ಮನೆಯವರ ವಿರುದ್ಧ ದೂರು

ತೃತೀಯಲಿಂಗಿಗಳಿಗೆ ಸಾರ್ವಜನಿಕ ಸ್ಥಳದಲ್ಲಿ ಅವಹೇಳನ. ತೃತೀಯಲಿಂಗಿ ಸಂರಕ್ಷಣಾ ಕಾನೂನಿನ ಪ್ರಕಾರ ಪೋಲಿಸಲು ಕ್ರಮಕೈಗೊಂಡರು.

"ಇನ್ನು ಮುಂದೆ ಯಾರಿಗೂ ಇಂತಹ ಅನುಭವ ಉಂಟಾಗಬಾರದು"- ಲೈಂಗಿಕ ಅತಿಕ್ರಮಣವನ್ನೆದುರಿಸಿ ಬದುಕುಳಿದ ವ್ಯಕ್ತಿ ಮಾಧ್ಯಮಗಳೊಂದಿಗೆ

ಹೆಣ್ಣು ಭ್ರೂಣಹತ್ಯೆಗೆ ಸಹಾಯಮಾಡಿದ ಡಾಕ್ಟರರ ಮತ್ತು ಆಸ್ಪತ್ರೆಯ ಲೈಸನ್ಸ್ ರದ್ದು ಮಾಡಲಾಯಿತು.

ಕೆಲಸದ ಸ್ಥಳಗಳಲ್ಲಿ ನಡೆಯುವ ಲೈಂಗಿಕ ಕಿರುಕುಳ : ಪೋಲಿಸರಿಗೆ ವರದಿ ಸಲ್ಲಿಸದ ಸಂಸ್ಥೆಗೆದುರಾಗಿ ಕ್ರಮಕೈಗೊಳ್ಳಲಾಯಿತು.

ಯಾವ ಯಾವ ಸಾಮಾಜಿಕ ಸಮಸ್ಯೆಗಳನ್ನು ಈ ವಾರ್ತಾಶೀರ್ಷಿಕೆಗಳಲ್ಲಿ ಸೂಚಿಸಲಾಗಿದೆ?

- 
- 
- 
- 
- 

ಇವುಗಳೆಲ್ಲವೂ ಲಿಂಗ ಆಧಾರಿತವಾದ ದೌರ್ಜನ್ಯಗಳಾಗಿವೆಯೆ?

ನಮ್ಮ ಸಮಾಜದಲ್ಲಿ ಲಿಂಗ ಸಮಾನತೆ ಲಭಿಸುತ್ತಿದೆಯೆ?

ನಮ್ಮ ಸಮಾಜದಲ್ಲಿ ಈ ರೀತಿಯಲ್ಲಿರುವ ದೌರ್ಜನ್ಯಗಳು ನೆಲೆನಿಂತಿರುವುದು ನ್ಯಾಯಯುತ ಸಮಾಜಕ್ಕೆ (Just Society) ಸೂಕ್ತವೆ?

## ನ್ಯಾಯಯುತ ಸಮಾಜ (Just Society)

ಜಾತಿ, ಮತ, ಲಿಂಗ ಎಂಬೀ ಭೇದಭಾವಗಳಿಲ್ಲದೆ ಎಲ್ಲಾ ಸದಸ್ಯರಿಗೂ ಸಾಮಾಜಿಕ – ಆರ್ಥಿಕ – ರಾಜಕೀಯ ನೀತಿನ್ಯಾಯವನ್ನು ಒದಗಿಸುವ ಒಂದು ಸಮಾಜವು ನ್ಯಾಯಯುತ ಸಮಾಜವಾಗಿದೆ.

*"ಎಲ್ಲಾ ಸದಸ್ಯರು ಸಂತೋಷ ಮತ್ತು ಕ್ಷೇಮವನ್ನು ಅನುಭವಿಸುವ ಒಂದು ಸಮಾಜವನ್ನು ನ್ಯಾಯಯುತ ಸಮಾಜ ಎಂದು ಕರೆಯಬಹುದು"*

- ಜಸ್ಟಿಸ್ ವಿ. ಆರ್. ಕೃಷ್ಣಯ್ಯರ್

ಲಿಂಗಾಧಾರಿತವಾದ ಅತಿಕ್ರಮಣಗಳ ಕುರಿತಾದ ವಾರ್ತೆಗಳನ್ನೂ ಚಿತ್ರಗಳನ್ನೂ ಸಂಗ್ರಹಿಸಿ ಕೊಲಾಷ್ ತಯಾರಿಸಿರಿ. ಇದರೊಂದಿಗೆ ಲಿಂಗಾಧಾರಿತವಾದ ಅತಿಕ್ರಮಣಗಳಿಗೆದುರಾಗಿರುವ ನಿಮ್ಮ ಪ್ರತಿಕ್ರಿಯೆಗಳನ್ನು ಘೋಷಣಾ ಗೀತೆಗಳ ರೂಪದಲ್ಲಿ ಬರೆದು ವಿದ್ಯಾಲಯಗಳಲ್ಲಿ ಪ್ರದರ್ಶಿಸಿರಿ. ಈ ಪ್ರದರ್ಶನಾ ವೇಳೆಯಲ್ಲಿ ಮಂಡಿಸುವುದಕ್ಕಾಗಿ ಒಂದು ಕಿರು ಭಾಷಣವನ್ನು ತಯಾರಿಸಿರಿ.

## ಲಿಂಗ ಪಕ್ಷಪಾತವಿಲ್ಲದ ಜಗತ್ತು

**ಕೆಳಗೆ ನೀಡಿರುವ ಟಿಪ್ಪಣಿಯನ್ನು ಓದಿರಿ.**

### ಮೇಲುಡುಗೆ ಹೋರಾಟ

ಮೇಲುಡುಗೆ ಹೋರಾಟವು ಉಡುಗೆ ಧರಿಸಲಿರುವ ಹಕ್ಕಿಗಾಗಿ ದಕ್ಷಿಣ ತಿರುವಾಂಕೂರಿನ ಸ್ತ್ರೀಯರು ಹತ್ತೊಂಬತ್ತನೇ ಶತಮಾನದ ಆರಂಭದಿಂದಲ್ಲಿ ನಡೆಸಿದ ಹೋರಾಟವಾಗಿದೆ. ದೀರ್ಘಕಾಲದ ಹೋರಾಟದ ಬಳಿಕ ಜಾತಿ-ಮತ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಇಷ್ಟವಿರುವ ಬಟ್ಟೆ ಧರಿಸಲಿರುವ ಹಕ್ಕನ್ನು ಒದಗಿಸಿಕೊಂಡು ತಿರುವಾಂಕೂರು ಸರಕಾರವು ಘೋಷಣೆಯನ್ನು ಹೊರಡಿಸಿತು. ಆದರೂ ಜಾತಿಗೆ ಸಂಬಂಧಿಸಿದ ಆಚಾರಗಳ ಹೆಸರಿನಲ್ಲಿ ಅನಂತರದ ಕಾಲದಲ್ಲೂ ಹೆಚ್ಚಿನವರಿಗೆ ಇಷ್ಟಪಟ್ಟ ಬಟ್ಟೆಯನ್ನು ಧರಿಸಲು ಸಾಧ್ಯವಾಗಲಿಲ್ಲ.

### ಕಲ್ಲುಮಾಲೆ ಹೋರಾಟ

ಕೆಳವರ್ಗದವರೆಂದು ಪರಿಗಣಿಸಲ್ಪಟ್ಟ ಪುಲಯ ವಿಭಾಗದ ಮಹಿಳೆಯರು ಜಾತಿಯ ಹೆಗ್ಗುರುತಾಗಿ ಕಲ್ಲು, ಗಾಜಿನ ಸೀಳು ಇತ್ಯಾದಿಗಳಿಂದ ತಯಾರಿಸಿದ ಮಾಲೆಗಳನ್ನು ನಿರ್ಬಂಧವಾಗಿ ಧರಿಸಬೇಕಿತ್ತು. ಇದಕ್ಕೆದುರಾಗಿ ಅಯ್ಯಂಕಾಳಿಯ ನೇತೃತ್ವದಲ್ಲಿ ಕೊಲ್ಲಂನ ಪೆರಿನಾಡಿನಲ್ಲಿ ನಡೆದ ದಂಗೆಯು ಕಲ್ಲುಮಾಲೆ ಹೋರಾಟವಾಗಿದೆ. ಇದನ್ನು 'ಪೆರಿನಾಡ' ದಂಗೆಯೆಂದೂ ಕರೆಯುತ್ತಾರೆ.

ಇವು ಜಾತಿ ತಾರತಮ್ಯದೊಂದಿಗೆ ಲಿಂಗ ತಾರತಮ್ಯವನ್ನು ಎದುರಿಸಿದ ಮಹಿಳೆಯರು ನಡೆಸಿದ ಐತಿಹಾಸಿಕ ಹೋರಾಟಗಳಿಗೆ ಉದಾಹರಣೆಗಳಾಗಿವೆ. ಇವರು ಸದಸ್ಯರಾಗಿದ್ದ ಪಡಿಯಚ್ಚುಗಳು ಮತ್ತು ಸಾಮಾಜಿಕ ರೂಢಿಗಳನ್ನು ಎದುರಿಸಿಕೊಂಡು ತಾರತಮ್ಯಗಳನ್ನು ಮೆಟ್ಟಿನಿಂತು ಬದುಕುಳಿದರು.




ಲಿಂಗ ತಾರತಮ್ಯಕ್ಕೆ ಸಂಬಂಧಿಸಿ ಮೇಲೆ ಕೊಟ್ಟಿರುವ ವಾರ್ತೆಗಳನ್ನು ಗಮನಿಸಿರಿ. ಈ ವಾರ್ತೆಗಳಿಂದ ನಿಮಗೆ ಯಾವ ಯಾವ ಮಾಹಿತಿಗಳು ಲಭಿಸುತ್ತವೆ?

ವಿವಿಧ ಲಿಂಗಗಳಲ್ಲಿ ಒಳಪಡುವವರಿಗೆ ಸಮಾನ ಸಂದರ್ಭಗಳು ಲಭಿಸುತ್ತವೆಯೆ? ಯಾವುದಾದರೂ ಪ್ರತ್ಯೇಕ ಲಿಂಗದವರಿಗೆ ಹೆಚ್ಚು ಹೆಚ್ಚು ಸಂದರ್ಭಗಳು ಕೆಲವು ವಲಯ ಗಳಲ್ಲಿ ಲಭಿಸುತ್ತವೆಯೆ?

ಲಿಂಗ ತಾರತಮ್ಯವು ಲಿಂಗ ಸಮಾನತೆಗೆ ತಡೆಯನ್ನುಂಟುಮಾಡುವ ಒಂದು ಪ್ರಧಾನ ಘಟಕವಾಗಿದೆ. ಲಿಂಗ ಪಕ್ಷಪಾತವೆಂದರೆ (Gender Discrimination) ಒಂದು ಲಿಂಗದ ಆಧಿಪತ್ಯಕ್ಕಾಗಿ ಇತರ ಲಿಂಗಗಳನ್ನು ನಿಗ್ರಹಿಸುವ ಪ್ರಕ್ರಿಯೆಯಾಗಿದೆ.

## ಸಂವಿಧಾನದಲ್ಲಿ ಲಿಂಗಪದವಿ

ಭಾರತದ ಸಂವಿಧಾನದ ವಿಧಿ 14, ಎಲ್ಲರೂ ಕಾನೂನಿನ ಮುಂದೆ ಸಮಾನರಾಗಿದ್ದಾರೆಂದು ಸ್ಪಷ್ಟಪಡಿಸುತ್ತದೆ. ಯಾವುದೇ ಒಬ್ಬ ವ್ಯಕ್ತಿಯು ಲಿಂಗ ಭೇದದ ಆಧಾರದಲ್ಲಿ ತಾರತಮ್ಯವನ್ನು ಅನುಭವಿಸಬಾರದೆಂದು ವಿಧಿ 15 ಪ್ರಸ್ತಾಪಿಸುತ್ತದೆ. ಲಿಂಗಭೇದದ ಜೊತೆಗೆ ಲಿಂಗ ಪದವಿಯು ವ್ಯಕ್ತಿಗಳ ಸಾಮಾಜಿಕ ಸ್ಥಾನಮಾನದ ಆಧಾರವಾಗಿದೆಯೆಂದು 2014 ರಲ್ಲಿ ಸುಪ್ರೀಂಕೋರ್ಟ್ ಹೇಳಿದೆ.

ಭಾರತದ ಸಂವಿಧಾನದ ವಿವಿಧ ವಿಧಿಗಳು ಲಿಂಗಪದವಿಗೆ ಸಂಬಂಧಿಸಿ ಸ್ವಾತಂತ್ರ್ಯಗಳ ಕುರಿತು ಸ್ಪಷ್ಟಪಡಿಸುತ್ತವೆ ಎಂದು 2014 ರಲ್ಲಿ ನಲ್ಸ *v/s* ಯೂನಿಯನ್ ಓಫ್ ಇಂಡಿಯಾದ ತೀರ್ಪಿನಲ್ಲಿ ಸುಪ್ರೀಂಕೋರ್ಟ್ ಘೋಷಿಸಿತು.

ಭಾರತದ ಸಂವಿಧಾನದಲ್ಲಿ ಲಿಂಗಪದವಿಗೆ ಸಂಬಂಧಿಸಿರುವ ಕೆಲವು ವಿಧಿಗಳನ್ನು ಪರಿಚಯಿಸೋಣ. ಪಟ್ಟಿಯನ್ನು ಗಮನಿಸಿರಿ.

| | |
|---|---|
| ವಿಧಿ 14 | ಎಲ್ಲಾ ಲಿಂಗದವರಿಗೂ ಸಮಾನ ಹಕ್ಕು. |
| ವಿಧಿ 15 | ಯಾವನೇ ಒಬ್ಬ ವ್ಯಕ್ತಿಗೆ ಲಿಂಗಪದವಿಯ ಆಧಾರದಲ್ಲಿ ತಾರತಮ್ಯ ಉಂಟಾಗಬಾರದು. |
| ವಿಧಿ 16 | ಎಲ್ಲಾ ಲಿಂಗದವರಿಗೂ ಸಮಾನ ಅವಕಾಶಗಳು. |
| ವಿಧಿ 19 19 (1) (a) | ಎಲ್ಲಾ ಲಿಂಗದವರಿಗೂ ಸ್ವತಂತ್ರವಾಗಿ ವೇಷಭೂಷಣ, ವರ್ತನಾರೀತಿ, ಕೆಲಸ ಇತ್ಯಾದಿಗಳ ಮೂಲಕ ಲಿಂಗಪದವಿಯನ್ನು ಪ್ರಕಟಪಡಿಸಲು ಹಕ್ಕು ಇದೆ. |
| ವಿಧಿ 21 | ಎಲ್ಲಾ ಲಿಂಗದವರಿಗೂ ಘನತೆಯ ಜೀವನಕ್ಕೂ ವ್ಯಕ್ತಿ ಸ್ವಾತಂತ್ರ್ಯಕ್ಕೂ ಖಾಸಗಿತನಕ್ಕೂ ಹಕ್ಕಿದೆ. |
| ವಿಧಿ 51 51A (e) | ಸ್ತ್ರೀಯರ ಘನತೆಗೆ ಧಕ್ಕೆಯನ್ನುಂಟುಮಾಡುವ ಆಚಾರಗಳನ್ನು ತ್ಯಜಿಸಬೇಕಾದುದು ಭಾರತೀಯ ಪೌರನ ಮೂಲಭೂತ ಕರ್ತವ್ಯವಾಗಿದೆ. |

ಇದೆಲ್ಲವೂ ಕಡ್ಡಾಯವಾಗಿಯೂ ಜಾರಿಯಲ್ಲಿರಬೇಕಾದ ಒಂದು ನ್ಯಾಯಯುತ ಸಮಾಜವು (Just society) ರಾಷ್ಟ್ರದಲ್ಲಿರಬೇಕೆಂಬ ದೃಢ ನಿಲುವನ್ನು ನಮ್ಮ ಸಂವಿಧಾನವು ಸ್ವೀಕರಿಸಿಕೊಂಡಿದೆ. ಆದರೆ ಇಂತಹ ಒಂದು ನ್ಯಾಯಯುತ ಸಮಾಜದಲ್ಲಿ ಲಭಿಸಬೇಕಾದ ಎಲ್ಲಾ ಪ್ರಯೋಜನಗಳು, ಸೌಲಭ್ಯಗಳು ಸಮಾನವಾಗಿ ಎಲ್ಲಾ ಲಿಂಗದವರಿಗೆ ಲಭಿಸುತ್ತಿದೆಯೆ?

ಲಿಂಗ ತಾರತಮ್ಯವನ್ನು ನಿವಾರಿಸಲು, ಸಂವಿಧಾನಾತ್ಮಕವಾದ ಸಮಾನತೆ ಮತ್ತು ಸ್ವಾತಂತ್ರ್ಯ ಎಲ್ಲಾ ಲಿಂಗದ ವ್ಯಕ್ತಿಗಳಿಗೂ ಲಭಿಸಲು ಏನನ್ನು ಮಾಡಲು ಸಾಧ್ಯ? ತರಗತಿಯಲ್ಲಿ ಚರ್ಚಿಸಿರಿ.

ಚರ್ಚಾ ಸೂಚಕಗಳು :

- ಲಿಂಗ ಸಮತ್ವವನ್ನು ಪ್ರೋತ್ಸಾಹಿಸುವ ಶಿಕ್ಷಣ
- ಲಿಂಗ ಪಡಿಯಚ್ಚು ಮಾದರಿಗಳನ್ನು ಎದುರಿಸುವುದು.
- ಲಿಂಗ ಪಡಿಯಚ್ಚುಗಳನ್ನು ಪ್ರೋತ್ಸಾಹಿಸುವ ಸಾಮಾಜಿಕ ರೂಢಿಗಳನ್ನು ಎದುರಿಸುವುದು.
- ಲಿಂಗ ಪದವಿಯನ್ನು ಒಳಗೊಂಡಿರುವ ಮತ್ತು ಸಮಾನತೆಯನ್ನು ಖಾತರಿಪಡಿಸುವ ಕೆಲಸದ ಸ್ಥಳಗಳು

ಅಸಮಾನತೆಗಳಿಲ್ಲದ ಒಂದು ನ್ಯಾಯಯುತ ಸಮಾಜವನ್ನು ನಮ್ಮ ಸಂವಿಧಾನವು ಪರಿಕಲ್ಪನೆ ಮಾಡುತ್ತದೆ. ಸಮಾನ ನ್ಯಾಯನೀತಿಯಿರುವ ಒಂದು ಸಮಾಜದ ನೆಲೆನಿಲ್ಲುವಿಕೆಗಾಗಿ ಎಲ್ಲಾ ಲಿಂಗದವರನ್ನೂ ಸಮಾನವಾಗಿ ಪರಿಗಣಿಸುವುದಕ್ಕಾಗಿ ಕೆಲವೊಂದು ಪ್ರಯತ್ನಗಳನ್ನು ನಡೆಸಬೇಕು. ಈ ಸಂಯೋಜಿತ (Inclusion) ಪ್ರಕ್ರಿಯೆಯಲ್ಲಿ ಸಮಾಜದ ಪ್ರತಿಯೋರ್ವ ಸದಸ್ಯನೂ ಸಹಭಾಗಿಯಾಗಬೇಕಾದುದು ಒಂದು ಸಮಾಜದ ಜವಾಬ್ದಾರಿಯಾಗಿದೆ.

## ಮುಂದುವರಿದ ಚಟುವಟಿಕೆಗಳು

- ಲಿಂಗ ತಾರತಮ್ಯಕ್ಕೆದುರಾಗಿ ಹೋರಾಡಿದ ಮಹಿಳೆಯರ ಅನುಭವ ಕಥೆಗಳನ್ನು ಸಂಗ್ರಹಿಸಿ ಒಂದು ಡಿಜಿಟಲ್ ಆಲ್ಬಂ ತಯಾರಿಸಿರಿ.
- ಲಿಂಗ ತಾರತಮ್ಯಕ್ಕೆದುರಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಡೆಸಿದ ಹೋರಾಟಗಳ ಕುರಿತು ವಾರ್ತೆಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

# ಟಿಪ್ಪಣಿಗಳು

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರ ಧ್ವಜವನ್ನು ಮತ್ತು ರಾಷ್ಟ್ರ ಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ. ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in